ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 28 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 280 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬೆಂಗಳೂರು ಅರಮನೆ ವಿವಾದ

ಕೋರ್ಟ್ ಆದೇಶದಿಂದ ಬಚಾವಾಗುವ ಸಲುವಾಗಿ ಸರ್ಕಾರ ಸುಗ್ರೀವಾಜ್ಞೆ ತರುತ್ತಿದೆ

- ಸಂಸದ ಯದುವೀರ ಬೇಸರ
- ಕಾನೂನು ಸಮರಕ್ಕೆ ನಿರ್ಧಾರ


ಯದುವೀರ್

ಮೈಸೂರು: ಬೆಂಗಳೂರು ಅರಮನೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಆದೇಶ ಪಾಲಿಸುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಗ್ರೀವಾಜ್ಞೆ ತರಲು ಹೊರಟಿರುವ ರಾಜ್ಯ ಸರ್ಕಾರ ಪ್ರಕರಣದ ದಿಕ್ಕು ತಪ್ಪಿಸುತ್ತಿದೆ ಎಂದು ಮೈಸೂರು ರಾಜ ವಂಶಸ್ಥರೂ ಆದ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪಿಸಿದ್ದಾರೆ. ಈ ಸಂಬಂಧ ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ನಮಗೆ ಪರಿಹಾರವಾಗಿ ಟಿಡಿಆರ್ ಕೊಡುವುದರಿಂದ ಸರ್ಕಾರದ ಖಜಾನೆಗೆ ಭಾರಿ ಹೊರೆಯಾಗುತ್ತದೆ ಎಂದು ಹೇಳುವ ಮೂಲಕ ದಿಕ್ಕು ತಪ್ಪಿಸಲಾಗುತ್ತಿದೆ. ವಾಸ್ತವವಾಗಿ ನಮಗೆ ಪರಿಹಾರದ ■ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿ, ಸಚಿವ ಬೈರತಿ ಸುರೇಶ್‌ಗೆ ನೀಡಿದ್ದ ಇಡಿ ನೋಟಿಸ್‌ಗೆ ಹೈಕೋರ್ಟ್ ತಡೆ

ಸದ್ಯ ರಿಲೀಫ್

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ(ಇಡಿ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಮತ್ತು ಸಚಿವ ಬೈರತಿ ಸುರೇಶ್ ಅವರಿಗೆ ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ಏಕ ಸದಸ್ಯ ಪೀಠ ಸೋಮವಾರ ತಡೆ ನೀಡಿದೆ.

ಇಡಿ ನೋಟಿಸ್ ನೀಡುತ್ತಿದ್ದಂತೆ ಪಾರ್ವತಿ ಸಿದ್ದರಾಮಯ್ಯ ಮತ್ತು ಬೈರತಿ ಸುರೇಶ್ ಅವರು ಇದನ್ನು ಪ್ರಶ್ನಿಸಿ ಧಾರವಾಡ ಏಕಸದಸ್ಯ ಪೀಠಕ್ಕೆ ಎರಡು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ, ಫೆಬ್ರವರಿ 10ರವರೆಗೆ ಇಡಿ ನೀಡಿದ್ದ ನೋಟಿಸ್‌ಗೆ ತಡೆ ನೀಡಿದ್ದಾರೆ. ಈ ಎರಡೂ ನೋಟಿಸ್‌ಗಳಿಗೂ ಮಧ್ಯಂತರ ತಡೆ ನೀಡಿರುವ ಹೈಕೋರ್ಟ್, ವಿಚಾರಣೆಯನ್ನು ಫೆ10ಕ್ಕೆ ಮುಂದೂಡಿದೆ.

ಈರ್ವರಿಗೂ ನೋಟಿಸ್: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಬಿಡಿ ನಿವೇಶನ ಹಂಚಿಕೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ.) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ನೋಟಿಸ್ ಜಾರಿ ಮಾಡಿತ್ತು.

ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಇಬ್ಬರಿಗೂ ನೋಟಿಸ್ ನೀಡುವುದಲ್ಲದೆ, ಇದೇ 28ರ ಮಧ್ಯಾಹ್ನ 3 ಗಂಟೆಗೆ ಖುದ್ದು ಹಾಜರಾಗುವಂತೆಯೂ ಇ.ಡಿ. ಸೂಚಿಸಿತ್ತು. ಪ್ರಕರಣದ ತನಿಖಾಧಿಕಾರಿ ಮುರಳಿಕೃಷ್ಣ ಅವರು ಜನವರಿ 24ರಂದು ಪಾರ್ವತಿ ಹಾಗೂ ಸುರೇಶ್ ಅವರಿಗೆ ನೋಟಿಸ್ ನೀಡಿದ್ದರು. ನೋಟಿಸ್ ಪ್ರಶ್ನಿಸಿ ಇಬ್ಬರು ಆರೋಪಿಗಳು ನ್ಯಾಯಾಲಯದ ಮೆಟ್ಟಿಲೇರಿದ್ದರು. ಪಾರ್ವತಿ ಅವರಿಗೆ ಜ.3ರಂದು ಇ.ಡಿ. ನೋಟಿಸ್ ನೀಡಿ, ಜನವರಿ 9ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು. ಇದಕ್ಕೆ ತಮ್ಮ ವಕೀಲರ ■ 6ನೇ ಪುಟಕ್ಕೆ


ಶ್ರೀಮತಿ ಪಾರ್ವತಿ


ಬೈರತಿ ಸುರೇಶ್

ಸಿಎಂ ಪತ್ನಿ ಪಾರ್ವತಿ, ಬೈರತಿ ಸುರೇಶ್‌ಗೆ ಇಡಿ ನೋಟಿಸ್ ರಾಜಕೀಯ ಪ್ರೇರಿತ

ಬೆಂಗಳೂರು,ಜ.27(ಕೆಎಂಶಿ)– ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ.) ರಾಜಕೀಯ ಪಿತೂರಿಯಿಂದ ನೋಟಿಸ್ ನೀಡಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ವಿರುದ್ಧದ ಪ್ರಕರಣದಲ್ಲೂ ಹೀಗೆ ಆಗಿತ್ತು. ಒಂದು ಪ್ರಕರಣವನ್ನು ಒಂದೇ ಸಮಯದಲ್ಲಿ ಎರಡು ಸಂಸ್ಥೆಗಳು ತನಿಖೆ ನಡೆಸಲು ಸಾಧ್ಯವಿಲ್ಲ ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಒಳಗೊಂಡ ಮುಡಾ ನಿವೇಶನ ಹಗರಣ: ಸಿಬಿಐ ತನಿಖೆಗೆ ವಹಿಸಬೇಕೇ... ಬೇಡವೇ... ಸುದೀರ್ಘ ವಿಚಾರಣೆ ಬಳಿಕ

ತೀರ್ಪು ಕಾಯ್ದಿರಿಸಿದ ಹೈಕೋರ್ಟ್






ಬೆಂಗಳೂರು,ಜ.27(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಬಿಡಿ ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಾಲಯ ತೀರ್ಪನ್ನು ಕಾಯ್ದಿರಿಸಿದೆ.

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ರಿಟ್ ಅರ್ಜಿ ಮೇಲಿನ ಮುಂದುವರೆದ ವಿಚಾರಣೆಯನ್ನು ಕೈಗೆತ್ತಿಕೊಂಡ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು, ಇಡೀ ದಿನ ವಾದ–ಪ್ರತಿವಾದ ಆಲಿಸಿ, ತೀರ್ಪು ಕಾಯ್ದಿರಿಸಿದರು. ಅಲ್ಲದೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನಡೆಸಿದ ಇದುವರೆಗಿನ ತನಿಖಾ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಅಂತಿಮ ತನಿಖಾ ವರದಿ ಸಲ್ಲಿಕೆಗೆ ಗಡುವು ವಿಸ್ತರಿಸಿ ಆದೇಶಿಸಿತು. ಇದಕ್ಕೂ ಮುನ್ನ, ದೂರುದಾರ ಸ್ನೇಹಮಯಿ ಕೃಷ್ಣ ಪರ ವಕೀಲ ಮಣೀಂದರ್ ಸಿಂಗ್ ವಾದ ಮಂಡಿಸಿ, ಮುಡಾ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂಬ ಅರ್ಜಿ ವಿಚಾರಣೆ ವೇಳೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾದ ಮಂಡನೆ ಆಲಿಸುವ ಅಗತ್ಯವಿಲ್ಲ ಎಂದರು.

ತನಿಖೆ ಬಗ್ಗೆ ಆರೋಪಿ ಕೇಳುವಂತಿಲ್ಲ: ಶಂಕಿತ ಆರೋಪಿ ತನಿಖಾ ತಂಡ ಆಯ್ಕೆ ಮಾಡಬಾರದು, ಈ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪುಗಳಿವೆ. ಸ್ಥಳೀಯ ಪೊಲೀಸರಿಂದ ತನಿಖೆ ನಡೆದರೆ ನ್ಯಾಯ ದೊರೆಯುವುದು ಸಾಧ್ಯವಿಲ್ಲ, ತನಿಖೆಯನ್ನು ಸಿಬಿಐಗೆ ವಹಿಸಬಹುದು ಎಂಬುದಾಗಿ ಹೇಳಿ ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿದರು. ■ 6ನೇ ಪುಟಕ್ಕೆ

ಮೈಕ್ರೋ ಫೈನಾನ್ಸ್ ಕಿರುಕುಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಿ


ಕೃಷ್ಣಬೈರೇಗೌಡ

ಬೆಂಗಳೂರು: ಮೈಕ್ರೋ ಫೈನಾನ್ಸ್ ಕಿರುಕುಳ ತಪ್ಪಿಸಲು ಇನ್ನೊಂದು ವಾರದಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಜೊತೆ ಸಭೆ ಮಾಡಿ ಎಚ್ಚರಿಕೆ ಕೊಡಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಡಿಸಿ–ಎಸ್ಪಿಗಳಿಗೆ ಸೂಚನೆ ನೀಡಿದ್ದಾರೆ. ವಿಕಾಸಸೌಧದಲ್ಲಿ ಸಿಎಂ ಸೂಚನೆ ಮೇರೆಗೆ ಎಲ್ಲಾ ಡಿಸಿ ಹಾಗೂ ಎಸ್ಪಿಗಳ ಜೊತೆ ಸಚಿವರು ಸಭೆ ನಡೆಸಿ, ಡಿಸಿ–ಎಸ್ಪಿಗಳಿಗೆ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿದರು. ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮೈಕ್ರೋ ಫೈನಾನ್ಸ್‌ಗಳ ಕಿರುಕುಳಕ್ಕೆ ಕಡಿವಾಣ ಹಾಕಲು ಸಿಎಂ ಸೂಚನೆ ಕೊಟ್ಟಿದ್ದರು. ಹೀಗಾಗಿ ಈ ವಾರದಲ್ಲಿ ಡಿಸಿ, ಎಸ್ಪಿಗಳು ಫೈನಾನ್ಸ್ ಸಂಸ್ಥೆಗಳ ಜೊತೆ ಸಭೆ ಮಾಡಬೇಕು ಎಂದು ತಿಳಿಸಿದ್ದರು. ಆರ್‌ಬಿಐ ನಿಯಮಗಳನ್ನು ಉಲ್ಲಂಘನೆ ಮಾಡದಂತೆ ಎಚ್ಚರ ಕೊಡಬೇಕು. ಅತಿ ರೇಕದ ಸಾಲ ಪಾವತಿ ಕ್ರಮ ತೆಗೆದುಕೊಂಡರೆ ಕೇಸ್ ದಾಖಲು ಮಾಡುವಂತೆ ಸೂಚನೆ ನೀಡಬೇಕು ಎಂದು ಹೇಳಿದರು. ಫೈನಾನ್ಸ್ ಕಂಪನಿಗಳು ಯದ್ವಾತದ್ವಾ ಸಾಲ ಕೊಡುತ್ತಿದ್ದಾರೆ. 2 ಲಕ್ಷ ರೂ. ಮೇಲ್ಪಟ್ಟು ಸಾಲ ಕೊಡಬಾರದು. ಇದು ಆರ್‌ಬಿಐ ನಿಯಮ. ಬೇಜವಾಬ್ದಾರಿಯಾಗಿ ಸಾಲ ಕೊಡುವುದು ನಿಯಂತ್ರಣ ಮಾಡಬೇಕು ಎಂದು ಸೂಚನೆ ನೀಡಿದ್ದೇವೆ ಎಂದು ತಿಳಿಸಿದರು.

ಸರ್ಕಾರದ ತಾಕೀತ್‌ಗೆ ಕಿಮ್ಮತ್ತಿಲ್ಲ; ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ

ನಂಜನಗೂಡು ತಾಲೂಕಲ್ಲಿ ಇಬ್ಬರು ಆತ್ಮಹತ್ಯೆ

- ರೈತ ಮಹಿಳೆ ಹೊಲದಲ್ಲಿ ವಿಷ ಸೇವಿಸಿದರೆ; ಕೂಲಿಕಾರ ನೇಣು ಬಿಗಿದುಕೊಂಡು ಸಾವು
- ಐದು ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಎಫ್‌ಐಆರ್

ನಂಜನಗೂಡು/ಮಲ್ಲುಂಡಿ,ಜ.27–ಮೈಕ್ರೋ ಫೈನಾನ್ಸ್ ಏಜೆಂಟರ ಕಿರುಕುಳದಿಂದಾಗಿ ಪ್ರತ್ಯೇಕ ಪ್ರಕರಣಗಳಲ್ಲಿ ಮಹಿಳೆ ಸೇರಿ ಇಬ್ಬರು ಆತ್ಮಹತ್ಯೆಗೆ ಶರಣಾದ ಘಟನೆ ನಂಜನಗೂಡು ತಾಲೂಕಿನಲ್ಲಿ ನಡೆದಿದೆ.

ತಾಲೂಕಿನ ಅಂಬಳೆ ಗ್ರಾಮದ ಜಯಶೀಲ (53) ಮತ್ತು ಮಲ್ಲುಂಡಿ ಗ್ರಾಮದ ಕೃಷ್ಣಮೂರ್ತಿ (35) ಆತ್ಮಹತ್ಯೆಗೆ ಶರಣಾದವರಾಗಿದ್ದು, ಈ ಸಂಬಂಧ ಹುಲ್ಲಹಳ್ಳಿ ಠಾಣೆ ಪೊಲೀಸರು ಒಟ್ಟು 7 ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಜಯಶೀಲ: ಅಂಬಳೆ ಗ್ರಾಮದ ಜಯಶೀಲ ಅವರು ಐಐಎಫ್‌ಎಲ್ ಸಮಸ್ತ ಮತ್ತು ಫೈವ್ ಸ್ಟಾರ್ ಮೈಕ್ರೋ ಫೈನಾನ್ಸ್‌ಗಳಲ್ಲಿ 3 ಲಕ್ಷ ರೂ. ಸಾಲ ಪಡೆದಿದ್ದು, ಇದರ ಬಾಬ್ತು ತಿಂಗಳಿಗೆ 8500 ರೂ. ಹಾಗೂ ಇದೇ ಫೈನಾನ್ಸ್‌ಗಳಿಂದ ಮತ್ತೊಮ್ಮೆ 60 ಸಾವಿರ ಸಾಲ ಪಡೆದು ತಿಂಗಳಿಗೆ 3150 ರೂ. ಅಲ್ಲದೆ ಮಗಳ ಹೆಸರಿನಲ್ಲೂ ಕೂಡ ಸಾಲ ಪಡೆದಿದ್ದರು ಎನ್ನಲಾಗಿದ್ದು, ಇವರು ಒಟ್ಟಾರೆ ತಿಂಗಳಿಗೆ 15 ಸಾವಿರ ರೂ.ಗಳನ್ನು ಮೈಕ್ರೋ ಫೈನಾನ್ಸ್‌ಗಳಿಗೆ ಪಾವತಿಸಬೇಕಿತ್ತು. ಈ ಮಧ್ಯೆ ಸಾಲ ಪಡೆದು ಇವರು ಖರೀದಿಸಿದ್ದ ಹಸು ಸಾವನ್ನಪ್ಪಿದ್ದು, ಹೈನುಗಾರಿಕೆ ಮೂಲಕ ಬರುತ್ತಿದ್ದ ಆದಾಯ ಸ್ಥಗಿತಗೊಂಡಿದೆ. ಅಲ್ಲದೆ, ವ್ಯವಸಾಯದಿಂದ ಬರುತ್ತಿದ್ದ ಆದಾಯವೂ ಸಾಲದ ಕಂತು ಕಟ್ಟಲು ಸಾಕಾಗದೇ ■ 6ನೇ ಪುಟಕ್ಕೆ


ಜಯಶೀಲ


ಕೃಷ್ಣಮೂರ್ತಿ

ಸುತ್ತೂರು ಶ್ರೀಕ್ಷೇತ್ರದಲ್ಲಿ ಅದ್ದೂರಿ ಸಾಮೂಹಿಕ ವಿವಾಹ ಮಹೋತ್ಸವ

ಬದುಕಿನ ಸವಾಲುಗಳನ್ನು ಮೆಟ್ಟಿ ನಿಲ್ಲುವ ಭಾರತದ ಆದರ್ಶ ದಂಪತಿಗಳು ವಿಶ್ವಕ್ಕೆ ಮಾದರಿ: ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅಭಿಪ್ರಾಯ

- ವೈವಾಹಿಕ ಜೀವನಕ್ಕೆ ಕಾಲಿಟ್ಟ 155 ಜೋಡಿಗಳು
- ಸಮಾಜಮುಖಿಯಾದ ಸುತ್ತೂರಿನ ತ್ರಿವಿಧ ದಾಸೋಹ


ಮೈಸೂರಿನ ಶ್ರೀ ಕ್ಷೇತ್ರ ಸುತ್ತೂರಿನ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ನಡೆದ ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ನೂತನ ವಧುವರರನ್ನು ಕಾಣಬಹುದು.

ಮೈಸೂರು, ಜ.27(ಬಿಎಲ್‌ಯು)– ಬದುಕಿನಲ್ಲಿ ಎದುರಾಗುವ ಕಷ್ಟ ಸುಖ, ಸವಾಲುಗಳನ್ನು ಮೆಟ್ಟಿ ನಿಂತು ಒಂದಾಗಿ ಬಾಳುವ ಭಾರತದ ಆದರ್ಶ ದಂಪತಿ ಇಡೀ ವಿಶ್ವಕ್ಕೆ ಮಾದರಿ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನ ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಇಂದು ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಂದಾಗಿ ಬಾಳುವ ಭಾರತೀಯರ ಈ ವಿಶಿಷ್ಟ ಗುಣಕ್ಕೆ ಜಗತ್ತು ಮಾರುಹೋಗಿದೆ ಎಂದರು. ಆದರ್ಶ ದಂಪತಿಗಳಿರುವ ಭಾರತದ ಮಹಿಮೆಗೆ ವಿಶ್ವ ಬೆರಗಾಗಿದೆ. ಇದರಿಂದ ಶಿಕ್ಷಣ ಸೇರಿದಂತೆ ಹಲವು ವಿಚಾರಗಳಿಗಾಗಿ ವಿಶ್ವದ ಹಲವು ದೇಶದ ಜನರು ಭಾರತಕ್ಕೆ ಬರುತ್ತಾರೆ ಎಂದು ಹೇಳಿದರು. 155 ಜೋಡಿಗಳ ವಿವಾಹವನ್ನು ಒಂದೇ ಬಾರಿ ಮಾಡಿಸುವುದು ಕಷ್ಟದ ಕೆಲಸ. ಆದರೂ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಪ್ರತಿ ವರ್ಷ ಸಾಮೂಹಿಕ ವಿವಾಹ ನಡೆಸುತ್ತಾ ಬಂದಿದ್ದಾರೆ. ಈಗ ಮಾತ್ರವಲ್ಲದೆ ಪ್ರತಿ ತಿಂಗಳು ಕೂಡ ಇಂತಹ ವಿವಾಹ ಕಾರ್ಯಕ್ರಮ ಸುತ್ತೂರಿನಲ್ಲಿ ನಡೆಯುತ್ತದೆ. ಸುತ್ತೂರಿನ ಈ ನೆಲದಲ್ಲಿ ಹಲವು ಸ್ವಾಮೀಜಿಗಳು ತಪಸ್ಸು ಮಾಡಿದ ಕಾರಣ ಇದು ಸಾಧ್ಯವಾಗಿದೆ ಎಂದು ಪ್ರಹ್ಲಾದ್ ಜೋಷಿ ಅಭಿಪ್ರಾಯಪಟ್ಟರು.

ಯಾವ ಜಾತಿ, ಧರ್ಮದ ಭೇದವಿಲ್ಲದೆ ಒಂದೇ ವೇದಿಕೆಯಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಿ ದಂಪತಿ ಇಂದು ಸತಿಪತಿಗಳಾಗಿದ್ದಾರೆ. ಈ ಮೂಲಕ ಈ ನೆಲ ಜಾತ್ಯಾತೀತ ಹಾಗೂ ಧರ್ಮಾತೀತತೆಯನ್ನು ಸಾರಿ ಹೇಳುತ್ತಿದೆ ಎಂದರು. ಸುತ್ತೂರು ವಸತಿ ಶಾಲೆಯಲ್ಲಿ ಓದಿ ಉನ್ನತ ಶಿಕ್ಷಣ ಪಡೆದು ಪ್ರಾಧ್ಯಾಪಕ ಸೇರಿದಂತೆ ಹಲವು ವೃತ್ತಿಗೆ ಸೇರಿರುವ ಬಹಳಷ್ಟು ಜನರು ಇಂದು ವಿವಾಹವಾಗುತ್ತಿದ್ದಾರೆ. ಬಡವ ಶ್ರೀಮಂತ ಎಂಬ ಭೇದ ಭಾವವಿಲ್ಲದೆ ಸತಿಪತಿಗಳಾಗಿದ್ದಾರೆ ಎಂದು ಹೇಳಿದರು. ತತ್ವ ಹೇಳಿದರೂ ಆಚರಣೆ ಕಡಿಮೆ, ಮಾತು ಆಡಿದರೂ ಕೃತಿ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ತಾತ್ವಿಕ ಶಕ್ತಿ ಮೈಗೂಡಿಸಿಕೊಂಡು ಮಠದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದೆ. ಸುತ್ತೂರು ಮಠದಲ್ಲಿ ಅನ್ನ, ಶಿಕ್ಷಣ ಹಾಗೂ ಜ್ಞಾನ ತ್ರಿವಿಧ ದಾಸೋಹದಿಂದ ಸಮಾಜ ಬೆಳವಣಿಗೆ ಸಾಧಿಸುತ್ತಿದೆ ಎಂದು ಪ್ರಹ್ಲಾದ್ ಜೋಷಿ ಹೇಳಿದರು.

ಈ ವೇಳೆ ಮಾತನಾಡಿದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಡಾ.ಶ್ರೀ ಕಲ್ಲಯ್ಯಜ್ಜನವರು, ಇವತ್ತಿನ ದಿನದಲ್ಲಿ ಒಂದು ಮದುವೆ ಮಾಡಲು ಲಕ್ಷಾಂತರ ರೂಪಾಯಿ ಹಣದ ಅವಶ್ಯವಿದೆ. ಇಂತಹ ■ 6ನೇ ಪುಟಕ್ಕೆ

ಜಾತಿ, ಧರ್ಮದ ಭೇದ–ಭಾವವಿಲ್ಲದೆ ಸಮಾನತೆ ಸಾರುವ ಸಾಮೂಹಿಕ ವಿವಾಹ

ಮೈಸೂರಿನ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಇಂದು ನಡೆದ ಸಾಮೂಹಿಕ ವಿವಾಹ ಹಲವು ವಿಶಿಷ್ಟತೆಗೆ ಸಾಕ್ಷಿಯಾಯಿತು. ಜಾತಿ, ಧರ್ಮ, ಪಂಥ, ರಾಜ್ಯ ಎಂಬ ಭೇದ ಭಾವವಿಲ್ಲದೆ 155 ಜೋಡಿಗಳು ಇಂದು ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಪರಿಶಿಷ್ಟ ಜಾತಿಯ 84, ಪರಿಶಿಷ್ಟ ಪಂಗಡದ 22, ಹಿಂದುಳಿದ ವರ್ಗದ 22, ಅಂತರಜಾತಿಯ 23, ವೀರಶೈವ ಲಿಂಗಾಯಿತ 3, ಅಂತರ ಧರ್ಮದ 1 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಇವರಲ್ಲಿ ವಿಶೇಷಚೇತನರ 3, ಮರು ಮದುವೆಯ 1 ಹಾಗೂ ತಮಿಳುನಾಡಿನ 17 ಜೋಡಿಗಳು ಸತಿಪತಿಗಳಾದರು. ಆಂಧ್ರದ ಚಿಕ್ಕಬಳ್ಳಾಪುರದ ನಂದೀಶ್ ಮತ್ತು ಮಹದೇವಮ್ಮ, ಗದಗ ಜಿಲ್ಲೆಯ ಸೋಮಣ್ಣ ಮತ್ತು ಗೀತಾ ಅವರು ಕೂಡ ಇಂದು ವಿವಾಹವಾದರು. ಈ ಮೂಲಕ ಕತ್ತಲಾಗಿದ್ದ ಅವರ ಬಾಳಿಗೆ ಒಬ್ಬರಿಗೊಬ್ಬರು ಬೆಳಕಾದರು.

ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ವಾಗ್ದಾಳಿ



ಮೈಸೂರು, ಜ.27 (ಆರ್‌ಕೆ)–ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿರುವುದರಿಂದ ಮೈಕ್ರೋ ಫೈನಾನ್ಸ್ ದಂಧೆ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಿಸಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಕಳೆದಿದೆ. ಆದರೆ ಅಭಿವೃದ್ಧಿ ಕಾರ್ಯ ಕುಂಠಿತವಾಗುತ್ತಿದ್ದು, ದಿನೇ ದಿನೆ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಆ ಕಾರಣಕ್ಕಾಗಿಯೇ ಈ ರೀತಿಯ ಪ್ರಕರಣಗಳು ಹೆಚ್ಚಾಗುತ್ತಿವೆ. ನೋಂದಾಯಿತ ಮೈಕ್ರೋ ಫೈನಾನ್ಸ್‌ಗಳು ಆರ್‌ಬಿಐ ಮಾರ್ಗಸೂಚಿಗೆ ಒಳಪಡಬೇಕು. ಕಾನೂನು ಕೈಗೆ ತೆಗೆದುಕೊಳ್ಳುವವರ ವಿರುದ್ಧ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪೊಲೀಸರಿಗೆ ಅಧಿಕಾರ ಕೊಟ್ಟು, ಅದರಲ್ಲಿ ಮಧ್ಯೆ ಪ್ರವೇಶಿಸುವುದು ಸರಿಯಲ್ಲ ಎಂದರು.

ಆರ್‌ಬಿಐ ಮಾರ್ಗಸೂಚಿಯಲ್ಲಿ ಇಂತಿಷ್ಟೇ ಬಡ್ಡಿ ಪಡೆಯಬೇಕು ಎಂಬ ನಿಯಮವಿದೆ. ಫೈನಾನ್ಸ್ ಕಂಪನಿಗಳು ಪೊಲೀಸರ ರಕ್ಷಣೆ ಪಡೆದು ಜನರಿಗೆ ತೊಂದರೆ ಕೊಡುತ್ತಿದ್ದಾರೆ ಎಂಬ ಮಾಹಿತಿ ಇದೆ. ಪೊಲೀಸರ ಮೇಲೆ ನಾನು ಆರೋಪ ಮಾಡುವುದಿಲ್ಲ. ಆದರೆ ಇದಕ್ಕೆ ಕಠಿಣ ಕಾನೂನುಗಳನ್ನು ಜಾರಿಗೊಳಿಸಿ ನಿಯಂತ್ರಣಗೊಳಿಸದಿದ್ದರೆ ಜನಸಾಮಾನ್ಯರು ಬದುಕುವುದು ಕಷ್ಟವಾಗುತ್ತದೆ ಎಂದ ಜೋಶಿ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಏನೇ ಆದರೂ ಹಿಂದಿನ ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ಮೇಲೆ ಆರೋಪ ಹೊರಿಸುತ್ತಾರೆ. ಮಳೆ ಹೆಚ್ಚಾದರೂ ಅಥವಾ ಕಡಿಮೆಯಾದರೂ ಬಿಜೆಪಿಯೇ ಕಾರಣ ಎನ್ನುತ್ತಾರೆ. ಈ ರೀತಿಯ ಬಾಲಿಶ ಹೇಳಿಕೆಗಳನ್ನು ಕೊಡುವುದನ್ನು ಕಾಂಗ್ರೆಸ್‌ನವರು ಬಿಡಬೇಕು. ಜನರು ಅಧಿಕಾರ ಕೊಟ್ಟಿದ್ದಾರೆ. ಅದನ್ನು ಬಳಸಿಕೊಂಡು ಜನರಿಗೆ ಒಳ್ಳೆಯ ಕೆಲಸಗಳನ್ನು ಮಾಡಿ ಎಂದು ತಿಳಿಸಿದರು.

ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಾದ ಅನಿವಾರ್ಯತೆ

ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾನಿಲಯದ ಪ್ರಾಂಶುಪಾಲರಾದ ಗೀತಾಂಬ ಅಭಿಮತ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ದೈಹಿಕ ಶಿಕ್ಷಕರಿಗಾಗಿ ಆಯೋಜಿಸಿದ್ದ 'ಸೈಕಲ್ ಪೋಲೊ, ಜಿಮ್ನಾಷಿಯಂ, ಕತ್ತಿವರಸೆ ಹಾಗೂ ಯೋಗ' ಕುರಿತ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರವನ್ನು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾನಿಲಯದ ಪ್ರಾಂಶುಪಾಲರಾದ ಗೀತಾಂಬ ಉದ್ಘಾಟಿಸಿದರು.

ಮೈಸೂರು,ಜ.27(ಎಂಟಿವೈ)– ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಶಿಕ್ಷಣ ಅಗತ್ಯವಾಗಿರುವುದರಿಂದ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಾದ ಅನಿವಾರ್ಯತೆ ಇದೆ ಎಂದು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾನಿಲಯದ ಪ್ರಾಂಶುಪಾಲರಾದ ಗೀತಾಂಬ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶಾಲಾ ಶಿಕ್ಷಣ ಇಲಾಖೆ, ಡಿಡಿಪಿಐ ಕಚೇರಿ, ಕರ್ನಾಟಕ ರಾಜ್ಯ ಸೈಕಲ್ ಪೋಲೊ ಅಸೋಸಿಯೇಷನ್, ಮಹಾರಾಜ ಎಜುಕೇಷನ್ ಟ್ರಸ್ಟ್, ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ವತಿಯಿಂದ ಸೋಮವಾರ ದೈಹಿಕ ಶಿಕ್ಷಕರಿಗಾಗಿ ಆಯೋಜಿಸಿದ್ದ 'ಸೈಕಲ್ ಪೋಲೊ, ಜಿಮ್ನಾಷಿಯಂ, ಕತ್ತಿವರಸೆ ಹಾಗೂ ಯೋಗ' ಕುರಿತ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ. ವಿವಿಧ ಕ್ರೀಡೆಗಳಲ್ಲಿ ಮಕ್ಕಳು ತೊಡಗಿಸಿಕೊಂಡಾಗ ವಿವಿಧ ಮಟ್ಟದಲ್ಲಿ ತರಬೇತಿ ಪಡೆದ ಮಕ್ಕಳು ಸಾಧನೆ ಮಾಡಬಹುದಾಗಿದೆ. ಅಲ್ಲದೆ, ನಿರ್ದಿಷ್ಟ ಕ್ರೀಡೆಯಲ್ಲಿ ಹೆಚ್ಚಿನ ಪರಿಣತಿ ಹೊಂದಿದ ಮಕ್ಕಳು ಮುಂದಿನ ದಿನಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಲೂ ಬಹುದು. ಈ ಹಿನ್ನೆಲೆಯಲ್ಲಿ ಶಾಲೆಗಳಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಿಡಿಪಿಐ ಎಸ್.ಟಿ.ಜವರೇಗೌಡ ಮಾತನಾಡಿ, ದೈಹಿಕ ಶಿಕ್ಷಣ ಶಿಕ್ಷಕರಿಗೆ ಇಂದು ನಡೆಸಿರುವ ತರಬೇತಿ ಕಾರ್ಯಾಗಾರ ದೈಹಿಕ ಶಿಕ್ಷಣ ಶಿಕ್ಷಕರು ಕಲಿತದ್ದು ಸಾರ್ಥಕವಾಗಬೇಕಾದರೆ, ಎಲ್ಲಾ ಶಾಲೆಗಳಲ್ಲೂ 2025–26ನೇ ಸಾಲಿನಿಂದಲೇ ಜಾರಿಗೆ ಬರುವಂತೆ ಸೈಕಲ್ ಪೋಲೊ, ಕತ್ತಿವರಸೆ, ಯೋಗ ಹಾಗೂ ಜಿಮ್ನಾಷಿಯಂ ತಂಡವನ್ನು ಕಟ್ಟಬೇಕು. ಗ್ರಾಮೀಣ ಪ್ರದೇಶದಲ್ಲಿ ಜಿಮ್ನಾಷಿಯಂಗೆ ಪೂರಕವಾದ ವಾತಾವರಣ ಇದೆಯಾ ಎಂದು ಗಮನಿಸಬೇಕು. ಈ ಕ್ರೀಡಾ ಚಟುವಟಿಕೆಗಳಿಗೆ ಮುಂದಿನ ದಿನಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಸಿಗುತ್ತದೆ. ಆ ಕಾರಣದಿಂದ ಉದಯೋನ್ಮುಖ ಕ್ರೀಡೆಗಳ ತಯಾರಿಕೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದು ಶ್ಲಾಘಿಸಿದರು. ಖೋಖೋ ವಿಶ್ವಕಪ್ ಭಾರತದ ಮುಡಿಗೇರಲು ಶ್ರಮಿಸಿದ ತಿ.ನರಸೀಪುರದ ಕುರುಬೂರಿನ ಚೈತ್ರ ಹಾಗೂ ಮಂಡ್ಯದ ಎಂ.ಕೆ.ಗೌತಮ್ ಅವರಿಗೆ ಮೈಸೂರು ಡಿಡಿಪಿಐ ಕಚೇರಿ ಹಾಗೂ ಶಾಲಾ ಶಿಕ್ಷಕರ ವತಿಯಿಂದ ಅಭಿನಂದನೆ ಸಲ್ಲಿಸುತ್ತೇವೆ ಎಂದು ಆಶಿಸಿದರು.

ಇದಕ್ಕೂ ಮುನ್ನ ರಾಜ್ಯ ಸೈಕಲ್ ಪೋಲೋ ಅಸೋಸಿಯೇಷನ್ ಅಧ್ಯಕ್ಷ ಎನ್.ಆರ್.ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಿಇಓಗಳಾದ ರಾಜು, ರೇವಣ್ಣ, ಪ್ರಕಾಶ್, ಶಿವಮೂರ್ತಿ, ಮಹೇಶ್, ರವಿ ಪ್ರಸನ್ನ, ಬಿಆರ್‌ಸಿ ಶ್ರೀಕಂಠಸ್ವಾಮಿ, ತಾ. ಪರಿವೀಕ್ಷಕರಾದ ಯೋಗಾನಂದ, ಕೆ.ಮರಿಸ್ವಾಮಿ, ನಾಗೇಶ್, ಮೂರ್ತಿ ನಾಯಕ್, ಎಂ.ಬಿ.ಕುಮಾರಸ್ವಾಮಿ, ಪ್ರಭುಸ್ವಾಮಿ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ನಗರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಟಿ.ಎಸ್.ರವಿಶಂಕರ್ ಇನ್ನಿಲ್ಲ



ಟಿ.ಎಸ್.ರವಿಶಂಕರ್

ಮೈಸೂರು, ಜ.27(ಆರ್‌ಕೆ)– ನಗರ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷರೂ, ಮೈಸೂರಿನ ವಿದ್ಯಾರಣ್ಯಪುರಂನ ಟಿ.ವಿ. ಶ್ರೀನಿವಾಸರಾವ್ ಸರ್ಕಲ್ ಬಳಿಯ ನಿವಾಸಿ ಟಿ.ಎಸ್. ರವಿಶಂಕರ್ (64) ಅವರು ಇಂದು ತೀವ್ರ ಹೃದಯಾಘಾತದಿಂದ ನಿಧನರಾದರು.

ಇಂದು ಬೆಳಗ್ಗೆ ಎದೆನೋವು ಕಾಣಿಸಿಕೊಂಡ ಕೂಡಲೇ ಅವರನ್ನು ಅಪೋಲೋ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಕೊನೆಯುಸಿರೆಳೆದರು. ರವಿಶಂಕರ್ ಅವರು ಪತ್ನಿ ಶ್ರೀಮತಿ ಕಮಲ, ಪುತ್ರರಾದ ಟಿ.ಎಸ್. ನಿಖಿಲ್ ತಗಡೂರು, ಟಿ.ಎಸ್.ರಾಹುಲ್ ತಗಡೂರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ವಿದೇಶದಲ್ಲಿರುವ ಪುತ್ರರು ಮೈಸೂರಿಗೆ ಆಗಮಿಸಬೇಕಾಗಿರುವುದರಿಂದ ಜನವರಿ 29ರಂದು ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಷಯ ತಿಳಿಯುತ್ತಿದ್ದಂತೆಯೇ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಶಾಸಕರಾದ ಕೆ.ಹರೀಶ್ ಗೌಡ, ತನ್ವೀರ್ ಸೇಠ್, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಡಾ.ಎಸ್.ಎಲ್.ಭಾರತೀಶಂಕರ್, ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಮೈಸೂರು ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಸೇರಿದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ಸ್ನೇಹಿತರು ಇಂದು ಬೆಳಗ್ಗೆ ವಿದ್ಯಾರಣ್ಯಪುರಂನ ಅವರ ನಿವಾಸಕ್ಕೆ ತೆರಳಿ ಅಗಲಿದ ರವಿಶಂಕರ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಶ್ರದ್ಧಾಂಜಲಿ ಸಲ್ಲಿಸಿದರು. ರವಿಶಂಕರ್ ಅವರು ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರಲ್ಲದೆ, ಪ್ರಸ್ತುತ ನಿರ್ದೇಶಕರಾಗಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಾಲಿ ಸದಸ್ಯರಾಗಿದ್ದ ಅವರು, ಮೈಸೂರಿನ ಹಲವು ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. ಇವರು ಹಿರಿಯ ಹಾಗೂ ನಿಷ್ಠಾವಂತ ಕಾಂಗ್ರೆಸ್ ನಾಯಕರಾಗಿದ್ದ ಟಿ.ವಿ.ಶ್ರೀನಿವಾಸರಾವ್ ಅವರ ಪುತ್ರ. ಇವರ ನಿಧನಕ್ಕೆ ಕಾಂಗ್ರೆಸ್ ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಮಂಚೇಗೌಡನಕೊಪ್ಪಲು ರವಿ, ರವಿ (ಡೆಲ್ಲಿ) ಇನ್ನಿತರರು ಸಂತಾಪ ಸೂಚಿಸಿದ್ದಾರೆ.

ಒಳ ಮೀಸಲಾತಿ ಜಾರಿಗೊಳಿಸದಿದ್ದರೆ ಸರ್ಕಾರದ ವಿರುದ್ಧ ರಾಜ್ಯಪಾಲರಿಗೆ ದೂರು

ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಎಚ್ಚರಿಕೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಮಾತನಾಡಿದರು.

ಮೈಸೂರು,ಜ.27(ಜಿಎ)–ಒಳ ಮೀಸಲಾತಿ ಜಾರಿ ಮಾಡಲು ರಾಜ್ಯ ಸರ್ಕಾರ ಮೀನಾಮೇಷ ಎಣಿಸುತ್ತಿರುವುದು, ರಾಜ್ಯ ಸರ್ಕಾರ ಮಧ್ಯಂತರ ವರದಿ ಜಾರಿಗೊಳಿಸದಿದ್ದರೆ, ರಾಜ್ಯ ಸರ್ಕಾರ ವಜಾಗೊಳಿಸುವಂತೆ ರಾಜ್ಯಪಾಲರಿಗೆ ದೂರು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುತ್ತದೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಮಾತನಾಡಿ, ಒಳ ಮೀಸಲಾತಿ ನೀಡುವಂತೆ ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದೆ. ಈ ಬಳಿಕ ಹೋರಾಟ ತೀವ್ರಗೊಂಡ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಏಕ ಸದಸ್ಯ ಆಯೋಗ ರಚಿಸಿ ಮೂರು ತಿಂಗಳೊಳಗಾಗಿ ವರದಿ ಸಲ್ಲಿಸುತ್ತದೆ ಎಂದು ತಿಳಿಸಿದೆ. ಆದರೆ ಇದೇ ಜ.28ಕ್ಕೆ ಆಯೋಗದ ಅವಧಿ ಮುಕ್ತಾಯಗೊಳ್ಳುತ್ತಿದ್ದರೂ ಸರ್ಕಾರ ಸೂಕ್ತ ಕ್ರಮ ಕೈಗೊಂಡಿಲ್ಲ. ಹೀಗಾಗಿ ಹೋರಾಟ ಅನಿವಾರ್ಯವಾಗಲಿದೆ ಎಂದರು.

ಸರ್ಕಾರದ ಈ ವಿಳಂಬ ಧೋರಣೆಯಿಂದಾಗಿ ಮಾದಿಗ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಸರ್ಕಾರ ಸಹಾ ಈ ಸಮುದಾಯವನ್ನು ದಿಕ್ಕು ತಪ್ಪಿಸುತ್ತಿದೆ. ಆದ್ದರಿಂದಾಗಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. ಇದಲ್ಲದಿದ್ದರೆ ಸುಪ್ರೀಂ ಕೋರ್ಟ್ ಆದೇಶ ಜಾರಿಗೊಳಿಸದ ಹಿನ್ನೆಲೆಯಲ್ಲಿ ನ್ಯಾಯಾಂಗ ನಿಂದನೆ ಮಾಡಲಾಗುತ್ತಿದೆ ಎಂಬ ಕಾರಣ ನೀಡಿ ರಾಜ್ಯಪಾಲರಿಗೆ ದೂರು ಸಲ್ಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ಎಂ.ದಾಸಯ್ಯ, ಶಿವಕುಮಾರ್ ಎಂ.ಬೆಳ್ತೂರು, ಟಿ.ಮುತ್ತುರಾಜ್, ರಾಜು, ಕಾರ್ತಿಕ್, ಬೂದಿತಿಟ್ಟು ರಾಜೇಂದ್ರ ಉಪಸ್ಥಿತರಿದ್ದರು.

ಎಸ್.ಪಿ.ಮಂಜುನಾಥ್‌ಗೆ ಹುಟ್ಟುಹಬ್ಬದ ಶುಭಾಶಯ...



ಜೆಎಸ್‌ಎಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಪಿ.ಮಂಜುನಾಥ ಅವರನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸುತ್ತೂರು ಕ್ಷೇತ್ರದಲ್ಲಿ ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮಾಲಂಗಿ ಸುರೇಶ್, ಗೌರಿಶಂಕರ್, ಮಾಜಿ ಕಾರ್ಪೋರೇಟರ್ ವಿ.ಲೋಕೇಶ್ ಪಿಯಾ ಇನ್ನಿತರರಿದ್ದರು.

ಮನೋಜ್‌ಗೌಡ ಬೇವಿನಹಳ್ಳಿ ಮಹೇಶ್ ದೇಶದಲ್ಲೇ ದ್ವಿತೀಯ



ಮೈಸೂರು, ಜ. 27–ಮಾರಿಷಸ್ ವಿಶ್ವವಿದ್ಯಾಲಯದ ಸರ್ ಸೀವೂಸಗೂರು ವೈದ್ಯಕೀಯ ಕಾಲೇಜಿನಲ್ಲಿ ಮನೋಜಗೌಡ ಬೇವಿನಹಳ್ಳಿ ಮಹೇಶ್ ಎಂಬಿಬಿಎಸ್ ಪದವಿ ಪಡೆದಿದ್ದು, ಭಾರತ ಸರ್ಕಾರದ ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್ಸ್ ಇನ್ ಮೆಡಿಕಲ್ ಸೈನ್ಸಸ್ ನಡೆಸಿದ ಫಾರೀನ್ ಮೆಡಿಕಲ್ ಗ್ರಾಜ್ಯುಯೇಟ್ ಎಕ್ಸಾಮಿನೇಷನ್‌ನಲ್ಲಿ ದೇಶದಲ್ಲೇ ದ್ವಿತೀಯ ಸ್ಥಾನ ಹೊಂದಿ ಹೊರಹೊಮ್ಮಿದ್ದಾರೆ. ಇವರು ಮೈಸೂರಿನ ಎಂ.ಮಹೇಶ್ ಹಾಗೂ ಲೀಲಾವತಿ ದಂಪತಿ ಪುತ್ರ.

ನಾಳೆ ಶ್ರೀಹರಿಕೋಟಾದಿಂದ ಇಸ್ರೋದ 100ನೇ ರಾಕೆಟ್ ಉಡಾವಣೆ



ಶ್ರೀಹರಿಕೋಟಾ, ಜ.27– ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನೂರನೇ ಉಡಾವಣೆಗೆ ಸಜ್ಜಾಗಿದೆ. ಜ.29ರಂದು ಜಿಎಸ್‌ಎಲ್‌ವಿ–ಎಫ್15 ಎನ್‌ವಿಎಸ್–02 ಮಿಷನ್ ಉಡಾವಣೆಯೊಂದಿಗೆ ಇಸ್ರೋದ 100ನೇ ಉಡಾವಣೆ ನಡೆಯಲಿದೆ. ಎನ್‌ವಿಎಸ್–02 ನಾವಿಕ್ ಉಪಗ್ರಹ ವ್ಯವಸ್ಥೆಯ ಭಾಗವಾಗಿದೆ. ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡಾವಣಾ ಕೇಂದ್ರದಿಂದ ಈ ಉಡಾವಣೆ ನಡೆಯಲಿದೆ. ಸ್ವದೇಶಿ ಕ್ರಯೋಜೆನಿಕ್ ಹಂತವನ್ನು ಹೊಂದಿರುವ ಜಿಎಸ್‌ಎಲ್‌ವಿ–ಎಫ್15 ಎನ್‌ವಿಎಸ್–02 ಉಪಗ್ರಹವನ್ನು ಭೂಸ್ಥಿರ ವರ್ಗಾವಣೆ ಕಕ್ಷೆಗೆ ಸ್ಥಾಪಿಸಲಿದೆ. ಎರಡನೇ ಉಡಾವಣಾ ತಾಣದಿಂದ ಉಡಾವಣೆ ನಡೆಯಲಿದೆ. ಎನ್‌ವಿಎಸ್ ಸರಣಿಯ 2ನೇ ಉಪಗ್ರಹ ಮತ್ತು ಭಾರತೀಯ ನ್ಯಾವಿಗೇಷನ್ ವ್ಯವಸ್ಥೆಯ (ನಾವಿಕ್) ಭಾಗವಾಗಿದೆ ಎನ್‌ವಿಎಸ್–02. ನಾವಿಕ್ ಭಾರತದ ಸ್ವದೇಶಿ ಪ್ರಾದೇಶಿಕ ನ್ಯಾವಿಗೇಷನ್ ಉಪಗ್ರಹ ವ್ಯವಸ್ಥೆ ಎಂದು ಇಸ್ರೋ ಹೇಳಿದೆ. ನ್ಯಾವಿಗೇಷನ್ ಮತ್ತು ರೇಂಜಿಂಗ್‌ಗಾಗಿ ಭಾರತ ಸ್ವದೇಶಿಯವಾಗಿ ಅಭಿವೃದ್ಧಿಪಡಿಸಿದ ಸ್ಥಾನ ನಿರ್ಣಯ ವ್ಯವಸ್ಥೆಯೇ ಭಾರತೀಯ ಪ್ರಾದೇಶಿಕ ನ್ಯಾವಿಗೇಷನ್ ವ್ಯವಸ್ಥೆ. ಇದರ ಮತ್ತೊಂದು ಹೆಸರು ನಾವಿಕ್ ಅಮೆರಿಕದ ಜಿಪಿಎಸ್, ರಷ್ಯಾದ ಗ್ಲೋನಾಸ್, ಚೀನಾದ ಬೇಡೌ ಮತ್ತು ಯುರೋಪಿಯನ್ ಒಕ್ಕೂಟದ ಗೆಲಿಲಿಯೋಗೆ ಸ್ಪರ್ಧೆಯೊಡ್ಡುವ ನ್ಯಾವಿಗೇಷನ್ ವ್ಯವಸ್ಥೆಯನ್ನು ಇಸ್ರೋ ತಯಾರಿಸುತ್ತಿದೆ. ಭಾರತ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಖರವಾದ ಸ್ಥಾನ, ವೇಗ ಮತ್ತು ಸಮಯ ಸೇವೆಗಳನ್ನು ಒದಗಿಸಲು ನಾವಿಕ್ ಅನ್ನು ವಿನ್ಯಾಸಗೊಳಿಸಲಾಗಿದೆ. ಎಲ್ಲಾ ರೀತಿಯ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳು, ಸ್ಥಳ ಆಧಾರಿತ ಸೇವೆಗಳು ಮತ್ತು ಸಮೀಕ್ಷೆಗಳಿಗೆ ನಾವಿಕ್ ಪ್ರಯೋಜನಕಾರಿ. ಭಾರತದಾದ್ಯಂತ ಮತ್ತು ದೇಶದ ಗಡಿಗಳಿಂದ 1500 ಕಿ.ಮೀ ವ್ಯಾಪ್ತಿಯಲ್ಲಿ ನಾವಿಕ್ ಕಾರ್ಯನಿರ್ವಹಿಸುತ್ತದೆ.

ಅಪ್ಪಣ್ಣ ಶೆಟ್ಟಿ



ಮೈಸೂರಿನ ಬನ್ನಿಮಂಟಪ ಹನುಮಂತನಗರ ನಿವಾಸಿ ಅಪ್ಪಣ್ಣ ಶೆಟ್ಟಿ (67) ಜ.25ರಂದು ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಪುತ್ರಿ, ಓರ್ವ ಪುತ್ರ ವಿಜಯ (ಗೂಡ್ಸ್ ಆಟೋ ಮಾಲೀಕರು ಮತ್ತು ಶಾಮಿಯಾನ) ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜ.26ರಂದು ಮೈಸೂರಿನ ಬನ್ನಿಮಂಟಪ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಜೋಡಿ ತೆಂಗಿನಮರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೀನಾಕ್ಷಮ್ಮ



ಮೈಸೂರಿನ ಇಟ್ಟಿಗೆಗೂಡು ನಿವಾಸಿ ಹಾಗೂ ನಿವೃತ್ತ ಸರ್ಕಾರಿ ಶಿಕ್ಷಕಿ ಮೀನಾಕ್ಷಮ್ಮ (82) ಸೋಮವಾರ ನಿಧನರಾದರು. ದಿವಂಗತ ಕೀರ್ತಿರಾಜ್ ಪತ್ನಿಯಾದ ಇವರು, ಪುತ್ರ ಕೆ.ಗೋಪಾಲ್ ಗೋವರ್ಧನ್ (ವಕೀಲರು, ಬಿಜೆಪಿ ಮುಖಂಡರು ಮತ್ತು ಮೈಸೂರು ವಿವಿ ಸಿಂಡಿಕೇಟ್ ಸದಸ್ಯರು), ಪುತ್ರಿ ಡಾ.ಕೆ.ನಮ್ರತಾ (ಮೈಸೂರು ವಿವಿ ಉಪನ್ಯಾಸಕಿ) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಎಸ್.ನಾರಾಯಣಮೂರ್ತಿ



ಮೈಸೂರಿನ ಸರಸ್ವತಿಪುರಂ ನಿವಾಸಿ ಎಂ.ಎಸ್.ನಾರಾಯಣಮೂರ್ತಿ (90) ಶನಿವಾರ ನಿಧನರಾದರು. ಇದಕ್ಕೂ ಮೊದಲು ಬೆಂಗಳೂರು ಪ್ರೆಸ್‌ನಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಇವರು ನಂತರ ಮೈಸೂರಿಗೆ ಬಂದು ನೆಲೆಸಿದರು. ಶಾರದಾ ವಿಲಾಸ ಕಾಲೇಜಿನಲ್ಲಿ ಅಕೌಂಟೆಂಟ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಅಲ್ಲದೆ, ಗಾನಭಾರತಿ ಸಂಗೀತ ಸಭಾದ ಸಕ್ರಿಯ ಕಾರ್ಯಕರ್ತರಾದ ಇವರು, ಸುಮಾರು 20 ವರ್ಷಗಳ ಕಾಲ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದರು. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಭಾನುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಘ್ನೇಸ್ ಡಿಸೋಜಾ



ಮೈಸೂರು, ಆರ್.ಎಸ್.ನಾಯ್ಡು ನಗರ ನಿವಾಸಿ ಹಾಗೂ ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ನಿವೃತ್ತ ಶಿಕ್ಷಕಿ ಅಘ್ನೇಸ್ ಡಿಸೋಜಾ (70) ಶನಿವಾರ ಸಂಜೆ ನಿಧನರಾದರು. ಮೃತರು ಪತಿ ಮೈಕೆಲ್ ಲೋಬೋ, ಪುತ್ರ ಪ್ರಶಾಂತ್ ಲೋಬೋ, ಸೊಸೆ ಜಾಕ್‌ಲೈನ್ ರುತ್, ಮೊಮ್ಮಕ್ಕಳಾದ ಗತಿನ್ ಆರಾನ್ ಲೋಬೋ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರ ಸಿಮೆಟ್ರಿಯಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಸುಶೀಲಾ ನಾರಾಯಣ್




ಮೈಸೂರಿನ ಜಯಲಕ್ಷ್ಮೀಪುರಂ ನಿವಾಸಿ, ಬೋಗಾದಿಯಲ್ಲಿರುವ ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್ ಧರ್ಮದರ್ಶಿಗಳಾಗಿದ್ದ ದಿವಂಗತ ಜೆ.ಎಲ್.ನಾರಾಯಣ್ ಅವರ ಪತ್ನಿ ಶ್ರೀಮತಿ ಸುಶೀಲಾ ನಾರಾಯಣ್ ಅವರು ಭಾನುವಾರ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ ಅಗಲಿದ್ದು, ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಚಿತಾಗಾರದಲ್ಲಿ ಇಂದು (ಸೋಮವಾರ) ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟರಾಜು



ಮೈಸೂರಿನ ಮಂಡಿ ಮೊಹಲ್ಲಾ ಬೆಂಕಿನವಾಬ್ ರಸ್ತೆಯಲ್ಲಿರುವ ಶಿಲ್ಪ ಟೈಲರ್ಸ್ ಮಾಲೀಕ ಪುಟ್ಟರಾಜು(64) ಅವರು ಜನವರಿ 25ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಜನವರಿ 26ರಂದು ಜೋಡಿ ತೆಂಗಿನಮರದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.01.2025 ಮಂಗಳವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತಪಿತ್ತ), ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಶ್ರೀ ನಟರಾಜ ಪ್ರದರ್ಶಕ ಕಲೆಗಳ ಕೇಂದ್ರ :** ಮಂಜಿರ ಮಹೋತ್ಸವ, ಸಂಜೆ 6 ರಿಂದ ವಿದುಷಿ ಎನ್. ನವ್ಯಶ್ರೀ ಅವರಿಂದ ಭರತನಾಟ್ಯ, ಸಂಜೆ 7.30ಕ್ಕೆ ಬೆಂಗಳೂರಿನ ನೃತ್ಯ ಗಂಗಾ ಪ್ರದರ್ಶಕ ಕಲಾ ಕೇಂದ್ರದ ನಿರೂಪಕಿ ಹಾಗೂ ಭರತನಾಟ್ಯ ಕಲಾವಿದೆ ವಿದುಷಿ ರೂಪಶ್ರೀ ಮಧುಸೂದನ್ ಅವರಿಂದ ಭರತನಾಟ್ಯ ನೃತ್ಯ ಪ್ರದರ್ಶನ, ಸ್ಥಳ: ಗಾನಭಾರತೀ ರಮಾ ಗೋವಿಂದ ಕಲಾ ವೇದಿಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಶ್ವಾಸ (ಉಬ್ಬಸ, ದಮ್ಮು ಕಾಯಿಲೆ) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಇತಿಹಾಸ ಅಧ್ಯಯನ ವಿಭಾಗ :** ಡಿ.ಎಸ್. ಅಚ್ಯುತರಾವ್ ದತ್ತಿ ವತಿಯಿಂದ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ. ಎನ್. ನಾಗರಾಜ, ಮುಖ್ಯ ಅತಿಥಿಗಳು : ದತ್ತಿ ಸಂಚಾಲಕ ಡಿ.ಎ. ಪ್ರಸನ್ನ, ವಿಶ್ರಾಂತ ಪ್ರೊ. ಎ. ಸತ್ಯನಾರಾಯಣ ಅವರಿಂದ ದತ್ತಿ ಉಪನ್ಯಾಸ, ಅಧ್ಯಕ್ಷತೆ : ಹಿರಿಯ ಪ್ರಾಧ್ಯಾಪಕ ಪ್ರೊ. ವೈ.ಎಚ್. ನಾಯಕವಾಡಿ, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಡಾ. ಬಿ.ಆರ್. ಅಂಬೇಡ್ಕರ್ ಅವರ ಮಾನವ ಅಭಿವೃದ್ಧಿಯ ಗ್ರಹಿಕೆ ಕುರಿತು ಕಾರ್ಯಾಗಾರ, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿದ್ವಾನ್ ಪ್ರಜ್ಞಾ ಅಡಿಗ ಅವರಿಂದ ಗಾಯನ, ವಿದುಷಿ ರೂಪನಗುಡಿ ರತ್ನತೇಜ–ಪಿಟೀಲು, ವಿದ್ವಾನ್ ಎ.ರಾಧೇಶ್–ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟಂ, ಸ್ಥಳ: ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ, ಶ್ರೀರಾಂಪುರ, ಸಂಜೆ 6ಕ್ಕೆ

ಸುತ್ತೂರಿನಲ್ಲಿಂದು, ನಂಜನಗೂಡು ತಾ., ಸುತ್ತೂರು ಜಾತ್ರಾ ಮಹೋತ್ಸವ

■ **ರಥೋತ್ಸವ, ಧಾರ್ಮಿಕ ಸಭೆ :** ಸಮ್ಮುಖ : ಆರ್ಟ್ ಆಫ್ ಲಿವಿಂಗ್ ಸ್ಥಾಪಕ ರವಿಶಂಕರ್ ಗುರೂಜಿ, ಶ್ರೀ ಮುಪ್ಪಿನ ಬಸವಲಿಂಗ ಸ್ವಾಮೀಜಿ, ಅಧ್ಯಕ್ಷತೆ : ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉದ್ಘಾಟನೆ : ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವ ಪ್ರಹ್ಲಾದ್ ವಿ. ಜೋಶಿ, ಮುಖ್ಯ ಅತಿಥಿಗಳು : ಶಾಸಕರಾದ ಡಾ.ಸಿ.ಎನ್. ಅಶ್ವಥ್‌ನಾರಾಯಣ್, ಜಿ.ಟಿ. ದೇವೇಗೌಡ, ಸಿ.ಸಿ. ಪಾಟೀಲ್, ತನ್ವೀರ್ ಸೇಠ್, ಸಂಸದರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶ್ರೇಯಸ್ ಎಸ್.ಪಟೇಲ್, ಶಾಸಕ ಟಿ.ಎಸ್. ಶ್ರೀವತ್ಸ, ಹೆಚ್.ಎಸ್. ರಾಘವೇಂದ್ರರಾವ್, ಶ್ರೀಮತಿ ವಸುಧಾ ಮತ್ತು ಬಾಬು ಕೀಲಾರ, ಡಾ. ಎಂ.ಎಸ್. ರವೀಂದ್ರ ಬೆಳಗ್ಗೆ 11.10 ರಿಂದ.

■ **ಚಿತ್ರಕಲೆ, ಗಾಳಿಪಟ ಮತ್ತು 54ನೇ ದನಗಳ ಜಾತ್ರೆ :** ಸಮ್ಮುಖ : ಶ್ರೀ ವಲಾರ್ ಶಿವಾನಂದ ಪುಲಿಪ್ಪನಿ ಪಾತಿರಕರ ಸ್ವಾಮಿಗಳ್, ಶ್ರೀ ಯೋಗೀಶ್ವರ ಸ್ವಾಮಿಗಳು, ಅಧ್ಯಕ್ಷತೆ : ಸಚಿವ ಶಿವಾನಂದ ಎಸ್. ಪಾಟೀಲ್, ದನಗಳ ಜಾತ್ರೆ ಉದ್ಘಾಟನೆ : ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್, ಚಿತ್ರಕಲೆ ಸ್ಪರ್ಧೆ ಉದ್ಘಾಟನೆ : ಮೀನುಗಾರಿಕೆ ಸಚಿವ ಮಂಕಾಳ ಎಸ್. ವೈದ್ಯ, ಗಾಳಿಪಟ ಸ್ಪರ್ಧೆ ಉದ್ಘಾಟನೆ : ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಮುಖ್ಯ ಅತಿಥಿಗಳು : ಶಾಸಕರಾದ ಅಡಗೂರು ಹೆಚ್. ವಿಶ್ವನಾಥ್, ಪಿ.ಎಂ. ನರೇಂದ್ರ, ದರ್ಶನ್ ಧ್ರುವನಾರಾಯಣ್, ಎಂ.ಆರ್. ಮಂಜುನಾಥ್, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಯುಎಸ್‌ಎ ಅಕ್ಕ ವಿಶ್ವಸ್ಥ ಮಂಡಳಿ ಅಧ್ಯಕ್ಷ ಅಮರನಾಥ ಗೌಡ, ವಿಎಸ್‌ಎನ್‌ಎ, ಯುಎಸ್‌ಎ ಅಧ್ಯಕ್ಷ ದಯಾನಂದ ತುಮಕೂರು, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ , ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು : ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಿ. ಪುರುಷೋತ್ತಮ್, ಗೀತಾ. ವೈ. ಪುಟ್ಟಿ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು', ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.05 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಭರತ್ ಸುಂದರ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್. ಎಂ. ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ : ಸುಧಾ ಮಧುಸೂದನ್, 12.45 ಕನ್ನಡದಲ್ಲಿ ಭಾಷಣ–ಸಮಾಜ ಸುಧಾರಣೆಗಾಗಿ ನಮ್ಮ ಸಂವಿಧಾನ ಹಾಗೂ ಗಣರಾಜ್ಯೋತ್ಸವ ಈ ಕುರಿತು ಮಾತನಾಡುತ್ತಾರೆ ಡಾ. ಪ್ರದೀಪ್ ಕುಮಾರ್ ಹೆಬ್ರಿ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಸರ್ವರಿಗೂ ಸೂರು ಯೋಜನೆ ಕುರಿತು ಪ್ರದೀಪ್ ಅವರಿಂದ ಮಾಹಿತಿ, 1.20 ಭಾವಗೀತೆಗಳು–ಬಿ.ಎಸ್. ವಿಜಯರಾಘವನ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಸಿಕ್ಕಿಲ್ ಸಹೋದರಿಯರು– ಕೊಳಲು ವಾದನ, 4.00 ಕಥಾ ಕಾಲಕ್ಷೇಪ– ಸಂಪೂರ್ಣ ರಾಮಾಯಣ–ಕಿಷ್ಕಿಂದಾ ಕಾಂಡ ಹಾಗೂ ಸುಂದರಕಾಂಡ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ಕೃಷಿಯಲ್ಲಿ ಉದ್ಯಮಶೀಲತೆಗೆ ಅವಕಾಶಗಳು ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಡಿ.ಜಾಯ್ಸಿರಾಣಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಅನೌಷ್ಕ ಶಂಕರ್ – ಸಿತಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಕಾರ್ತಿಕ ವೈದ್ಯನಾಥನ್ – ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ : ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಸುತ್ತೂರು ಜಾತ್ರೆಗೆ ವಿಶೇಷ ಬಸ್ ವ್ಯವಸ್ಥೆ



ಮೈಸೂರು ನಗರ ಬಸ್ ನಿಲ್ದಾಣದಿಂದ ಸುತ್ತೂರಿಗೆ ಕಲ್ಪಿಸಲಾಗಿರುವ ಜಾತ್ರಾ ವಿಶೇಷ ಬಸ್ ಸಂಚಾರಕ್ಕೆ ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ವಿಧ್ಯುಕ್ತ ಚಾಲನೆ ನೀಡಿದರು.

ಮೈಸೂರು, ಜ.27(ಎಸ್‌ಬಿಡಿ)- ಸುತ್ತೂರು ಜಾತ್ರಾ ಮಹೋತ್ಸವಕ್ಕೆ ನಗರ ಬಸ್ ನಿಲ್ದಾಣದಿಂದ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿದೆ.

ಮೈಸೂರು ನಗರ ಬಸ್ ನಿಲ್ದಾಣದಿಂದ ಸುತ್ತೂರಿಗೆ 30 ಬಸ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಈ ವಿಶೇಷ ಸಮಚಾರಕ್ಕೆ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಭಾನುವಾರ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಎರಡು ದಿನವೂ ಈ ವಿಶೇಷ ಬಸ್‌ಗಳು ಭರ್ತಿಯಾಗಿ ಸಂಚಾರ ನಡೆಸಿವೆ. ಎರಡೂ ಕಡೆಯಿಂದ ಭರ್ತಿಯಾದ ಕೂಡಲೇ ಬಸ್ ಹೊರಡುವುದರಿಂದ ಭಕ್ತರು ಕಾಯುವ ಅವಶ್ಯಕತೆ ಇಲ್ಲ. ಶಕ್ತಿ ಯೋಜನೆಯಡಿ ಮಹಿಳೆಯರ ಉಚಿತ ಪ್ರಯಾಣಕ್ಕೂ ಅವಕಾಶವಿದೆ. ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗಿದೆ. ಸುತ್ತೂರು ಜಾತ್ರಾ ಮಹೋತ್ಸವ ಮುಕ್ತಾಯವಾಗುವವರೆಗೂ ಈ ವಿಶೇಷ ಬಸ್ ಸಂಚಾರ ಇರಲಿದೆ ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ.

ಬೈಕ್-ಸ್ಕೂಟರ್ ಡಿಕ್ಕಿ: ಒಬ್ಬರ ಸಾವು; ಇಬ್ಬರಿಗೆ ಗಾಯ

ಮೈಸೂರು, ಜ.27(ಎಸ್‌ಬಿಡಿ)- ಎರಡು ದ್ವಿಚಕ್ರ ವಾಹನಗಳು ಡಿಕ್ಕಿಯಾಗಿ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ನಗರದ ಶ್ರೀರಾಂಪುರ ರಿಂಗ್ ರಸ್ತೆ ಬಳಿ ಭಾನುವಾರ ಸಂಭವಿಸಿದೆ.

ಬೋಗಾದಿ 2ನೇ ಹಂತ, ರಾಜಾಜಿನಗರ ನಿವಾಸಿ ಎಂ.ಚಂದ್ರು(51) ಮೃತರು. ಇವರ ತಾಯಿ ಮಹದೇವಮ್ಮ(75) ತೀವ್ರವಾಗಿ ಗಾಯಗೊಂಡಿದ್ದು, ಮತ್ತೊಂದು ವಾಹನದ ಸವಾರ ಪುಟ್ಟರಾಜು ಅವರೂ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಎಲೆಕ್ಟ್ರಿಷಿಯನ್ ಆಗಿದ್ದ ಚಂದ್ರ ತಮ್ಮ ತಾಯಿ ಮಹದೇವಮ್ಮ ಅವರೊಂದಿಗೆ ಸ್ಪ್ಲೆಂಡರ್ ಪ್ಲಸ್ ಬೈಕ್(ಕೆಎ-09, ಎಡಬ್ಲ್ಯೂ-4213)ನಲ್ಲಿ ನಾಚನಹಳ್ಳಿ ಪಾಳ್ಯದ ಕಡೆಯಿಂದ ಶ್ರೀರಾಂಪುರ ರಿಂಗ್ ರಸ್ತೆ ಕಡೆಗೆ ಹೋಗುವಾಗ ಟೋಲ್‌ಗೇಟ್ ಬಳಿ ಎದುರಿನಿಂದ ಬಂದ ಪುಟ್ಟರಾಜು ಅವರ ಜುಪಿಟರ್ ಸ್ಕೂಟರ್(ಕೆಎ-09, ಹೆಚ್‌ಪಿ-9833) ಡಿಕ್ಕಿಯಾಗಿದೆ. ಘಟನೆಯಲ್ಲಿ ಮೂವರೂ ನೆಲಕ್ಕುರುಳಿದ್ದಾರೆ. ಕೂಡಲೇ ಎಲ್ಲರನ್ನೂ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ತೀವ್ರ ಪೆಟ್ಟು ಬಿದ್ದಿದ್ದ ಚಂದ್ರು ಬದುಕುಳಿಯಲಿಲ್ಲ. ಈ ಸಂಬಂಧ ಕೆ.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಚ್ಛತೆ ಅರಿವಿಗೆ ಮೇಣದ ಬತ್ತಿ ಮೆರವಣಿಗೆ

ವೈಆರ್‌ಎನಿಂದ ವಿಶಿಷ್ಟ ಗಣರಾಜ್ಯೋತ್ಸವ



ಮೈಸೂರಿನ ಯಾದವಗಿರಿಯಲ್ಲಿ ಭಾನುವಾರ ವೈಆರ್‌ಎ ವತಿಯಿಂದ ಮೇಣದ ಬತ್ತಿ ಮೆರವಣಿಗೆ ನಡೆಯಿತು.

ಮೈಸೂರು,ಜ.27(ಪಿಎಂ)- ಯಾದವಗಿರಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ (ವೈಆರ್‌ಎ) ವತಿಯಿಂದ ಭಾನುವಾರ ಸಂಜೆ ವಿಶೇಷ ರೀತಿಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು.

'ಸ್ವಚ್ಛ ಮತ್ತು ಹಸಿರು ಯಾದವಗಿರಿಗಾಗಿ ಕ್ಯಾಂಡಲ್ ಲೈಟ್ ಮಾರ್ಚ್' ಶೀರ್ಷಿಕೆಯಡಿ ಯಾದವಗಿರಿಯ ಐಡಿಯಲ್ ಜಾವಾ ವೃತ್ತದಿಂದ ವಿವೇಕಾನಂದ ರಸ್ತೆ ಮೂಲಕ ಆಕಾಶವಾಣಿ ವೃತ್ತದವರೆಗೆ ಮೇಣದ ಬತ್ತಿ ಮೆರವಣಿಗೆ ನಡೆಸುವ ಮೂಲಕ ಸ್ವಚ್ಛತೆ ಕಾಪಾಡುವ ಕುರಿತು ನಾಗರಿಕರ ಜವಾಬ್ದಾರಿ ಬಗ್ಗೆ ಅರಿವು ಮೂಡಿಸಲಾಯಿತು.

ಗಣರಾಜ್ಯೋತ್ಸವದ ಸುಸಂದರ್ಭದಲ್ಲಿ ಸ್ವಚ್ಛ ಮೈಸೂರಿನಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವ ಉದಾತ್ತ ಉದ್ದೇಶದೊಂದಿಗೆ ಏರ್ಪಡಿಸಿದ್ದ ಈ ಮೆರವಣಿಗೆಯಲ್ಲಿ ನಿರೀಕ್ಷೆಗೂ ಮೀರಿ 350ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಮೆರವಣಿಗೆಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು. ಶಾಸಕ ಕೆ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸಂಘಟಕರಾದ ಎಸ್.ಕೆ.ದಿನೇಶ್, ಭಾಮೀ ವಿ.ಶೆಣೈ, ಪ್ರಮುಖ ವೈದ್ಯರು, ವಿವಿಧ ಕ್ಷೇತ್ರದ ಪ್ರಮುಖರು, ಉದ್ಯಮಿಗಳು ಸೇರಿದಂತೆ ಹಲವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಶಾಸಕ ಜಿ.ಟಿ.ದೇವೇಗೌಡರಿಂದ ಚಾಮುಂಡೇಶ್ವರಿ ಕ್ಷೇತ್ರದ ನಗರಸಭೆ, ಪಪಂ ಪ್ರಗತಿ ಪರಿಶೀಲನೆ

ಖಾತೆ ನೀಡಲು ಮಧ್ಯವರ್ತಿಗಳಿಗೆ ಅವಕಾಶ ನೀಡಬೇಡಿ; ಪಾರದರ್ಶಕತೆಯಿಂದ ಕಾರ್ಯನಿರ್ವಹಿಸಿ

ಮೈಸೂರು,ಜ.27(ಪಿಎಂ)- ಸಾರ್ವಜನಿಕರ ಸ್ವತ್ತುಗಳಿಗೆ ಖಾತೆ ಮಾಡಿಕೊಡುವ ಸಂಬಂಧ ಅತ್ಯಂತ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಮಧ್ಯವರ್ತಿಗಳಿಗೆ ಅವಕಾಶ ಮಾಡಿಕೊಡಬಾರದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಸಭಾಂಗಣದಲ್ಲಿ ಸೋಮವಾರ ಚಾಮುಂಡೇಶ್ವರಿ ಕ್ಷೇತ್ರದ ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಖಾತೆಗೆ ಯಾರೇ ಅರ್ಜಿ ಸಲ್ಲಿಸಿದರೂ ದಾಖಲೆಗಳನ್ನು ಪರಿಶೀಲಿಸಿ ನೇರವಾಗಿ ಖಾತೆ ಮಾಡಿಕೊಡಬೇಕು. ಇದರ ಹೊರತಾಗಿ ಮಧ್ಯವರ್ತಿಗಳ ಪ್ರವೇಶಕ್ಕೆ ಅವಕಾಶ ಇರಕೂಡದು. ಅದರಲ್ಲಿಯೂ ಬಡವರ ವಿಚಾರದಲ್ಲಿ ಸತಾಯಿಸುವ ದೂರುಗಳು ಬರಕೂಡದು ಎಂದು ತಾಕೀತು ಮಾಡಿದರು.

ಖಾತೆ ಸಂಬಂಧ ಅರ್ಜಿ ಸಲ್ಲಿಸುವಾಗ ಖುದ್ದು ಪರಿಶೀಲಿಸಬೇಕು. ಖಾತೆದಾರರೇ ನೇರವಾಗಿ ಬರುವಂತೆ ಮಾಡಿದರೆ ಅನುಕೂಲವಾಗಲಿದೆ ಡಿಜಿಟಲೀಕರಣ ಅಳವಡಿಸಿಕೊಳ್ಳಬೇಕು. ಯಾವುದೇ ದಾಖಲೆಗಳಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಕಷ್ಟವಾಗಲಿದೆ.



ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಸಭಾಂಗಣದಲ್ಲಿ ಸೋಮವಾರ ಚಾಮುಂಡೇಶ್ವರಿ ಕ್ಷೇತ್ರದ ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಪ್ರಗತಿ ಪರಿಶೀಲನೆ ಸಭೆಯು ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಾಗಾಗಿ ಅತ್ಯಂತ ಮುತುವರ್ಜಿಯಿಂದ ದಾಖಲೆಗಳನ್ನು ನಿರ್ವಹಿಸಬೇಕು. ದಾಖಲೆಗಳು ಕಚೇರಿಯಿಂದ ಹೊರ ಹೋಗಬಾರದು. ಸಿಬ್ಬಂದಿ ಮೇಲೆ ನಿಗಾ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಬಡಾವಣೆಗಳ ಹಸ್ತಾಂತರದ ವೇಳೆ ನೀರು, ವಿದ್ಯುತ್, ಒಳಚರಂಡಿ, ಸ್ವಚ್ಛತೆ ಸಮರ್ಪಕವಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಕಂದಾಯ ಕಟ್ಟಿಸಿಕೊಳ್ಳುವ ಸಂಬಂಧ ಹಾಗೂ ಸ್ವಚ್ಛತೆ ನಿರ್ವಹಣೆಯ ಬಗ್ಗೆ ಗಮನಹರಿಸಬೇಕು. ಉದ್ಯಾನವನಗಳಲ್ಲಿ ಪೊದೆಗಳು ಬೆಳೆದು ಚಿರತೆಗಳು ಸೇರುವಂತಹ ವಾತಾವರಣವಿರುವ ಬಗ್ಗೆ ದೂರು ಕೇಳಿ ಬರುತ್ತಿದ್ದು, ತಕ್ಷಣವೇ ಪಾರ್ಕ್‌ಗಳಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ತೆರವುಗೊಳಿಸಬೇಕು ಎಂದರು.

ನಗರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಯ ನಿವೇಶನಗಳನ್ನು ವಶಪಡಿಸಿಕೊಳ್ಳುವ ಜೊತೆಗೆ ನಿವೇಶನ ಸಂಖ್ಯೆ, ಖಾತೆದಾರರ ಹೆಸರು, ಸ್ವತ್ತಿನ ಪ್ರಕ್ರಿಯೆಗಳನ್ನು ತ್ವರಿತಗತಿಯಲ್ಲಿ ಮಾಡಬೇಕು. ಕ್ಷೇತ್ರ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಗಳನ್ನು ವಶಪಡಿಸಿಕೊಳ್ಳುವ ಕೆಲಸ ಚುರುಕುಗೊಂಡಿದೆ. ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಬೇಕು ಎಂದು ತಿಳಿಸಿದರು.

ಸಾರ್ವಜನಿಕರು ನೀರು, ವಿದ್ಯುತ್, ಯುಜಿಡಿ ಸಮಸ್ಯೆ ಬಗೆಹರಿಸುವಂತೆ ಅಲೆಯುತ್ತಿದ್ದಾರೆ. ನಗರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ನಿವೇಶನಗಳ ಮೂಲಸೌಕರ್ಯಗಳ ಸಮಸ್ಯೆಗಳನ್ನು ಯಾರೊಬ್ಬ ಅಧಿಕಾರಿ ನನ್ನ ಗಮನಕ್ಕೆ ತರುತ್ತಿಲ್ಲ. ಸಮಸ್ಯೆಗಳನ್ನು ಗಮನಕ್ಕೆ ತಂದು ಪರಿಹರಿಸುವ ಕೆಲಸ ಮಾಡುತ್ತಿಲ್ಲ. ನನ್ನ ಗಮನಕ್ಕೆ ತರದಿದ್ದರೆ ಸಮಸ್ಯೆಗಳನ್ನು ಬಗೆಹರಿಸುವುದಾದರೂ ಹೇಗೆ ಎಂದು ಬೇಸರ ವ್ಯಕ್ತಪಡಿಸಿದರು.

ನಿವೇಶನಗಳಿಗೆ ಕಂದಾಯ ಕಟ್ಟಿಸಿಕೊಂಡ ನಂತರ ಸ್ಥಳದಲ್ಲಿಯೇ ಸಮಸ್ಯೆಗಳನ್ನು ಬಗೆಹರಿಸಬೇಕು. ನಿವೇಶನದ ಪ್ರಕ್ರಿಯೆಗಳನ್ನು ಕಡತಗಳಲ್ಲಿ ನಮೂದಿಸುವ ಮುನ್ನ ಎಚ್ಚರ ಇರಬೇಕು. ಈ ಕೆಲಸ ಮಾಡುವ ಅಧಿಕಾರಿಗಳು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಅತ್ಯಂತ ಅಗತ್ಯ. ಸ್ವತ್ತು, ನಿವೇಶನ ಸಂಖ್ಯೆ, ಖಾತೆದಾರರ ಹೆಸರುಗಳನ್ನು ಕಡತದಲ್ಲಿ ಸೂಕ್ತವಾಗಿ ನಮೂದಿಸಬೇಕು. ಆ ಬಳಿಕ ಡಿಜಿಟಲ್‌ಗೆ ಹಾಕಬಹುದು. ಸಿಬ್ಬಂದಿ ಅತ್ಯಂತ ಮುತುವರ್ಜಿಯಿಂದ ಕೆಲಸ ಮಾಡದಿದ್ದರೆ, ಮುಖ್ಯಾಧಿಕಾರಿಗಳಿಗೆ ತೊಂದರೆಯಾಗಲಿದೆ ಎಂದು ಎಚ್ಚರಿಸಿದರು.

ಪೈಲೆಟ್ ಪ್ರಾಜೆಕ್ಟ್ ಆಗಿ ಯುಎಲ್‌ಬಿ ಡಿಜಿಟಲ್ ಸರ್ವೆ ಮಾಡುತ್ತಿದ್ದು, ಪ್ರತಿಯೊಂದು ನಿವೇಶನದ ಆನ್‌ಲೈನ್ ನಕ್ಷೆಯಾಗಬೇಕು. ದಾಖಲಾತಿಗಳು ಆನ್‌ಲೈನ್‌ನಲ್ಲಿ ನಮೂದಾಗಿರಬೇಕು. ಬಜೆಟ್‌ಗೂ ಮುನ್ನ ಫೆ.10ರೊಳಗೆ ಸಮಸ್ಯೆಗಳನ್ನು ತಿಳಿಸಬೇಕು. ಮುಡಾ ನಿವೇಶನ ಹಾಗೂ ಖಾಸಗಿ ಬಡಾವಣೆಗಳನ್ನು ವಶಪಡಿಸಿಕೊಳ್ಳುವ ಸಂಬಂಧ ಪ್ರತಿಯೊಬ್ಬರು ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಬೇಕು ಎಂದು ನಿರ್ದೇಶನ ನೀಡಿದರು. ಕ್ಷೇತ್ರ ವ್ಯಾಪ್ತಿಯ ನಗರಸಭೆ, ಪಪಂನ ಅಧಿಕಾರಿ ಮತ್ತು ಸಿಬ್ಬಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಶಾಸಕ ಕೆ. ಹರೀಶ್‌ಗೌಡರಿಂದ ವಿವಿಧ ಕಾಮಗಾರಿಗಳಿಗೆ ಚಾಲನೆ



ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು, ಜ.27(ಜಿಎ)-ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆಯ 15ನೇ ಹಣಕಾಸು ಅನುದಾನದಲ್ಲಿ 116 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್ ನಂ.23ರಲ್ಲಿ ಜಗನ್ಮೋಹನ ಅರಮನೆ ಮುಂಭಾಗದ ರಸ್ತೆ, ಅಡ್ಡ ರಸ್ತೆಗಳ ಮರು ಡಾಂಬರೀಕರಣ ಹಾಗೂ ಯುಜಿಡಿ ಕಾಮಗಾರಿಗೆ ಕತ್ತರಿಸಿರುವ ರಸ್ತೆಗಳ ದುರಸ್ತಿ ಹಾಗೂ 25 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್ ನಂ.40ರಲ್ಲಿ ನಜರ್‌ಬಾದ್‌ನ ಮಸೀದಿ ಅಡ್ಡರಸ್ತೆಗಳು ಹಾಗೂ ದುರ್ಗಮ್ಮ ದೇವಸ್ಥಾನದ ಅಡ್ಡರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 50 ಕೋಟಿ ರೂ.ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗೆ ಈಗಾಗಲೇ ಚಾಲನೆ ನೀಡಲಾಗಿದ್ದು, ಕೆಲವೆಡೆ ಶೇ.50 ರಷ್ಟು ಕಾಮಗಾರಿ ಆಗಿದೆ. ಕ್ಷೇತ್ರ ಅಭಿವೃದ್ಧಿಗೆ ಪ್ರಮುಖ ಗುರಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ರಮೇಶ್ ರಾಯಪ್ಪ, ವಾರ್ಡ್ ಅಧ್ಯಕ್ಷ ನಂಜುಂಡಸ್ವಾಮಿ, ಆನಂದ್, ಮೋಹನ್ ಕುಮಾರ್, ಮುಖಂಡರಾದ ಮಹದೇವು, ಮಂಜುನಾಥ್, ಜ್ಞಾನೇಶ್,ಪವನ್, ರವಿಚಂದ್ರ, ಶಾಂತ, ರಾಣಿ, ಮಂಜುಳ ,ಯಶೋಧ, ಮಂಗಳ, ಚೆಲುವರಾಜ್, ಜಗದೀಶ್, ಮಂಜಣ್ಣ, ಮನುಗೌಡ, ಶೇಖರ್,ಹರೀಶ್‌ಗೌಡ, ಲೋಕೇಶ್ವರ, ಎಸ್.ಕುಮಾರ್, ಕುಶಾಲ್ ಕುಮಾರ್,ಚಂದ್ರಶೇಖರ್, ಎಸ್.ಆರ್. ರವಿಕುಮಾರ್, ದೀಪಕ್ ಪುಟ್ಟಸ್ವಾಮಿ, ಮಾದೇಶ್ ಶಿವಣ್ಣ, ರವಿ ನಾಯಕ್, ಸುಹಾಸ್, ಗ್ಯಾರೇಜ್ ಮಾದೇವ್, ಪಾಪ ಈರೇಗೌಡ, ವಿಕಾಸ್ ಸಿಂಹ, ಜಾವೇದ್, ಭಾಗ್ಯಮ್ಮ, ಸುರೇಶ್, ನಗರ ಪಾಲಿಕೆ ಅಧಿಕಾರಿಗಳಾದ ಪ್ರತಿಭಾ, ವೆಂಕಟೇಶ್, ಶಾಂತರಾಜು, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಕುಂಭಮೇಳ: ಸಂಗಮದಲ್ಲಿ ಅಮಿತ್ ಶಾ ಪವಿತ್ರ ಸ್ನಾನ

ಪ್ರಯಾಗ್‌ರಾಜ್: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಸಾಧುಗಳ ಜೊತೆಗೆ ಪವಿತ್ರ ಸ್ನಾನ ಮಾಡಿದರು. ಇದೇ ವೇಳೆ ಐಸಿಸಿ ಅಧ್ಯಕ್ಷ ಮತ್ತು ಅಮಿತ್ ಶಾ ಅವರ ಪುತ್ರ ಜಯ್ ಶಾ ಅವರ ಗಂಡು ಮಗುವಿಗೆ ಸಾಧುಗಳು ಆಶೀರ್ವದಿಸಿದರು.

ಅಮಿತ್ ಶಾ ಅವರು ಇಂದು ಪ್ರಯಾಗ್‌ರಾಜ್‌ನ ಸಂಗಮ ತ್ರಿವೇಣಿಯಲ್ಲಿ ಪತ್ರ ಸ್ನಾನ ಮಾಡಿದರು. ಶಾ ಅವರೊಂದಿಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಬಾಬಾ ರಾಮ್‌ದೇವ್ ಸೇರಿದಂತೆ ಹಲವು ಸಂತರು ಮತ್ತು ಸಾಧುಗಳು ಇದ್ದರು.

ಪವಿತ್ರ ಸ್ನಾನಕ್ಕೂ ಮೊದಲು, ಅಮಿತ್ ಶಾ ಮತ್ತು ಸಿಎಂ ಯೋಗಿ ಆದಿತ್ಯನಾಥ್ ಅವರು ಪ್ರಯಾಗ್‌ರಾಜ್‌ನಲ್ಲಿರುವ ಸಾಧು, ಸಂತರನ್ನು ಭೇಟಿ ಮಾಡಿ ಸಂವಾದ ನಡೆಸಿದರು.



ಕೇಂದ್ರ ಗೃಹ ಸಚಿವರು ಪವಿತ್ರ ಸ್ನಾನದ ನಂತರ ಬಡೇ ಹನುಮಾನ್ ಜಿ ದೇವಸ್ಥಾನ ಮತ್ತು ಅಭಯವತ್‌ಗೆ ಭೇಟಿ ನೀಡಲಿದ್ದಾರೆ. ನಂತರ ಜುನಾ ಅಖಾರಕ್ಕೆ ತೆರಳಿ ಮಹಾರಾಜರು ಮತ್ತು ಅಖಾರದ ಇತರ ಸಂತರನ್ನು ಭೇಟಿ ಮಾಡಿ ಅವರೊಂದಿಗೆ ಭೋಜನ ಸೇವಿಸಲಿದ್ದಾರೆ.

ಜಾಗತಿಕ ಶಾಂತಿಗಾಗಿ ಒಟ್ಟಾಗಿ ಕೆಲಸ ಮಾಡೋಣ

ಅಮೆರಿಕ ಅಧ್ಯಕ್ಷ ಟ್ರಂಪ್ ಜೊತೆ ಪ್ರಧಾನಿ ಮೋದಿ ಚರ್ಚೆ

ನವದೆಹಲಿ: ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಅಧಿಕಾರ ವಹಿಸಿಕೊಂಡ ಒಂದು ವಾರದ ನಂತರ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಡೊನಾಲ್ಡ್ ಟ್ರಂಪ್ ಅವರೊಂದಿಗೆ ಇಂದು ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಜನವರಿ 20ರಂದು ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಇಂದು ಫೋನ್ ಮೂಲಕ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತನಾಡಿದ್ದು, ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಚರ್ಚಿಸಿದ್ದಾರೆ. ಜಾಗತಿಕ ಶಾಂತಿಗಾಗಿ ಅಮೆರಿಕ ಮತ್ತು ಭಾರತ ಎರಡೂ ಒಟ್ಟಾಗಿ ಕೆಲಸ ಮಾಡೋಣ ಎಂದು ಟ್ರಂಪ್‌ಗೆ ಮೋದಿ ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಭಾರತದ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಉತ್ತಮ ಸಂಬಂಧ ಹೊಂದಿದ್ದಾರೆ. ಈ ಹಿಂದೆ ಅಮೆರಿಕದ ಭಾರತೀಯ ಅನಿವಾಸಿಗಳಿಗೆ ಟ್ರಂಪ್ ಪರವಾದ ಚುನಾವಣಾ ಪ್ರಚಾರದಲ್ಲೂ ಮೋದಿ ಭಾಗಿಯಾಗಿದ್ದರು. ಕಳೆದ ವಾರ ಅಮೆರಿಕದ 47ನೇ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ನಂತರ ಪ್ರಧಾನಿ ಮೋದಿ ಟ್ರಂಪ್ ಅವರನ್ನು ಅಭಿನಂದಿಸಿದ್ದರು.

"ಅಮೆರಿಕದ 47ನೇ ಅಧ್ಯಕ್ಷರಾಗಿ ಐತಿಹಾಸಿಕ ಪ್ರಮಾಣವಚನ ಸ್ವೀಕರಿಸಿದ ನನ್ನ ಆತ್ಮೀಯ ಗೆಳೆಯ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅಭಿನಂದನೆಗಳು! ನಮ್ಮ ಎರಡೂ ದೇಶಗಳಿಗೆ ಪ್ರಯೋಜನವಾಗುವಂತೆ ಮತ್ತು ಜಗತ್ತಿಗೆ ಉತ್ತಮ ಭವಿಷ್ಯವನ್ನು ರೂಪಿಸಲು ಮತ್ತೊಮ್ಮೆ ನಿಕಟವಾಗಿ ಕೆಲಸ ಮಾಡಲು



ನಾನು ಎದುರು ನೋಡುತ್ತಿದ್ದೇನೆ!" ಎಂದು ಎಕ್ಸ್‌ನಲ್ಲಿ ಮೋದಿ ಪೋಸ್ಟ್ ಮಾಡಿದ್ದರು.

ಇಂದು ಎಕ್ಸ್‌ನಲ್ಲಿ ಟ್ರಂಪ್ ಜೊತೆಗಿನ ಮಾತುಕತೆಯ ಬಗ್ಗೆ ಪೋಸ್ಟ್ ಮಾಡಿರುವ ಮೋದಿ, ನನ್ನ ಆತ್ಮೀಯ ಸ್ನೇಹಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತನಾಡಿ ಸಂತೋಷವಾಯಿತು. ಅವರ ಐತಿಹಾಸಿಕ ಎರಡನೇ ಅವಧಿಗೆ ನಾನು ಅಭಿನಂದಿಸಿದೆ. ಪರಸ್ಪರ ಪ್ರಯೋಜನಕಾರಿ ಮತ್ತು ವಿಶ್ವಾಸಾರ್ಹ ಪಾಲುದಾರಿಕೆಗೆ ನಾವು ಬದ್ಧರಾಗಿದ್ದೇವೆ. ನಮ್ಮ ಜನರ ಕಲ್ಯಾಣಕ್ಕಾಗಿ ಜಾಗತಿಕ ಶಾಂತಿ, ಸಮೃದ್ಧಿ ಮತ್ತು ಭದ್ರತೆಗಾಗಿ ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ" ಎಂದು ಪ್ರಧಾನಿ ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಕಳೆದ ಸೋಮವಾರ, ಟ್ರಂಪ್ ತಮ್ಮ ಎರಡನೇ ಅವಧಿಯನ್ನು ಅಮೆರಿಕದ ವಲಸೆ ಸುಧಾರಣೆಗಳನ್ನು ಗುರಿಯಾಗಿಸಿಕೊಂಡು ಹಲವು ಆದೇಶಗಳಿಗೆ ಸಹಿ ಹಾಕುವ ಮೂಲಕ ಪ್ರಾರಂಭಿಸಿದರು. ಇದರಲ್ಲಿ H1-B ವೀಸಾಗಳಿಗೆ ಬದಲಾವಣೆಗಳು ಸೇರಿವೆ.

ಮೈಸೂರಲ್ಲಿ ಜೇನು ಕೃಷಿಕರ ಕಾರ್ಯಾಗಾರ

ಕಡಿಮೆ ಹೂಡಿಕೆಯಲ್ಲಿ ದೊಡ್ಡಮಟ್ಟದ ಲಾಭ ಪಡೆಯಲು ಸಹಕಾರಿ



ಮಹಾಜನ ಪ್ರೌಢಶಾಲೆ ಸಭಾಂಗಣದಲ್ಲಿ ರಾಜ್ಯಮಟ್ಟದ ಜೇನು ಕೃಷಿಕರ ಕಾರ್ಯಾಗಾರ ನಡೆಯಿತು.

ಮೈಸೂರು, ಜ.27(ಎಂಕೆ)- ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಪ್ರೌಢಶಾಲೆ ಸಭಾಂಗಣದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಉದ್ಯೋಗ್ ಭಾರತಿ ಮೈಸೂರು ವಿಭಾಗದ ಸಹಯೋಗದೊಂದಿಗೆ ರಾಜ್ಯಮಟ್ಟದ ಜೇನು ಕೃಷಿಕರ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ ಲಘು ಉದ್ಯೋಗ್ ಭಾರತಿ ಉಪಾಧ್ಯಕ್ಷೆ ಹಾಗೂ ನೆಕ್ಟರ್ ಫ್ರೆಸ್ ಅಂಡ್ ನಮನ್ ಸಂಸ್ಥಾಪಕಿ ಛಾಯಾ ನಂಜಪ್ಪ ಮಾತನಾಡಿ, ಕಡಿಮೆ ಬಂಡವಾಳ ಹೂಡಿಕೆಯಲ್ಲಿ ದೊಡ್ಡಮಟ್ಟದ ಲಾಭಪಡೆಯಲು ಜೇನು ಕೃಷಿ ಸಹಕಾರಿಯಾಗಿದ್ದು, ಗುಣಮಟ್ಟದ ಜೇನು ಉತ್ಪಾದನೆಗೆ ವಿಶ್ವದೆಲ್ಲೆಡೆ ಬೇಡಿಕೆ ಇದೆ ಎಂದರು.

ಜೇನನ್ನು ಆಹಾರ ಪದಾರ್ಥದಿಂದ ಹಿಡಿದು ಔಷಧಿಗಳ ತಯಾರಿಕೆಗೂ ಬಳಕೆ ಮಾಡಲಾಗುತ್ತದೆ. ಜಾಮ್, ಗುಲ್ಕನ್ ಸೇರಿದಂತೆ 24 ಬಗೆಯ ಜೇನಿನ ಪ್ರಾಡಕ್ಟ್‌ಗಳನ್ನು ಇದುವರೆಗೆ ಮಾರುಕಟ್ಟೆಯಲ್ಲಿ ತರುವಲ್ಲಿ ಯಶಸ್ವಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ 250ಟನ್ ಜೇನು ಉತ್ಪಾದಿಸುವ ಗುರಿ ಹೊಂದಿದ್ದೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೇನು ಕೃಷಿ ಆರಂಭಿಸಿದ ಕೆಲ ದಿನಗಳಲ್ಲಿಯೇ ದೊಡ್ಡದಾಗಿ ಬೆಳೆಯಲು ಸಾಧ್ಯವಿಲ್ಲ. ಹಂತ ಹಂತವಾಗಿ ಅದರಲ್ಲೂ ಗುಣಮಟ್ಟ ಕಾಯ್ದುಕೊಂಡಂತೆ ಬೇಡಿಕೆಯೂ ಹೆಚ್ಚಾಗುತ್ತದೆ. ಮೊದಲು ಸಂಬಂಧಪಟ್ಟ ಇಲಾಖೆಗೆ ಭೇಟಿ ನೀಡಿ, ಜೇನು ಕೃಷಿಯ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು. ಹೊರದೇಶಗಳಿಗೆ ಜೇನು ರಫ್ತು ಮಾಡಬಹುದು. ಆದರೆ ಅಷ್ಟು ಸುಲಭವು ಅಲ್ಲ. ಕಲಿಕೆ ಮುಖ್ಯವಾಗಿದ್ದು, ಮುಂದಿನ ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸಲಾಗುವುದು ಎಂದರು.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಸಿಇಓ ಎಲ್.ಮದನ್ ಕುಮಾರ್ ರೆಡ್ಡಿ ಮಾತನಾಡಿ, ಮಹಾತ್ಮ ಗಾಂಧಿಯವರ ಸ್ವರಾಜ್ಯ ಪರಿಕಲ್ಪನೆ ಆಧಾರದ ಮೇಲೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಕೆಲಸ ಮಾಡುತ್ತಿದೆ. ನಿರುದ್ಯೋಗಿಗಳು ಅದರಲ್ಲೂ ಹೆಣ್ಣು ಮಕ್ಕಳು ಸ್ವಾವಲಂಬಿಗಳಾಗಿ ಜೀವನ ಸಾಗಿಸಲು ಜೈನು ಕೃಷಿ ಅನುಕೂಲಕರವಾಗಿದೆ. ಚಿಕ್ಕದಾಗಿ ಆರಂಬಿಸಿ, ದೊಡ್ಡ ಉದ್ಯಮವಾಗಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಶ್ರೀಗಂಗಾ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ರಾಜ್‌ಕಾಮಯ್ಯ ಮಾತನಾಡಿ, ಜೇನು ಸಾಕಾಣಿಕೆಯಿಂದ ರೈತರು ಬದುಕುತ್ತಿದ್ದಾರೆ. ಜೇನು ರೈತ, ರೈತರನ್ನು ಬಿಟ್ಟು ಜೇನು ಇಲ್ಲವೆಂಬಂತಾಗಿದೆ. ಇಂದು ಎಲ್ಲದಕ್ಕೂ ಜೇನು ಬೇಕು. ಸೌಂದರ್ಯಕ್ಕೆ, ಆರೋಗ್ಯಕ್ಕೆ, ಔಷಧಿಗಳ ತಯಾರಿಕೆಗೆ ಜೇನು ಅವಶ್ಯವಿದೆ. ಜೇನು ಸಾಕಾಣಿಕೆಯಿಂದ ಸಾವಿರಾರು ರೈತರು ಕಡಿಮೆ ಖರ್ಚಿನಲ್ಲಿ ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಬೆಳೆಯುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ ಕಮಿಷನ್ ನಿರ್ದೇಶಕ ಬಸವರಾಜ, ಎಲ್‌ಯುಬಿ ಮೈಸೂರು ವಿಭಾಗದ ಮುರುಳಿಧರ ಭಾಗವತ್, ಜೈನು ಕೃಷಿಕ ಮಧುಕೇಶ್ವರ ಹೆಗಡೆ, ಖಾದಿ ಮತ್ತು ಗ್ರಾಮೋದ್ಯೋಗ ಸಹಾಯಕ ನಿರ್ದೇಶಕ ಎಂ.ಲಿಂಗಾದುರ್ಗೆ ಮತ್ತಿತರು ಉಪಸ್ಥಿತರಿದ್ದರು.

ಮುಕ್ತ ವಿವಿಯಲ್ಲಿ 76ನೇ ಗಣರಾಜ್ಯೋತ್ಸವ

ಭಾರತದ ಸಂವಿಧಾನ ಸರ್ವಶ್ರೇಷ್ಠ

ಮುಕ್ತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ

ಮೈಸೂರು,ಜ.27(ಪಿಎಂ)- ಸರ್ವಶ್ರೇಷ್ಠವಾದ ದೇಶದ ಸಂವಿಧಾನವನ್ನು ಸಂರಕ್ಷಿಸುವುದು ಭಾರತೀಯರ ಜವಾಬ್ದಾರಿಯಾಗಿದೆ ಎಂದು ಮುಕ್ತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಹೇಳಿದರು.

ಮುಕ್ತ ವಿವಿಯ ಆಡಳಿತ ಭವನದ ಮುಂಭಾಗ ಭಾನುವಾರ ಹಮ್ಮಿಕೊಂಡಿದ್ದ 76ನೇ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಭಾರತದ ಸಂವಿಧಾನ ಸಮಯಕ್ಕೆ ತಕ್ಕಂತೆ ತಿದ್ದುಪಡಿ ಮಾಡಿಕೊಳ್ಳುವ ಅವಕಾಶ ಸಹ ಹೊಂದಿದೆ. ಇದನ್ನು ರಚಿಸಲು 3 ವರ್ಷಗಳ ಕಾಲಾವಕಾಶ ತೆಗೆದುಕೊಳ್ಳಲಾಗಿದೆ. ಪ್ರತಿಯೊಬ್ಬ ನಾಗರಿಕನಿಗೂ ಶಿಕ್ಷಣ, ಉದ್ಯೋಗ ಪಡೆಯುವ ಹಕ್ಕು, ಸಾಮಾಜಿಕ ಘನತೆಯ ಹಕ್ಕು, ಮತ ಚಲಾವಣೆ ಹಕ್ಕು ಸೇರಿದಂತೆ ಅನೇಕ ಹಕ್ಕುಗಳನ್ನು ನೀಡಿದೆ. ಸಂವಿಧಾನ ಸಂರಕ್ಷಣೆ ಮೂಲಕ ದೇಶವನ್ನು ಉಳಿಸಿ ಬೆಳೆಸಬೇಕಿದೆ ಎಂದು ತಿಳಿಸಿದರು.

ಭಾರತೀಯರಾದ ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಬದುಕುತ್ತಿದ್ದು, ಇಂತಹ ವ್ಯವಸ್ಥೆಯಲ್ಲಿ ಸಾಮಾನ್ಯ ನಾಗರಿಕರ ಪಾತ್ರ ಪ್ರಾಮುಖ್ಯತೆ ಹೊಂದಿದೆ. ಯಾವುದೇ ಆಮಿಷಗಳಿಗೆ ಒಳಗಾಗದೇ ಪ್ರಾಮಾಣಿಕವಾಗಿ ಮತದಾನ ಚಲಾಯಿಸುವ ಮೂಲಕ ಶುದ್ಧಹಸ್ತರನ್ನು ಜನಪ್ರತಿನಿಧಿಗಳಾಗಿ ಆಯ್ಕೆ ಮಾಡಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಲ್ಲಿ ಸಾಮಾನ್ಯ ನಾಗರಿಕರು ಮಹತ್ವದ ಜವಾಬ್ದಾರಿ ನಿಭಾಯಿಸಬೇಕಿದೆ. ಪ್ರತಿದಿನ ಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು. ದೇಶದ ಆಗುಹೋಗುಗಳನ್ನು ಗಮನಿಸಬೇಕು. ಆ ಮೂಲಕ ತಪ್ಪುಗಳನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಇದಕ್ಕೂ ಮುನ್ನ ಧ್ವಜಾರೋಹಣ ನೆರವೇರಿಸಲಾಯಿತು. ವಿಧಾನಪರಿಷತ್ ಮಾಜಿ ಸದಸ್ಯ ರಮೇಶ್, ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ್, ಶೈಕ್ಷಣಿಕ ಡೀನ್ ಪ್ರೊ.ಎನ್.ಲಕ್ಷ್ಮೀ ಸೇರಿದಂತೆ ವಿವಿಯ ನೌಕರರು ಹಾಜರಿದ್ದರು.



ಮುಕ್ತ ವಿವಿ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು.

ನಕ್ಕರೆ ಅದೇ ಸ್ವರ್ಗ

ಬಸ್ಯಾ : ಸಂಸಾರಿ ಸನ್ಯಾಸಿಯಾಗಲು ಬಯಸುತ್ತಾನೆ. ಸನ್ಯಾಸಿ ಸಂಸಾರಿಯಾಗಲು ಬಯಸುತ್ತಾನೆ. ಗೊತ್ತಾ?

ಸಂತ : ಕಾರಣ?

ಬಸ್ಯಾ : ಮೊದಲನೆಯದು 'ಭಯಕ್ಕೆ', ಎರಡನೆಯದು 'ಬಯಕೆ'.

ಮೈಸೂರು ಮಿತ್ರ

ಮಂಗಳವಾರ, 28 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........


ನಮ್ಮ ಜೀವನದಲ್ಲಿ ನಡೆಯುವ ಅನೇಕ ನಾಟಕಗಳಿಗೆ ಕಲಾವಿದರು ನಮ್ಮವರೇ ಆಗಿರುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಲ್ಲಾ ಕೆಡುಕಿಗೂ ಮೂಲ ಹೊಟ್ಟೆಕಿಚ್ಚು.

ನಿಮ್ಮ ಪತ್ರಗಳು

■ ಮಲ ಮೂತ್ರ ವಿಸರ್ಜನೆ–ತ್ಯಾಜ್ಯ ಹಾಕಲು ಈ ರಸ್ತೆ ಅಭಿವೃದ್ಧಿಪಡಿಸಬೇಕಿತ್ತಾ...!

ಮಾನ್ಯರೆ,



ವಾರ್ಡ್ 51ಕ್ಕೆ ಸೇರುವ ಬನುಮಯ್ಯ ಚೌಕದ ಬಳಿ ಇರುವ ಅಹೋಬಿಲಂ ನರಸಿಂಹ ದೇವಸ್ಥಾನದ ಪಕ್ಕದ ಬೀದಿಗೆ ನಗರಪಾಲಿಕೆ ಲಕ್ಷಗಟ್ಟಲೆ ಖರ್ಚು ಮಾಡಿ ಇಂಟರ್ ಲಾಕಿಂಗ್ ಟೈಲ್ಸ್ ಹಾಕಿಸಿತ್ತು. ಇದರ ಉದ್ದೇಶ ಕುಂಚಿಟಿಗರ ಬೀದಿಯಿಂದ ಅಹೋಬಿಲ ನರಸಿಂಹ ದೇವಸ್ಥಾನಕ್ಕೆ ಹಾಗೂ ರಮಾವಿಲಾಸ ರಸ್ತೆಗೆ ಸಂಪರ್ಕ ಕಲ್ಪಿಸಿ ಸ್ಥಳೀಯ ನಿವಾಸಿಗಳು ಹಾಗೂ ದೇವಸ್ಥಾನಕ್ಕೆ ಭಕ್ತರು ಓಡಾಡಲು ಅನುಕೂಲವಾಗಲಿ ಎಂದು. ಆದರೆ ದೇವಸ್ಥಾನದ ಪಕ್ಕದಲ್ಲೇ ಇರುವ ಈ ಬೀದಿ ಬಹಳ ವರ್ಷಗಳಿಂದ ದಾರಿಹೋಕರ ಮೂತ್ರ ವಿಸರ್ಜನೆ ಹಾಗೂ ಸಾಕಿದ ನಾಯಿಗಳ ಮಲ ಮೂತ್ರ ವಿಸರ್ಜನೆಗೆ ಬಳಕೆಯಾಗುತ್ತಿದೆ. ಹತ್ತಿರದಲ್ಲೇ ಇರುವ ಮಾಂಸಾಹಾರಿ ಹೋಟೆಲ್‌ಗಳ ತ್ಯಾಜ್ಯಗಳೂ ಸಹ ದೇವಸ್ಥಾನದ ಪಕ್ಕದಲ್ಲೇ ಬಂದು ಬೀಳುತ್ತಿವೆ. ಲಕ್ಷಗಟ್ಟಲೆ ಖರ್ಚು ಮಾಡಿ ಟೈಲ್ಸ್ ಹಾಕಿಸುವ ಬದಲು ನಗರಪಾಲಿಕೆ ಹಾಗೂ ವಾರ್ಡ್ 51ರ ಜನಪ್ರತಿನಿಧಿಗಳು ಇಲ್ಲಿ ಸಾರ್ವಜನಿಕ ಶೌಚಾಲಯ ಕಟ್ಟಿಸಬಹುದಿತ್ತು. ಇಲ್ಲಿ ನರಸಿಂಹ ದೇವಸ್ಥಾನವಿದೆ. ಸಾರ್ವಜನಿಕರು ಮೂತ್ರ ವಿಸರ್ಜನೆ– ಗಲೀಜು ಮಾಡಬೇಡಿ. ಕಸ ತ್ಯಾಜ್ಯ ದೇವಸ್ಥಾನದ ಪಕ್ಕ ಹಾಕಬೇಡಿ ಎಂದು ಬೋರ್ಡ್ ಅನ್ನು ಇದುವರೆಗೂ ನಗರಪಾಲಿಕೆಯಾಗಲೀ, ಜನಪ್ರತಿನಿಧಿಗಳಾಗಲೀ ಹಾಕಿಸದೆ ಇರುವುದು ಈ ನರಸಿಂಹ ದೇವಸ್ಥಾನದ ಬಗ್ಗೆ ಅವರಿಗೆ ಇರುವ ನಿರ್ಲಕ್ಷ್ಯ ಧೋರಣೆಯನ್ನು ಎತ್ತಿ ತೋರಿಸುತ್ತಿದೆ. ಈಗ ವಾರ್ಡ್ 51ಕ್ಕೆ ಚುನಾಯಿತ ಕಾರ್ಪೊರೇಟರ್‌ಗಳು ಇಲ್ಲದೇ ಇರುವುದರಿಂದ, ದೈವಭಕ್ತರಾದ ಕೃಷ್ಣರಾಜ ಕ್ಷೇತ್ರದ ಈಗಿನ ಶಾಸಕರು ಮನಸ್ಸು ಮಾಡಿ ಅಹೋಬಿಲ ನರಸಿಂಹ ದೇವಸ್ಥಾನದ ಪರಿಸರ, ಪಾವಿತ್ರ್ಯತೆ ಕಾಪಾಡಲು ಸೂಕ್ತ ನಿರ್ದಿಷ್ಟ ಯೋಜನೆಯನ್ನು ರೂಪಿಸಿ, ಈ ಜಟಿಲ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಪಡುತ್ತಾರೆಂದು ನಾವು ನಿರೀಕ್ಷೆ ಇಟ್ಟುಕೊಳ್ಳಬಹುದೇ?

–ಪ್ರೊ. ಎಂ.ಎಸ್.ಎಸ್.ಶರ್ಮ, ಸಮಾಜಮುಖಿ ಚಿಂತಕ, ಮೈಸೂರು.

■ ಚೆಸ್ಕಾಂಗೆ ನಮ್ಮದೊಂದು ಸಲಹೆ

ಮಾನ್ಯರೆ,



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಸಿಬ್ಬಂದಿಯು (ವಿದ್ಯುತ್ ಇಲಾಖೆ, CESC) ಪ್ರತಿ ತಿಂಗಳು ಮನೆ ಮನೆಗೆ ಬಂದು ಗ್ರಾಹಕರು ಬಳಸಿದ ವಿದ್ಯುತ್‌ಗೆ ರೀಡಿಂಗುಗಳನ್ನು ದಾಖಲಿಸಿಕೊಂಡು, ಆ ಪ್ರಕಾರ ಪಾವತಿಸಬೇಕಾದ ಮೊತ್ತಕ್ಕೆ ಬಿಲ್ಲನ್ನು ಕೊಡುವ ಪರಿಪಾಠ ತಿಳಿದದ್ದೇ. ಇದನ್ನು ಇಲಾಖೆಯು ಕೊಂಚ ಸುಲಭಗೊಳಿಸಿಕೊಂಡು, ಒಂದಷ್ಟು ಉಳಿತಾಯ ಮಾಡಿಕೊಳ್ಳಲು ಆಸ್ಪದವಿದೆ.

ಮೀಟರ್–ರೀಡಿಂಗ್‌ನಲ್ಲಿ ಮುಖ್ಯಾಂಶವು ಖರ್ಚಾದ ಈಗಿನ 'ಯೂನಿಟ್' [kWh]. ಇದರ ರೀಡಿಂಗನ್ನು ಗ್ರಾಹಕನು ತಾನೇ ಮೀಟರ್‌ನಿಂದ ಓದಿಕೊಂಡು (reading) ಬರೆದುಕೊಳ್ಳಬಹುದು.

ಇದನ್ನು ತಾನೇ ಇಲಾಖೆಗೆ ವಾಟ್ಸಾಪ್, ಎಸ್‌ಎಂಎಸ್ ಮೂಲಕ ಸಂದೇಶವಾಗಿ ತಿಳಿಯಪಡಿಸಬಹುದು. ಇಲಾಖೆಯ ಸಿಬ್ಬಂದಿಯು ಈ ಸಂದೇಶದ 'ರೀಡಿಂಗ್' ಮೇರೆಗೆ 'ಬಿಲ್' ತಯಾರಿಸಿ, ಗ್ರಾಹಕರಿಗೆ ಅಂಚೆಯ ದ್ವಾರ ಬಿಲ್ಲನ್ನು ರವಾನಿಸಬಹುದು. ಇದರಿಂದಾಗಿ ಇಲಾಖೆಯು ತಮ್ಮ ಸಿಬ್ಬಂದಿಯನ್ನು ಪ್ರತಿಯೊಂದು ಮನೆಗೂ ಕಳಿಸುವುದು ತಪ್ಪುತ್ತದೆ. ಇದು ನೇರ ಉಳಿತಾಯ ತಾನೇ?

ಕೆಲವು ಗ್ರಾಹಕರು ಈ ರೀತಿ ಮೀಟರ್–ವಾಚನ ಮಾಡದಿರಬಹುದು. ಅಂತಹ ಸಂದರ್ಭದಲ್ಲಿ ಸಿಬ್ಬಂದಿಯು ಆ ಮನೆಗಳಿಗೆ ಮಾತ್ರ ಭೇಟಿ ನೀಡಬೇಕಾದೀತು.

ಈ ವ್ಯವಸ್ಥೆಯನ್ನು ಜಾರಿಗೆ ತಂದುಕೊಂಡರೂ, ಇಲಾಖೆಯು ಒಮ್ಮೊಮ್ಮೆ (ಸಂದೇಶದ ಮೂಲಕ ರೀಡಿಂಗ್ ಕಳಿಸಿದ್ದರೂ, ಮೀಟರಿನ ಸುಸ್ಥಿತಿಯನ್ನು ಪರೀಕ್ಷಿಸಲು, ಚೆಕ್ ಮಾಡಬಹುದು!) ಕೆಲವು ಮನೆಗಳಿಗೆ ಯಾದೃಚ್ಛಿಕವಾಗಿ (randomly) ಭೇಟಿ ನೀಡಿ ಚೆಕ್ ಮಾಡಿಯೇ 'ಬಿಲ್' ನೀಡಲು ಅಡ್ಡಿಯಿಲ್ಲ. ಈ ಸಾಧ್ಯತೆಯನ್ನು ಕುರಿತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ವಿಚಾರ ವಿಮರ್ಶೆ ನಡೆಸಿಕೊಂಡು ಸೂಕ್ತ ಕ್ರಮ ಕೈಗೊಳ್ಳಬಹುದು.

–ಡಿ ವಿ ಮೋಹನ ಪ್ರಕಾಶ್, ಗೋಕುಲ ರಸ್ತೆ, ಮೈಸೂರು.

■ ರಸ್ತೆ ಕಾಮಗಾರಿ ತ್ವರಿತಗೊಳಿಸುವಂತೆ ಮನವಿ



ಮಾನ್ಯರೆ,

ಮೈಸೂರಿನ ತುಂಬಾ ಜನಸಂದಣಿಯಿಂದ ಕೂಡಿರುವ ಎಂ.ಜಿ. ರಸ್ತೆ, ಅಗ್ರಹಾರ, ಹಳೇ ಜೆಎಸ್‌ಎಸ್ ಆಸ್ಪತ್ರೆ ಬಳಿ ಪೈಪ್‌ಲೈನ್ ಮತ್ತು ರಸ್ತೆ ಕಾಮಗಾರಿ ನಡೆಯುತ್ತಿರುವುದು ಸರಿಯಷ್ಟೆ ಈ ಕಾಮಗಾರಿ ವಿಳಂಬವಾಗುತ್ತಿರುವುದು ಸಾರ್ವಜನಿಕರ ಮೇಲೆ ಮಾತ್ರವಲ್ಲದೆ ಸುತ್ತಮುತ್ತಲಿನ ಸಣ್ಣ ವ್ಯಾಪಾರ–ವ್ಯವಹಾರ ವಹಿವಾಟು ಸ್ಥಳಗಳ ಮಾಲೀಕರ ಮೇಲೂ ಪರಿಣಾಮ ಬೀರುತ್ತಿದೆ. ಈ ದೀರ್ಘಕಾಲದ ಅನಾನುಕೂಲತೆಯ ಅವಧಿಯಲ್ಲಿ ನಮ್ಮ ಬಾಡಿಗೆ ಮತ್ತು ಇತರ ಖರ್ಚುಗಳನ್ನು ನಿರ್ವಹಿಸುವ ಎಲ್ಲರೂ ಚಿಂತಾಕ್ರಾಂತರಾಗಿದ್ದಾರೆ. ಅಲ್ಲದೆ, ವಾಹನ ದಟ್ಟಣೆ ಜಾಸ್ತಿ ಇರುವುದರಿಂದ ಆಂಬ್ಯುಲೆನ್ಸ್ ಇನ್ನಿತರೆ ವಾಹನಗಳ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಈ ಪ್ರದೇಶದ ಸಣ್ಣ ಸಣ್ಣ ವ್ಯಾಪಾರಿಗಳಿಗೆ ಆಗುತ್ತಿರುವ ನಷ್ಟವನ್ನು ತಪ್ಪಿಸಲು ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಕಳಕಳಿಯ ಮನವಿ.

–ಆಶಿಸ್ ಕೆ. ಭಂಡಾರಿ, ಅಗ್ರಹಾರ, ಮೈಸೂರು.

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಸವಾಲನ್ನು ಎದುರಿಸಿದವರು

ಬದುಕನ್ನು ಕುರಿತು ಅದೆಷ್ಟು ಜನ ತಮಗೆ ತೋರಿದ, ತಮ್ಮ ಅನುಭವಕ್ಕೆ ಬಂದ ವ್ಯಾಖ್ಯಾನಗಳನ್ನು ನೀಡಿದ್ದಾರೆ! ಬದುಕು ಎಲ್ಲರಿಗೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಅವರವರ ಪಾಲಿಗೆ ಬಂದ ಬದುಕನ್ನು ಸ್ವೀಕರಿಸಲೇಬೇಕಾದ ಅನಿವಾರ್ಯ ಸ್ಥಿತಿ ನಮ್ಮದಲ್ಲವೇ? ನಮಗೆ ಬೇರೆ ಆಯ್ಕೆಯಾದರೂ ಎಲ್ಲಿದೆ? ಪಾಲಿಗೆ ಬಂದದ್ದನ್ನು, ಪಂಚಾಮೃತ ಎಂದು ಸ್ವೀಕರಿಸುವವರು ಕೆಲವರಾದರೆ, ತಮ್ಮ ಬದುಕನ್ನು ತಮ್ಮ ಇಷ್ಟ ಬಂದ ದಿಕ್ಕಿನಲ್ಲಿ ಕೊಂಡೊಯ್ಯುವ ಛಲ ಕೆಲವರಿಗೆ. ಬದುಕಿನ ಬೆಲೆಯನ್ನೇ ತಿಳಿಯದೆ, ಸುಮ್ಮನೇ ಬದುಕುವವರು ಕೆಲವರಾದರೆ, ಬದುಕನ್ನು ಸಾರ್ಥಕವಾಗಿ ಸಾಗಿಸುವವರು ಕೆಲವರು. ಇತರರ ಸೇವೆಯಲ್ಲೇ ಆ ಸಾರ್ಥಕತೆಯನ್ನು ಕಂಡುಕೊಳ್ಳುವವರು ಬೆರಳೆಣಿಕೆಯಷ್ಟು ಮಂದಿಯಾದರೆ, ಪರರ ದೂಷಿಸುವುದಕ್ಕೆಂದೇ ಚಾಚಿಕೊಂಡಿರುವ ನಾಲಿಗೆಗೆ ಪೂರ್ಣ ಕೆಲಸ ಕೊಡುವವರು ಮಗದಷ್ಟು ಮಂದಿ.

ಬದುಕು ಎಂಬುದು ಕಷ್ಟ–ಸುಖಗಳ ಮಿಶ್ರಣ ತಾನೇ. ಅದರಲ್ಲಿ ಕೆಲವರಿಗೆ ಹೆಚ್ಚು, ಮತ್ತೆ ಕೆಲವರಿಗೆ ಕಡಿಮೆ. ನನಗೇ ಏಕೆ ಆ ದೇವರು ಇಷ್ಟೊಂದು ಕಷ್ಟಗಳನ್ನು ಕೊಡುತ್ತಾನೆ ಎಂಬುದು ಕೆಲವರ ಅಳಲಾದರೆ, ಅದೆಂತಹ ಕಷ್ಟದಲ್ಲೂ ತುಟಿ ಎರಡು ಮಾಡದೆ, ಅದನ್ನು ಸಹಿಸುವವರು ಕೆಲ ಮಂದಿ. ತಮ್ಮ ಕಷ್ಟವನ್ನು ಪಕ್ಕಕ್ಕೆ ಸರಿಸಿ, ಪರರಿಗೆ ಸಂತೋಷವನ್ನು ಕೊಡುವುದರಲ್ಲಿ ತೃಪ್ತಿ ಪಡೆವ ಪುಣ್ಯಾತ್ಮರೂ ಕೆಲವು ಮಂದಿ. ಒಮ್ಮೆ ನಮ್ಮ ಸುತ್ತಲೂ ಗಮನಿಸಿ, ಬದುಕನ್ನು ಹತ್ತಾರು ಕೋನಗಳಿಂದ ನೋಡಲು ಅನೇಕ ಉದಾಹರಣೆಗಳು ನಮಗೆ ಸಿಗುತ್ತವೆ. ಅದೆಷ್ಟು ಬಗೆಯ ಬದುಕುಗಳು ನಮ್ಮ ಸುತ್ತಲೂ ತಳುಕು ಹಾಕಿಕೊಂಡಿರುತ್ತವೆ! ಅವುಗಳಿಂದ ಕಲಿಯಲು ನಮಗೆ ಅದೆಷ್ಟು ಅವಕಾಶ, ಯೋಚಿಸಿ. ಹಾಗೆ ತಮ್ಮ ಬದುಕಿನ ಮೂಲಕ ನನಗೆ ಪಾಠ ಕಲಿಸಿದ, ತಾಳ್ಮೆ ಎಂಬ ಅಮೂಲ್ಯ ಮೌಲ್ಯದ ನಿರಂತರ ಹನಿಗಳನ್ನು ಸಿಂಪಡಿಸಿದ ಕೆಲವು ವ್ಯಕ್ತಿಗಳ ನೈಜ ಬದುಕಿನೊಳಗೊಂದು ಇಣುಕು ನೋಟ ಇಂದಿನ ಅಂಕಣ. ಬದುಕನ್ನು ಅವರು ಎದುರಿಸಿದ ರೀತಿ ನನಗೆ ಸದಾ ಸ್ಫೂರ್ತಿದಾಯಕ. ಆ ಚೈತನ್ಯಮಯ ಚೇತನಗಳಿಗೆ ನನ್ನ ನಮನ.

> “ ಬದುಕು ಎಂಬುದು ಕಷ್ಟ–ಸುಖಗಳ ಮಿಶ್ರಣ ತಾನೇ. ಅದರಲ್ಲಿ ಕೆಲವರಿಗೆ ಹೆಚ್ಚು, ಮತ್ತೆ ಕೆಲವರಿಗೆ ಕಡಿಮೆ. ನನಗೇ ಏಕೆ ಆ ದೇವರು ಇಷ್ಟೊಂದು ಕಷ್ಟಗಳನ್ನು ಕೊಡುತ್ತಾನೆ ಎಂಬುದು ಕೆಲವರ ಅಳಲಾದರೆ, ಅದೆಂತಹ ಕಷ್ಟದಲ್ಲೂ ತುಟಿ ಎರಡು ಮಾಡದೆ, ಅದನ್ನು ಸಹಿಸುವವರು ಕೆಲ ಮಂದಿ. ತಮ್ಮ ಕಷ್ಟವನ್ನು ಪಕ್ಕಕ್ಕೆ ಸರಿಸಿ, ಪರರಿಗೆ ಸಂತೋಷವನ್ನು ಕೊಡುವುದರಲ್ಲಿ ತೃಪ್ತಿ ಪಡೆವ ಪುಣ್ಯಾತ್ಮರೂ ಕೆಲವು ಮಂದಿ. ಒಮ್ಮೆ ನಮ್ಮ ಸುತ್ತಲೂ ಗಮನಿಸಿ, ಬದುಕನ್ನು ಹತ್ತಾರು ಕೋನಗಳಿಂದ ನೋಡಲು ಅನೇಕ ಉದಾಹರಣೆಗಳು ನಮಗೆ ಸಿಗುತ್ತವೆ. ಅದೆಷ್ಟು ಬಗೆಯ ಬದುಕುಗಳು ನಮ್ಮ ಸುತ್ತಲೂ ತಳುಕು ಹಾಕಿಕೊಂಡಿರುತ್ತವೆ!

ಆತ ಉಡುಪಿಯವ. ಉದ್ಯೋಗವನ್ನು ಅರಸುತ್ತಾ ಮದ್ರಾಸಿಗೆ ಹೋಗಿ, ದೂರದ ಬಂಧುಗಳು ನಡೆಸುತ್ತಿದ್ದ ಹೊಟೆಲಿನಲ್ಲಿಯೇ ಕೆಲಸ ಮಾಡುತ್ತ ಜೀವನ ಸಾಗಿಸುತ್ತಿದ್ದ. ಮದುವೆಯ ಬಗ್ಗೆ ಅವನಿಗೆ ಅಷ್ಟಾಗಿ ಆಸಕ್ತಿ ಇರಲಿಲ್ಲ. ಮಾಲೀಕ ದಂಪತಿಗಳಿಗೆ ಇಬ್ಬರು ಹೆಣ್ಣುಮಕ್ಕಳು. ಅದರಲ್ಲಿ ಒಬ್ಬಳಿಗೆ ಬುದ್ಧಿಮಾಂದ್ಯತೆ. ವ್ಯಾಪಾರದ ಗಡಿಬಿಡಿಯ ಬದುಕಿನಲ್ಲಿ ಅವಳ ಕಡೆಗೆ ಅಷ್ಟಾಗಿ ಗಮನ, ಆಸಕ್ತಿ ವಹಿಸದ ತಂದೆ ತಾಯಿಗಳನ್ನು ಆತ ಗಮನಿಸುತ್ತಲೇ ಇದ್ದ. ಊರಿನಿಂದ ಮದುವೆಯಾಗೆಂದು ಅಪ್ಪ ಅಮ್ಮನ ಒತ್ತಾಯ ಹೆಚ್ಚಾಗುತ್ತಲೇ ಇತ್ತು. ಬೇಸತ್ತ ಆತ ಈ ಹುಡುಗಿಯನ್ನೇ ಮದುವೆಯಾಗಿ, ಅವಳಿಗೇಕೆ ಒಂದು ಬದುಕು ನೀಡಬಾರದು ಎಂದು ಯೋಚಿಸಿ, ಅವಳನ್ನೇ ಮದುವೆಯಾಗುತ್ತೇನೆ ಎಂದಾಗ ಸದ್ಯ ಮದುವೆಗೆ ಒಪ್ಪಿದನಲ್ಲ, ಯಾವ ಹುಡುಗಿಯಾದರೂ ಸರಿ ಎಂದು ಹೆತ್ತವರು ಖುಷಿಪಟ್ಟರು. ಮಾಲೀಕ ದಂಪತಿಗಳಿಗೂ ಸದ್ಯ, ಅವಳ ಜವಾಬ್ದಾರಿ ತಪ್ಪಿತಲ್ಲ ಎಂಬ ನೆಮ್ಮದಿ. ಮದುವೆಯ ನಂತರ ಅತ್ತೆಯ ಮನೆಯಲ್ಲೇ ಅವನ ವಾಸ. ದೇಹ ಬೆಳೆದಿದ್ದರೂ ಮಗುವಿನಷ್ಟೇ ಬುದ್ಧಿಯ ಆ ಹುಡುಗಿಯ ಆರೈಕೆಯಲ್ಲಿಯೇ ತನ್ನ ಬದುಕಿನ ಸಾರ್ಥಕ್ಯವನ್ನು ಕಂಡುಕೊಳ್ಳತೊಡಗಿದ ಹುಡುಗ. ಬರಬರುತ್ತಾ ಅವನ ಅತ್ತೆ–ಮಾವ ಇವನನ್ನು ಅಸಡ್ಡೆ ಮಾಡತೊಡಗಿದಾಗ ಬೇಸತ್ತು, ಆ ಊರನ್ನೇ ತೊರೆದು, ಹೆಂಡತಿಯೊಡನೆ ಮೈಸೂರಿಗೆ ಬಂದು ನೆಲಸಿದ. ಮಡದಿಯ ತಲೆ ಬಾಚುವುದು, ಅಡುಗೆ ಮಾಡುವುದು, ಅವಳಿಗೆ ಇಷ್ಟವಾದುದನ್ನು ಕಲಿಸುತ್ತ ಅವಳ ಸಕಲ ಕೆಲಸಗಳನ್ನೂ ಬಲು ಪ್ರೀತಿಯಿಂದ ಮಾಡುತ್ತಾ, ಅವಳಿಗೆ ವೈದ್ಯಕೀಯ ನೆರವೂ ಸಿಗುವಂತೆ ನೋಡಿಕೊಳ್ಳುತ್ತಾ ಅದನ್ನೇ ತನ್ನ ಬದುಕನ್ನಾಗಿಸಿಕೊಂಡಿರುವ, ಅದರಲ್ಲೇ ಸಂತೋಷವನ್ನು ಕಂಡು ಕೊಂಡಿರುವ ಆ ಹುಡುಗನನ್ನು ನೋಡಿದರೆ ಮನಸು ತುಂಬಿಬರುತ್ತದೆ.

ವೈದ್ಯರಾಗಿದ್ದ ತಂದೆಯ ಕಟ್ಟುನಿಟ್ಟಿನ ಕಣ್ಣಳತೆಯಲ್ಲಿಯೇ ಬೆಳೆದವಳು ಆಕೆ. ಪಿಯುಸಿ ಮುಗಿಯುತ್ತಿದ್ದಂತೆಯೇ, ಅವಳ ಒಪ್ಪಿಗೆಗೂ ಕಾಯದೆ ಅಪ್ಪ ಒಬ್ಬ ಶ್ರೀಮಂತ ಯುವಕನೊಡನೆ ಮದುವೆ ಮಾಡಿಬಿಟ್ಟರು. ಮನದ ಆಸೆಗಳನ್ನು ಒಳಗೇ ಅದುಮುತ್ತಲೇ ಸಂಸಾರದ ಸಮುದ್ರದಲ್ಲಿ ಈಜಲು ತೊಡಗಿಯಾಗಿತ್ತು. ಗಂಡನು ಶ್ರೀಮಂತ ದಂಪತಿಯ ಒಬ್ಬನೇ ಮಗ, ಮೇಲಾಗಿ ಯಾರ ಮಾತಿಗೂ ಕಿವಿಗೊಡದ ವ್ಯಕ್ತಿತ್ವ ಜೊತೆಗೆ ಇಸ್ಪೀಟು, ಕುಡಿತದ ಚಟ. ಹತ್ತು ವರುಷಗಳಾಗುವಷ್ಟರಲ್ಲಿ ಅತ್ತೆ, ಮಾವ, ಅತ್ತಿಗೆಯರನ್ನು ಕಳೆದುಕೊಂಡು, ಗಂಡನ ಕುಡಿತದ ಚಟವನ್ನು ಬಿಡಿಸಲು ಪಣ ತೊಟ್ಟಿದ್ದಾಯಿತು. ಅದನ್ನು ಗೆದ್ದ ಕೆಲವೇ ವರುಷಗಳಲ್ಲಿ ಗಂಡನಿಗೆ ಪಾರ್ಶ್ವವಾಯು. ಅದನ್ನು ಸರಿಪಡಿಸುತ್ತಿದ್ದಂತೆ ಮತ್ತೆ ಆರು ತಿಂಗಳಲ್ಲಿ ಮತ್ತೊಮ್ಮೆ ಅದರದೇ ಆರ್ಭಟ. ಮನೆಯಲ್ಲಿ ಬಿದ್ದದ್ದೇ ನೆವವಾಗಿ ಕಾಲುಗಳ ಶಕ್ತಿಯನ್ನೂ ಕಳೆದುಕೊಂಡ ಪತಿ. ಖಿನ್ನತೆಗಾಗಿ ಮನೋ ವೈದ್ಯರ ಬಳಿ ವರುಷಗಟ್ಟಲೆ ಚಿಕಿತ್ಸೆ. ಮುಂದಿನ ಬದುಕೆಲ್ಲಾ ಆಸ್ಪತ್ರೆ, ಗಂಡನ ಸೇವೆಯಲ್ಲೇ ಕಳೆದ ಆಕೆ ಸಂಸಾರ ಸುಖವನ್ನು ಮತ್ತೆ ಕಾಣಲೇ ಇಲ್ಲ. ಇಬ್ಬರು ಮಕ್ಕಳನ್ನೂ ಒಬ್ಬಳೇ ಸರಿಯಾದ ರೀತಿಯಲ್ಲಿ ಬೆಳಸಿ, ಅವರನ್ನು ದಡ ಮುಟ್ಟಿಸಿದ ತೃಪ್ತಿಯೊಂದೇ ಆಸರೆ. ಹೆಂಡತಿಯ ಮೇಲೇ ಸಂಪೂರ್ಣವಾಗಿ ಅವಲಂಬಿತನಾದ ಗಂಡನಿಂದ ಅದೇ ಉಡಾಫೆಯ, ಕೃತಜ್ಞತೆಯ ಸೋಂಕೂ ಇಲ್ಲದ ಮಾತುಗಳು. ಅದನ್ನು ಎಷ್ಟೇ ಕೇಳಿದರೂ, ತನ್ನ ಕರ್ತವ್ಯದಲ್ಲಿ ಮಾತ್ರ ಚ್ಯುತಿ ಆಗಲು ಬಿಟ್ಟಿಲ್ಲದ ಆಕೆಯ ಮನೋದೃಢತೆ, ಅಗಾಧ ತಾಳ್ಮೆಗೆ ತಲೆಬಾಗದಿರಲು ಹೇಗೆ ಸಾಧ್ಯ? ತನ್ನ ಸುತ್ತಲಿನವರಿಗೆ ಸದಾ ಅವಳ ಸಹಾಯಹಸ್ತ. ಪರೋಪಕಾರವೇ ಈಗ ಆಕೆಗೆ ನೆಮ್ಮದಿಯ ಸಾಧನವಾಗಿದೆ.

ತಾಯಿಯ ಒತ್ತಾಯದಂತೆ ಹದಿನೈದನೆಯ ವಯಸ್ಸಿಗೇ ಹಸೆಮಣೆಯನೇರಿದ ಮತ್ತೊಬ್ಬ ಹೆಣ್ಣುಮಗಳು. ಗಂಡನ ಚಿತ್ರಹಿಂಸೆಯನ್ನು ತಾಳಲಾರದೆ ಒಂದು ವರುಷದ ಕೂಸಿನೊಂದಿಗೆ ತವರಿಗೆ ಓಡಿ ಬಂದಿದ್ದಳು. ಛಲದಿಂದ ಓದನ್ನು ಮುಂದುವರೆಸಿ, ಶಾಲೆಯೊಂದರಲ್ಲಿ ನೌಕರಿಯನ್ನೂ ಮಾಡತೊಡಗಿದಳು. ಅಪ್ಪನ ಮನೆಯಲ್ಲಿ ಬಾಡಿಗೆಗೆ ಬಂದಿದ್ದ ತರುಣನೊಬ್ಬ ಈಕೆಗೆ ಮರುಜೀವನ ಕೊಡುತ್ತೇನೆಂದು ಮುಂದೆ ಬಂದಾಗ ಅವನನ್ನು ಮದುವೆ ಆದಳು. ಇವಳ ಮಗನಿಗೂ ತಾನೇ ಅಪ್ಪನೆಂದಿದ್ದ ಆತ, ತನ್ನದೇ ಮಗುವೊಂದು ಆದಾಗ, ಈ ಮಗುವನ್ನು ಪ್ರೀತಿಸದಾದ.

ಅದರ ನೆರಳೂ ಅವನಿಗೆ ಸಹಿಸಲಾಗದಾಯಿತು. ಗಂಡನಿಂದ ಸಾಧ್ಯವಾದಷ್ಟೂ ಮೊದಲ ಮಗನನ್ನು ದೂರವಿರುವಂತೆ ನೋಡಿಕೊಳ್ಳುತ್ತಲೇ ಇಬ್ಬರೂ ಮಕ್ಕಳನ್ನು ಬೆಳಸಿದ ಆಕೆಯ ಮನದ ದುಃಖವನ್ನು ಕೇಳುವವರಾರು ಕೆಲಸದಲ್ಲಿ ಆತನ ಅದೃಷ್ಟ ಖುಲಾಯಿಸಿ, ಸ್ವಂತ ಫ್ಯಾಕ್ಟರಿಯನ್ನು ಆರಂಭಿಸಿದ ಅವನ ಗಳಿಕೆ ಹೆಚ್ಚುತ್ತಲೇ ಹೋಯಿತು. ಹೆಂಡತಿಯ ಮೇಲಿನ ದರ್ಪವೂ ಜೋರಾಗಿ, ಅವಳ ಮೇಲೆ ಕೈ ಮಾಡುವ ಮಟ್ಟಕ್ಕೆ ಹೋಯಿತು. ಒಮ್ಮೆ ಹೊಡೆಯಲು ಬಂದ ಅವನ ಕೈ ತಡೆದು, ಭುಸುಗುಟ್ಟಿದಳಾಕೆ. ಅಂದಿನಿಂದ ಹೊಡೆತ ನಿಂತಿತು. ಹಿರಿ ಮಗನ ಓದು ಮುಗಿಸಿ, ಅವನನ್ನು ತನ್ನ ಕಾಲಮೇಲೆ ನಿಲ್ಲುವಂತೆ ಮಾಡಿ, ಅವನಿಗೊಂದು ಮದುವೆಯನ್ನೂ ಮಾಡಿಸಿದಳಾಕೆ. ಈಗ ಗಂಡ, ಕಿರಿ ಮಗನೊಡನೆ ವಿಶ್ರಾಂತ ಜೀವನದಲ್ಲಿದ್ದಾಳೆ.

ಎಂತಹ ಕಷ್ಟವನ್ನೂ ಎದುರಿಸಿ, ಬದುಕಿಗೆ ಮುಖಾಮುಖಿಯಾದ ಇಂತಹವರ ಜೀವನದಿಂದ ಕಲಿಯಲು ನಮಗೆ ಅದೆಷ್ಟೋ ಪಾಠಗಳು.

ಮೇಕೆದಾಟು ಯೋಜನೆ; ಪಿಎಂ ಸಹಿಗಾಗಿ ಕಾಯುತ್ತಿದ್ದೇನೆ





ಬೆಂಗಳೂರು, ಜ.27– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಒಂದೇ ದಿನದಲ್ಲಿ ಪ್ರಧಾನಿ ಮೋದಿ ಅವರ ಕೈಯಿಂದ ಮೇಕೆದಾಟು ಯೋಜನೆಗೆ ಸಹಿ ಹಾಕಿಸುವುದಾಗಿ ಹೇಳಿದ್ದರು. ಆ ಕ್ಷಣಕ್ಕಾಗಿ ಕಾಯುತ್ತಿದ್ದೇನೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಗಿ ಹೇಳಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಣೆ ಮಾಡಿದ್ದ 5,300 ಕೋಟಿಯನ್ನೇ ಕೇಂದ್ರ ಸರ್ಕಾರ ಕೊಟ್ಟಿಲ್ಲ. ಈ ಬಜೆಟ್‌ನಲ್ಲಿ ಹೊಸ ಯೋಜನೆಗಳಿಗೆ ಹಣ ನೀಡುತ್ತದೆ ಎಂದು ನಂಬುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದರು.

ದೇವೇಗೌಡರು, ಕುಮಾರಸ್ವಾಮಿ ಒಂದೇ ದಿನದಲ್ಲಿ ಮೋದಿ ಅವರ ಕೈಯಿಂದ ಮೇಕೆದಾಟಿಗೆ ಸಹಿ ಹಾಕಿಸುವುದಾಗಿ ಹೇಳಿದ್ದರು. ಪ್ರಹ್ಲಾದ್ ಜೋಶಿ ಹಾಗೂ ಜಗದೀಶ್ ಶೆಟ್ಟರ್ ಅವರು ಕಳಸಾ ಬಂಡೂರಿ ಯೋಜನೆಗೆ ಅರಣ್ಯ ಇಲಾಖೆಯಿಂದ ಅನುಮತಿ ಕೊಡಿಸುತ್ತೇವೆ ಎಂದಿದ್ದರು. ಆ ಕ್ಷಣಕ್ಕಾಗಿ ಕಾಯುತ್ತಿದ್ದೇನೆ. ನಾವು ಈ ವಿಚಾರವಾಗಿ ಮನವಿ ಮಾಡಿದ್ದೇವೆ. ರಾಜ್ಯದಿಂದ ಇಷ್ಟೊಂದು ಸಂಸದರು ಇದ್ದಾರೆ. ಹೀಗಾಗಿ ಕರ್ನಾಟಕ ರಾಜ್ಯಕ್ಕೆ ಮೋಸ ಮಾಡುವುದಿಲ್ಲ ಅನುದಾನ ಕೊಡುತ್ತಾರೆ ಎಂಬ ನಂಬಿಕೆ ಮೇಲೆ ಕೇಳಿದ್ದೇವೆ. ಮುಖ್ಯಮಂತ್ರಿಗಳು ಸಹ ಪತ್ರ ಬರೆದಿದ್ದಾರೆ. ಸಂಸತ್ ಕಲಾಪದ ವೇಳೆಯೂ ಹೋಗಿ ಭೇಟಿ ಮಾಡುತ್ತೇನೆ. ನಮ್ಮ ಕರ್ತವ್ಯ ಮಾಡುತ್ತೇನೆ. ಫಲಾಫಲ ಭಗವಂತನಿಗೆ ಬಿಟ್ಟದ್ದು ಹೇಳಿದರು.

ಬೆಂಗಳೂರಿನ ಯೋಜನೆಗಳಿಗೆ ಅನುದಾನ ಕೋರಿ ಪತ್ರ ಬರೆದಿರುವುದನ್ನು ಕೇಂದ್ರ ಸರ್ಕಾರ ಪರಿಗಣಿಸುವುದೇ ಎಂಬ ಪ್ರಶ್ನೆಗೆ, ಬೆಂಗಳೂರು ಜಾಗತಿಕ ನಗರ. ಹೀಗಾಗಿ ಕೇಂದ್ರ ಸರ್ಕಾರ ಕೇವಲ ಬಿಹಾರ ಹಾಗೂ ಆಂಧ್ರಪ್ರದೇಶವನ್ನು ಮಾತ್ರ ನೋಡಬಾರದು. ಕರ್ನಾಟಕದ ಪ್ರತಿನಿಧಿಯಾಗಿ ನಮ್ಮ ರಾಜ್ಯದ ಕಡೆಯೂ ನೋಡಿ, ಬೆಂಗಳೂರಿಗೆ ಅಗತ್ಯ ಅನುದಾನ ನೀಡಿ ಎಂದು ಕೇಂದ್ರ ಹಣಕಾಸು ಸಚಿವರಿಗೆ ಹಾಗೂ ಪ್ರಧಾನಮಂತ್ರಿಗಳಿಗೂ ಮನವಿ ಮಾಡಿದ್ದೇನೆ. ನಾವು ನಮ್ಮ ಕರ್ತವ್ಯ ಮಾಡಿದ್ದೇವೆ. ಉಳಿದಿದ್ದು ಕೇಂದ್ರಕ್ಕೆ ಬಿಟ್ಟಿದ್ದು ಎಂದರು.

ಕೇಂದ್ರ ಸರ್ಕಾರಕ್ಕೆ ಗಡುವು ನೀಡುತ್ತೀರಾ ಎಂದು ಕೇಳಿದಾಗ, ನಾವು ಗಡುವು ನೀಡುವುದಿಲ್ಲ. ಮಹಾತ್ಮಾ ಗಾಂಧೀಜಿ ಅವರು ಒಂದು ಮಾತು ಹೇಳಿದ್ದಾರೆ. ನೀನು ನಿನ್ನನ್ನು ಗೆಲ್ಲಬೇಕಾದರೆ ನಿಮ್ಮ ಮೆದುಳು ಪ್ರಯೋಗಿಸು, ನೀನು ಬೇರೆಯವರನ್ನು ಗೆಲ್ಲಬೇಕಾದರೆ ನಿನ್ನ ಹೃದಯವನ್ನು ಪ್ರಯೋಗಿಸು ಎಂದು ಹೇಳಿದ್ದಾರೆ. ನಮ್ಮದೂ ಅದೇ ಮಾರ್ಗ ಎಂದಷ್ಟೇ ಹೇಳಿದರು.

ಎರಡು ನಿಮಿಷ ಕಾಫಿ ಕುಡಿಯು ಬಾರದೇ?: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗಿನ ಪ್ರತ್ಯೇಕ ಮಾತುಕತೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ಈ ಕಚೇರಿ ಕಟ್ಟಿದ್ದು ಅವರೇ. ಅವರು ಇಲ್ಲಿ 2 ನಿಮಿಷ ನೆಮ್ಮದಿಯಾಗಿ ಕಾಫಿಯನ್ನೂ ಕುಡಿಯಬಾರದೇ? ನೀವು ನಿಮ್ಮ ಮನೆಯವರು ಚರ್ಚೆ ಮಾಡಿದನ್ನು ಸಾರ್ವಜನಿಕವಾಗಿ ಮಾತನಾಡುತ್ತೀರಾ ಎಂದು ಸುದ್ದಿಗಾರರಿಗೆ ಪ್ರಶ್ನಿಸಿದರು. ಕುಟುಂಬ ಬೇರೆ ರಾಜಕೀಯ ಬೇರೆ ಎಂದು ಕೇಳಿದಾಗ, 'ಕಾಂಗ್ರೆಸ್' ಪಕ್ಷವೇ ಒಂದು ಕುಟುಂಬ. ನಮ್ಮಲ್ಲಿ ಯಾವುದೇ ಬಿಕ್ಕಟ್ಟು ಇಲ್ಲ ಎಂದು ಮುಖ್ಯಮಂತ್ರಿಗಳು ವಾಣಿ ವಿಲಾಸ ಸಾಗರ ಅಣೆಕಟ್ಟೆಗೆ ಬಾಗಿನ ಅರ್ಪಣೆ ಕಾರ್ಯಕ್ರಮದ ವೇಳೆ ಸ್ಪಷ್ಟಪಡಿಸಿದ್ದಾರೆ ಎಂದಷ್ಟೇ ಹೇಳಿದರು.

35 ಜನರ ಆಧಾರ್ ಕಾರ್ಡ್ ಮೇಲೆ ಮೈಕ್ರೋ ಫೈನಾನ್ಸ್ ಸಾಲ ಪಡೆದು ಪರಾರಿಯಾದ ದಂಪತಿ



ವಂಚಕ ದಂಪತಿ

ತುಮಕೂರು, ಜ.27– ತುಮಕೂರು ಜಿಲ್ಲೆ ಮಧುಗಿರಿ ತಾಲೂಕಿನ ಪುರವರ ಹೋಬಳಿ ದೊಡ್ಡಹೊಸಳ್ಳಿ ಗ್ರಾಮದಲ್ಲಿ ಚಾಲಾಕಿ ದಂಪತಿ ನಂಬಿಕಸ್ಥ 35 ಜನರ ಆಧಾರ್ ಕಾರ್ಡ್ ಪಡೆದು ಅವರ ಹೆಸರಿನಲ್ಲಿ ಮೈಕ್ರೋ ಫೈನಾನ್ಸ್ ಸಾಲವನ್ನು ಪಡೆದು, ಇದೀಗ ಊರನ್ನು ಬಿಟ್ಟು ಓಡಿ ಹೋಗಿದ್ದಾರೆ.

ಹಳ್ಳಿಯೊಂದರಲ್ಲಿ ನೆಲೆಸಿದ್ದ ಚಾಲಾಕಿ ದಂಪತಿ ಸ್ವಲ್ಪ ಶಿಕ್ಷಣವಂತರಾಗಿದ್ದು, ಅಮಾಯಕ ರೈತ ಕುಟುಂಬ 35 ಮಹಿಳೆಯರಿಗೆ ಮೋಸ ಮಾಡಿದ್ದಾರೆ. ನಮಗೆ ಕಷ್ಟ ಬಂದಿದೆ. ನಿಮ್ಮ ಆಧಾರ್ ಕಾರ್ಡ್‌ಗಳನ್ನು ಕೊಟ್ಟರೆ ಅದರ ಮೇಲೆ ಮೈಕ್ರೋ ಫೈನಾನ್ಸ್‌ನಲ್ಲಿ ಸಾಲ ಪಡೆದು ಅದನ್ನು ನಾವೇ ತೀರಿಸುತ್ತೇವೆ ಎಂದು ಆಧಾರ್ ಕಾರ್ಡ್ ಪಡೆದುಕೊಂಡಿದ್ದಾರೆ. ನಂತರ 10ಕ್ಕೂ ಹೆಚ್ಚು ಮೈಕ್ರೋಫೈನಾನ್ಸ್ ಕಂಪನಿಯಿಂದ 50 ಲಕ್ಷಕ್ಕೂ ಹೆಚ್ಚು ಸಾಲ ಪಡೆದು ಪರಾರಿಯಾಗಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಹಲವು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಜೊತೆ ಒಡನಾಟ ಇಟ್ಟುಕೊಂಡಿದ್ದ ಖತರ್ನಾಕ್ ದಂಪತಿ, ತಾವು ಸಂಘ ಮಾಡಿಕೊಂಡಿದ್ದು, ಇವರೆಲ್ಲರ ಹೆಸರಿನಲ್ಲಿಯೂ ಸಾಲವನ್ನು ನೀಡುವಂತೆ ಎಷ್ಟು ಸಾಧ್ಯವೋ ಅಷ್ಟು ಸಾಲವನ್ನು ಪಡೆದಿದ್ದಾರೆ.

ಮೈಕ್ರೋ ಫೈನಾನ್ಸ್ ಕಂಪನಿ ಸಿಬ್ಬಂದಿ ಇದೀಗ ಆಧಾರ್ ಕೊಟ್ಟವರಿಗೆ ಸಾಲ ಮರುಪಾವತಿ ಮಾಡುವಂತೆ ನೋಟಿಸ್ ನೀಡುತ್ತಿದ್ದಾರೆ. ಕಳೆದ ಎರಡು ತಿಂಗಳ ಹಿಂದೆಯೇ ಪ್ರತಾಪ್ ಮತ್ತು ರತ್ನಮ್ಮ ಪರಾರಿಯಾಗಿದ್ದು, ಗ್ರಾಮಸ್ಥರಿಗೆ ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ನೋಟೀಸ್ ಕೊಟ್ಟ ನಂತರವೇ ತಾವು ವಂಚನೆಗೆ ಒಳಗಾಗಿದ್ದೇವೆ ಎಂಬ ಮಾಹಿತಿ ಲಭ್ಯವಾಗಿದೆ. ಇದೀಗ ಗ್ರಾಮಸ್ಥರು ಪೊಲೀಸ್ ಠಾಣೆ ಮೊರೆ ಹೋಗಿದ್ದಾರೆ.

ಮಾನವೀಯ ಮೌಲ್ಯ, ಹೃದಯ ಶ್ರೀಮಂತಿಕೆ ಇದ್ದರಷ್ಟೇ ಶಿಕ್ಷಣ ಪರಿಪೂರ್ಣ

ಮೈಸೂರು ಪಾಲಿಕೆ ನೌಕರರ ಸಹಕಾರ ಸಂಘದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲಿಕೆ ಉಪಆಯುಕ್ತ ಜಿ.ಎಸ್.ಸೋಮಶೇಖರ್ ಅಭಿಮತ

ಮೈಸೂರು, ಜ.27(ಪಿಎಂ)– ಮಾನವೀಯ ಮೌಲ್ಯ ಮತ್ತು ಹೃದಯ ಶ್ರೀಮಂತಿಕೆ ಇದ್ದರಷ್ಟೇ ಪಡೆದ ಶಿಕ್ಷಣ ಪರಿಪೂರ್ಣಗೊಳ್ಳಲು ಸಾಧ್ಯ ಎಂದು ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ (ಕಂದಾಯ ವಿಭಾಗ) ಜಿ.ಎಸ್. ಸೋಮಶೇಖರ್ ಹೇಳಿದರು.



ಮೈಸೂರು ಮಹಾನಗರ ಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದ ವತಿಯಿಂದ ಸೋಮವಾರ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು ಮಹಾನಗರ ಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ (2023–24ನೇ ಸಾಲಿಗೆ) ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಿಸಿ ಅವರು ಮಾತನಾಡಿದರು.

ನಾವು ಸಂಪಾದಿಸಿದ ಜ್ಞಾನ ಮತ್ತು ಪಡೆದ ಶಿಕ್ಷಣವನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಶಿಕ್ಷಣ ಮತ್ತು ಕರ್ತವ್ಯದಲ್ಲಿ ನಾವು ಬದ್ಧತೆ ಹೊಂದಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೆಚ್ಚು ಅಧ್ಯಯನ ಶೀಲತೆ ಮತ್ತು ಪರಿಶ್ರಮ ಅಗತ್ಯವಾಗಿದೆ. ನಾನು ಕೆಎಎಸ್ ಪರೀಕ್ಷೆ ಬರೆದಾಗ ನಮ್ಮ ಬ್ಯಾಚ್‌ನಲ್ಲಿ 120 ಹುದ್ದೆಗಳಿದ್ದವು. ಆದರೆ ಅಭ್ಯರ್ಥಿಗಳು ಲಕ್ಷದ 8 ಸಾವಿರ ಇದ್ದರು. ಈ ಬಾರಿ ಕೆಎಎಸ್ ಪರೀಕ್ಷೆಯಲ್ಲಿ 380 ಹುದ್ದೆಗಳಿದ್ದರೆ, ಸುಮಾರು 4 ಲಕ್ಷ ಅಭ್ಯರ್ಥಿಗಳಿದ್ದಾರೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ನಿರ್ದೇಶಕ ಡಿ.ಸುರೇಂದ್ರಕುಮಾರ್, 107 ವರ್ಷಗಳ ಇತಿಹಾಸ ಹೊಂದಿರುವ ನಮ್ಮ ಸಹಕಾರ ಸಂಘವು ಪ್ರಸ್ತುತ 826 ಮಂದಿ ಸದಸ್ಯರನ್ನು ಹೊಂದಿದೆ. ಪ್ರಸಕ್ತ ಸಾಲಿನಲ್ಲಿ ನಮ್ಮ ಸಹಕಾರ ಸಂಘವು ಸುಮಾರು 17.95 ಕೋಟಿ ವಾರ್ಷಿಕ ವಹಿವಾಟು ನಡೆಸಿದೆ. ಸುಮಾರು 25 ವರ್ಷಗಳಿಂದ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಸಂಘವು ಪ್ರತಿವರ್ಷ ಪ್ರೋತ್ಸಾಹ ಧನ ನೀಡುತ್ತಾ ಬಂದಿದೆ. ನಮ್ಮ ಸಂಘದ ಉತ್ತಮ ಕಾರ್ಯಚಟುವಟಿಕೆಗಳನ್ನು ಗಮನಿಸಿ 2012–13ನೇ ಸಾಲಿನಲ್ಲಿ ಸಹಕಾರ ಇಲಾಖೆಯ ಸಂಘಕ್ಕೆ 'ಉತ್ತಮ ಸಹಕಾರ ಸಂಘ' ಪ್ರಶಸ್ತಿ ನೀಡಿದೆ ಎಂದು ವಿವರಿಸಿದರು.

ಇದೇ ವೇಳೆ 25 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನದೊಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಆರ್.ಚಿನ್ಮಯಿ, ಕೆ.ದಿಶಾ, ಎಸ್.ನಾಗಶ್ರೀ, ಸಿ.ಮಯೂರ್‌ಗೌಡ, ಶ್ರೇಯ ಎನ್.ಯೋಗೇಂದ್ರ, ಬಿ.ಯಶ್ವಂತ್, ಜಿ.ತನುಶ್ರೀ, ಹೆಚ್.ರೀತು, ದ್ವಿತೀಯ ಪಿಯುನಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಆರ್.ಭುವನ್, ಜಿ.ಎಸ್.ನಿಸರ್ಗ, ಆರ್.ಟಿ.ಸಂಜನ, ಕೆ.ರೋಹನ್, ಜಿ.ರಾಜೇಶ್ ಅವರು ಪುರಸ್ಕಾರಕ್ಕೆ ಭಾಜನರಾದರು. ಅಲ್ಲದೆ, ಬಿ.ಕಾಂನಲ್ಲಿ ಪಿ.ಫೆಲೀಸಿಯಾ, ಜಿ.ರಾಜೇಶ್ವರಿ, ಜಿ.ಎಸ್.ದರ್ಶನ್, ಬಿ.ಲೋಹಿತ್, ಪಿ.ಪವನ್ ಕುಮಾರ್, ಬಿಸಿಎನಲ್ಲಿ ಆರ್.ನಿವೇದಿತಾ, ಬಿ.ಆಕಾಶ್, ಎಂಬಿಎನಲ್ಲಿ ಎಂ.ದೀಪಿಕಾ, ಬಿಎಎಂಎಸ್‌ನಲ್ಲಿ ಎಂ.ಮಧುರ, ಬಿಇನಲ್ಲಿ ಎಸ್.ಹೃಶಿತಾ, ಬಿ.ಯಶಸ್ವಿನಿ, ಎಂ.ಸಹನಾ ಅವರು ಪ್ರತಿಭಾ ಪುರಸ್ಕಾರ ಪಡೆದರು. ಸಂಘದ ಅಧ್ಯಕ್ಷ ಜವರೇಗೌಡ, ಕಾರ್ಯದರ್ಶಿ ಶಿವಕುಮಾರ್, ಖಜಾಂಚಿ ಪುಟ್ಟಸ್ವಾಮಿ, ನಿರ್ದೇಶಕರಾದ ಭಾಸ್ಕರ್, ಎಂ.ಬಸವಣ್ಣ, ಪಿ.ಶೀಲಾ, ನಗರಪಾಲಿಕೆ ಪರಿಸರ ಇಂಜಿನಿಯರ್ ಮೈತ್ರಿ ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com


ಮೈಸೂರು ಮಿತ್ರ

ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಶ್ರಮಿಸುವ ಸಂಕಲ್ಪ ಮಾಡಬೇಕಿದೆ

ಮೈಸೂರಲ್ಲಿ ನಡೆದ 76ನೇ ಗಣರಾಜ್ಯೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ

● ಸಂವಿಧಾನ ಹಾಕಿದ ಗೆರೆ ಯಾರೂ ಮೀರುವಂತಿಲ್ಲ ● ವಿಶ್ವದ ಬಹಳಷ್ಟು ರಾಷ್ಟ್ರಗಳಿಗೆ ಮೇಲ್ಪಂಕ್ತಿ ● ನಿರಾತಂಕ ಆಡಳಿತಕ್ಕೆ ಸಂವಿಧಾನ ಅವಶ್ಯ ● ಆಕರ್ಷಕ ಪಥ ಸಂಚಲನ





ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಭಾನುವಾರ ನಡೆದ 76ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪಥ ಸಂಚಲನದ ಪರಿವೀಕ್ಷಣೆ ನಡೆಸಿದರು. (ಎಡಚಿತ್ರ), ಇದೇ ವೇಳೆ ಶಿಸ್ತುಬದ್ಧವಾಗಿ ಪೊಲೀಸ್ ತಂಡ ಗಣ್ಯರಿಗೆ ಗೌರವ ವಂದನೆ ಸಲ್ಲಿಸಿತು.

ಮೈಸೂರು, ಜ.27(ಬಿಎಲ್‌ಯು)– ಗಣರಾಜ್ಯೋತ್ಸವದ ಈ ಶುಭ ದಿನ ದಂದು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕಂಕಣಬದ್ಧರಾಗಿ ಶ್ರಮಿಸುವ ಸಂಕಲ್ಪ ಮಾಡಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕರೆ ನೀಡಿದರು.

ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಭಾನುವಾರ ನಡೆದ 76ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಮಾತನಾಡಿದ ಅವರು, ಭಾರತೀಯರು ಸಂಸತ್ತಿನಲ್ಲಿ ದೀರ್ಘಕಾಲ ಪಾಲಿಸಬೇಕಾದ ಕನಸು ಅರಿತು ಭಾರತೀಯ ಒಕ್ಕೂಟಕ್ಕೆ ಸಂವಿಧಾನ ಅನುಮೋದಿಸಿದ ದಿನವಾಗಿದೆ ಎಂದು ಹೇಳಿದರು.

ಭಾರತವನ್ನು ಜಾತ್ಯಾತೀತ, ಸಾರ್ವಭೌಮ ಗಣರಾಜ್ಯವನ್ನಾಗಿ ರೂಪಿಸಿ ಭಾರತ ವೈವಿಧ್ಯತೆಯಲ್ಲಿ ಏಕತೆ ಸಾಧಿಸಲು ಸಾಧ್ಯವಾಯಿತು. ಇದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ನ್ಯಾಯ ಕ್ಷೇತ್ರದಲ್ಲಿ ಪ್ರತಿಯೊಬ್ಬರಿಗೂ ಸಮಾನ ಅವಕಾಶ ಮತ್ತು ಹಕ್ಕುಗಳಿರುವ ಲೋಕ ಸಮ್ಮತವಾದ ಸಂವಿಧಾನವಾಗಿದೆ ಎಂದು ಡಾ.ಮಹದೇವಪ್ಪ ಹೇಳಿದರು.

ಅಧಿಕಾರಸ್ಥರನ್ನು ಪ್ರಶ್ನಿಸುವ ಸ್ವತಂತ್ರ ದೇಶದ ಸಾಮಾನ್ಯ ಪ್ರಜೆಗಳಿಗೆ ವಿಧಿವತ್ತಾಗಿ ಲಭ್ಯವಾದ ದಿನವಾಗಿದ್ದು, ಇಲ್ಲಿಯಾರ ಅಧಿಕಾರವೂ ಅಂತಿಮವಲ್ಲ. ಸಂವಿಧಾನ ಹಾಕಿಕೊಟ್ಟ ಗೆರೆಯನ್ನು ಯಾರೂ ಮೀರುವ ಆಗಿಲ್ಲ ಎಂಬ ವ್ಯವಸ್ಥೆ ಅಂದೇ ಜಾರಿಗೆ ಬಂದಿದೆ. ಇದೊಂದು ಚಾರಿತ್ರಿಕ ತಿರುವು ಆಗಿದ್ದು, ವಿಶ್ವದ ಬಹಳಷ್ಟು ರಾಷ್ಟ್ರಗಳಿಗೆ ಮೇಲ್ಪಂಕ್ತಿ ಹಾಕಿದ ವಿದ್ಯಮಾನವಾಗಿದೆ ಎಂದು ಹೇಳಿದರು.

ಪ್ರಜಾಪ್ರಭುತ್ವದ ತಳಹದಿಯಾದ ಸಂವಿಧಾನ ಹಾಗೂ ಮಾನವ ಹಕ್ಕುಗಳನ್ನು ನೀಡಿದ ಈ ಸುದಿನದ ನೆನಪು ಅವಿಸ್ಮರಣೀಯವಾಗಿದೆ. ಪ್ರಥಮವಾಗಿ ಪ್ರಜಾತಂತ್ರ ವ್ಯವಸ್ಥೆ ಬೇರಿಗೆ ನೀರು ಸುರಿದು ತಮ್ಮ ಬದುಕು ಸವೆಸಿದ ಎಲ್ಲಾ ದೇಶಾಭಿಮಾನಿಗಳನ್ನು ಸ್ಮರಿಸಬೇಕಾಗಿದೆ ಎಂದರು.

ಒಂದು ರಾಜ್ಯ ಕ್ರಮಬದ್ಧವಾಗಿ ಜನರಿಗೆ ಹಿತವೆನಿಸುವ ರೀತಿಯಲ್ಲಿ ನಿರಾತಂಕವಾಗಿ ಆಡಳಿತ ನಡೆಸಲು ಸಂವಿಧಾನ ಅವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಅನ್ನಭಾಗ್ಯ ಯೋಜನೆಯಲ್ಲಿ 6,61,914 ಕುಟುಂಬಕ್ಕೆ ಅನುಕೂಲವಾಗಿದೆ. ಶಕ್ತಿ ಯೋಜನೆಯಲ್ಲಿ ಪ್ರತಿದಿನ 4.20 ಲಕ್ಷ ಮಹಿಳೆಯರು ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸುತ್ತಾರೆ. ಗೃಹಜ್ಯೋತಿ ಯೋಜನೆಯಲ್ಲಿ 8,94,331 ಗ್ರಾಹಕರು ಫಲಾನುಭವಿಗಳಾಗಿದ್ದಾರೆ. ಗೃಹಲಕ್ಷ್ಮಿ ಯೋಜನೆಯಲ್ಲಿ 6,89,667 ನೊಂದಾಯಿಸಿಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ಯುವನಿಧಿ ಯೋಜನೆಯಲ್ಲಿ 8,124 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ಅಂಕಿ ಅಂಶಗಳ ವಿವರ ನೀಡಿದರು.

ಒಟ್ಟಾರೆ ಸಂವಿಧಾನಕ್ಕೆ ಬದ್ಧರಾಗಿ ಬದುಕುವ ಮನೋಭೂಮಿಕೆ ಇಂದಿನ ತುರ್ತು ಅನಿವಾರ್ಯವಾಗಿದ್ದು, ಇದರಿಂದ ಮಾತ್ರ ಸಂವಿಧಾನದ ಅತಿ ಶ್ರೇಷ್ಠ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ ಹಾಗೂ ಭ್ರಾತೃತ್ವಗಳಿಗೆ ನಿಜವಾದ ಅರ್ಥ ಬರುತ್ತದೆ ಎಂದು ಡಾ.ಮಹದೇವಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು ಡಾ.ಮಹದೇವಪ್ಪ ಅವರು ಧ್ವಜಾರೋಹಣ ನೆರವೇರಿಸಿ ಧ್ವಜ ವಂದನೆ ಸ್ವೀಕರಿಸಿದರು. ನಂತರ ತೆರೆದ ಜೀಪಿನಲ್ಲಿ ಪರೇಡ್ ಪರಿವೀಕ್ಷಣೆ ಮಾಡಿದರು. ತರುವಾಯ ನಡೆದ 26 ತಂಡಗಳ ಪಥ ಸಂಚಲನ ಅತ್ಯಾಕರ್ಷಕವಾಗಿತ್ತು. ಪೊಲೀಸ್ ಬ್ಯಾಂಡ್‌ನ ಲಯಬದ್ಧ ಸಂಗೀತದ ಜೊತೆಗೆ ಸಾಗಿದ ತುಕಡಿಗಳ ಶಿಸ್ತುಬದ್ಧ ಹೆಜ್ಜೆ ಗಮನ ಸೆಳೆಯಿತು. ಪ್ರಧಾನ ದಳಪತಿ ಎಸ್.ಡಿ. ಸಾಸನೂರ್ ನೇತೃತ್ವದಲ್ಲಿ ಪೊಲೀಸ್ ಇಲಾಖೆಯ ವಿವಿಧ ತುಕಡಿಗಳು ಪಥ ಸಂಚನದಲ್ಲಿ ಶಿಸ್ತುಬದ್ಧವಾಗಿ ಸಾಗಿದವು. ಜೊತೆಗೆ ಕೆಎಸ್‌ಆರ್‌ಪಿ, ಅಶ್ವಾರೋಹಿ ದಳ, ಗೃಹರಕ್ಷಕ ದಳ, ಅಬಕಾರಿ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಆಕರ್ಷಕ ಪಥಸಂಚಲನ ನಡೆಸಿ ವಂದನೆ ಗಣ್ಯರಿಗೆ ಸಲ್ಲಿಸಿದರು.

ಇದೇ ವೇಳೆ ಬೇಡನ್ ಪೊವೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ವಿವಿಧತೆಯಲ್ಲಿ ಏಕತೆ ಸಾರುವ ದೇಶಭಕ್ತಿ ಸಮೂಹ ನೃತ್ಯ, ಮಹರ್ಷಿ ಪಬ್ಲಿಕ್ ಶಾಲೆ ಮತ್ತು ಪ್ರಮತಿ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ದೇಶಭಕ್ತಿ ಗೀತೆ ಹಾಡಿದರು. ಈ ವೇಳೆ ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಸಿಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ.ಎಂ.ಗಾಯತ್ರಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



76ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ವಿಜೇತ ತಂಡಗಳಿಗೆ ಬಹುಮಾನ ವಿತರಣೆ

ಈ ವೇಳೆ ಪಥ ಸಂಚನದಲ್ಲಿ ಪಾಲ್ಗೊಂಡ ತಂಡಗಳಿಗೆ ಡಾ.ಮಹದೇವಪ್ಪ ವಿಭಾಗವಾರು ಬಹುಮಾನ ನೀಡಿದರು. ಶಾಲಾ ವಿಭಾಗದಲ್ಲಿ ಭಾರತ ಸೇವಾದಳದ ಯಶಸ್ವಿನಿ ಬಹುಮಾನ ಸ್ವೀಕರಿಸಿದರು. ಪೊಲೀಸ್ ಪಬ್ಲಿಕ್ ಶಾಲೆಯ ರಿಷಿರಾಜ್ ದ್ವಿತೀಯ ಹಾಗೂ ನವೋದಯ ಶಾಲೆಯ ಎಂ.ಲೇಖನಾ ತೃತೀಯ ಬಹುಮಾನ ಪಡೆದರು. ಸಶಸ್ತ್ರ ವಿಭಾಗದಲ್ಲಿ ಸಂಜೀವ್.ಆರ್‌ಎಸ್‌ಐ ಪ್ರಥಮ, ಪ್ರವೀಣ್ ಪಿಎಸ್‌ಐ ದ್ವಿತೀಯ, ರವಿಕುಮಾರ್ ಹೋಂಗಾರ್ಡ್ ತೃತೀಯ ಬಹುಮಾನ ಸ್ವೀಕರಿಸಿದರು. ಸಶಸ್ತ್ರರಹಿತ ವಿಭಾಗದ ಎನ್ ಸಿಸಿಯಲ್ಲಿ ಶಿವರಂಜನ್ ಪ್ರಥಮ, ಅಬಕಾರಿ ಇಲಾಖೆಯ ಆರ್.ಸುನೀಲ್‌ಕುಮಾರ್ ದ್ವಿತೀಯ ಹಾಗೂ ಅಗ್ನಿಶಾಮಕ ದಳದ ಅಂಬರೀಶ್ ತೃತೀಯ ಬಹುಮಾನ ಪಡೆದರು. ಈ ವೇಳೆ ಮೈಸೂರು ಜಿಲ್ಲೆಯ ಪೋಡಿ ಆರ್‌ಟಿಸಿಗಳನ್ನು ಡಾ.ಮಹದೇವಪ್ಪ ವಿತರಣೆ ಮಾಡಿದರು. ಮಾದೇಗೌಡ, ಸಿದ್ದೇಗೌಡ, ಬಿ.ಬಸವಣ್ಣ, ಕೆಂಪೇಗೌಡ, ಚಿಕ್ಕತಾಯಮ್ಮ, ಸಿದ್ದರಾಜು, ರಂಗಸ್ವಾಮಿ, ನಂಜುಂಡಪ್ಪ ಪೋಡಿ ಆರ್‌ಟಿಸಿ ಪಡೆದರು. ನಂತರ ಅಂಗಾಂಗ ದಾನಿಗಳ ಕುಟುಂಬಸ್ಥರಿಗೆ ಡಾ.ಮಹದೇವಪ್ಪ ಸನ್ಮಾನಿಸಿದರು.

ಚಾಮುಂಡೇಶ್ವರಿ ಸಹಕಾರ ಸಂಘದಲ್ಲಿ 76ನೇ ಗಣರಾಜ್ಯೋತ್ಸವ ; ಶಾಸಕ ಜಿ.ಟಿ.ದೇವೇಗೌಡರಿಂದ ಧ್ವಜಾರೋಹಣ



ಚಾಮುಂಡೇಶ್ವರಿ ಸಹಕಾರ ಸಂಘದ ಆವರಣದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಧ್ವಜಾರೋಹಣ ನೆರವೇರಿಸಿದರು.

ಮೈಸೂರು, ಜ.27(ಬಿಎಲ್‌ಯು)– ಮೈಸೂರಿನ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಚಾಮುಂಡೇಶ್ವರಿ ನಗರ, ವಿನಾಯಕ ಎನ್‌ಕ್ಲೇವ್, ಕಾವೇರಿ ಬಡಾವಣೆಯಲ್ಲಿ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಚಾಮುಂಡೇಶ್ವರಿ ಸಹಕಾರ ಸಂಘದ ಆವರಣದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಧ್ವಜಾರೋಹಣ ನೆರವೇರಿಸಿದರು.

ಚಾಮುಂಡೇಶ್ವರಿ ಸಹಕಾರ ಸಂಘ ಉತ್ತಮ ಸೇವೆ ಸಲ್ಲಿಸುತ್ತಿದ್ದು, ಮಾದರಿ ಸಹಕಾರ ಸಂಘವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಲ್ಲಿನ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸುತ್ತಿದ್ದು, ಇ–ಸ್ವತ್ತು ವಿತರಣೆ ಕೂಡ ಮಾಡಲಾಗುತ್ತಿದೆ ಎಂದರು.

ಈ ವೇಳೆ ಮಾತನಾಡಿದ ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಸುತ್ತಮುತ್ತಲಿನ ಎಲ್ಲಾ ಬಡಾವಣೆಗಳಿಗೆ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದೆ. ವಾತಾವರಣವನ್ನು ಸ್ವಚ್ಛವಾಗಿಡಲು ಜನರು ಕೂಡ ಸಹಕರಿಸಬೇಕು ಎಂದು ಸಲಹೆ ನೀಡಿದರು. ಈ ವೇಳೆ ಪ್ರೊ.ಸಿ.ಚಿಕ್ಕಣ್ಣ ಅವರು ಶಾಸಕ ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು.

ಈ ವೇಳೆ ಸೈನಿಕ ಅಕಾಡೆಮಿ ಸಂಸ್ಥಾಪಕ ಶ್ರೀಧರ್, ಸ್ಥಳೀಯ ಮುಖಂಡರಾದ ಸ್ವಾಮಿ, ರಮೇಶ್, ದೇವರಾಜು, ಬೋರಪ್ಪ, ಶಿವ, ಕುಮಾರಸ್ವಾಮಿ, ಶಿವಣ್ಣ, ಕೃಷ್ಣೇಗೌಡ ಉಪಸ್ಥಿತರಿದ್ದರು.

ಮೈಸೂರಿನ ರೈಲ್ವೆ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವ




ಮೈಸೂರಿನ ರೈಲ್ವೆ ಕ್ರೀಡಾಂಗಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಧ್ವಜಾರೋಹಣ ನೆರವೇರಿಸಿದರು.

ಮೈಸೂರು, ಜ.27(ಬಿಎಲ್‌ಯು)– ಮೈಸೂರಿನ ಯಾದವಗಿರಿಯ ರೈಲ್ವೆ ಕ್ರೀಡಾಂಗಣದಲ್ಲಿ 76 ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಅವರು ಧ್ವಜಾರೋಹಣ ನೆರವೇರಿಸಿದರು. ತರುವಾಯ ರೈಲ್ವೆ ಸಂರಕ್ಷಣಾ ಪಡೆ ಮತ್ತು ಸ್ಕೌಟ್ಸ್ ಹಾಗೂ ಗೈಡ್ಸ್ ತಂಡಗಳಿಂದ ಗೌರವ ವಂದನೆ ಸ್ವೀಕರಿಸಿದರು. ಈ ವೇಳೆ ಮಾತನಾಡಿದ ಶಿಲ್ಪಿ ಅಗರವಾಲ್ ಅವರು, ನಮ್ಮ ವಿಭಾಗ ಈ ಬಾರಿ 1000 ಕೋಟಿ ರೂಪಾಯಿ ಆದಾಯ ಗಳಿಸಿದ್ದು, ಸರಕು ಆದಾಯದಲ್ಲಿ 649.44 ಕೋಟಿ, ಪ್ರಯಾಣಿಕರ ಆದಾಯದಲ್ಲಿ 315.51 ಕೋಟಿ ಆಗಿದೆ. ಇದರ ಜೊತೆಗೆ ಆಹಾರ ಸಾಗಾಟದಲ್ಲಿ ಕೂಡ ದೊಡ್ಡ ಪ್ರಮಾಣದ ಬೆಳವಣಿಗೆ ಸಾಧಿಸಿದೆ ಎಂದು ಹೇಳಿದರು.

ಹಣಕಾಸು ವೃದ್ಧಿ, ಸುರಕ್ಷತಾ ಕ್ರಮ, ಮೂಲ ಸೌಕರ್ಯ ಸುಧಾರಣೆ ಮತ್ತು ಪ್ರಯಾಣಿಕರ ಸೇವೆಗಳ ವಿಷಯದಲ್ಲಿ ನಮ್ಮ ವಿಭಾಗ ಅತ್ಯುತ್ತಮ ಸಾಧನೆ ಮಾಡಿದೆ. ಕುಂಭಮೇಳ ಆಚರಿಸುವ ಪ್ರಯಾಗ್‌ರಾಜ್ ಸೇರಿದಂತೆ ದೇಶಾದ್ಯಂತ ಜನಪ್ರಿಯ ಸ್ಥಳಗಳನ್ನು ಸಂಪರ್ಕಿಸುವ ವಿಶೇಷ ರೈಲುಗಳನ್ನು ಪರಿಚಯಿಸಲಾಗಿದೆ ಎಂದು ಶಿಲ್ಪಿ ಅಗರವಾಲ್ ತಿಳಿಸಿದರು.



ಮೈಸೂರಿನ ಇಂದಿರಾ ಗಾಂಧಿ ಕಾಂಗ್ರೆಸ್ ಭವನದಲ್ಲಿ ಗಣರಾಜ್ಯೋತ್ಸವ ಹಾಗೂ ಸಂವಿಧಾನ ರಕ್ಷಕ್ ಅಭಿಯಾನ ಆಚರಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ನಗರಾಧ್ಯಕ್ಷ ಆರ್.ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



ಕೆ.ಆರ್.ಬ್ಯಾಂಕ್ ಆವರಣದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಕೆ ಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ ಧ್ವಜಾರೋಹಣ ನೆರವೇರಿಸಿದರು. ಉಪಾಧ್ಯಕ್ಷರಾದ ಹೆಚ್.ಎನ್. ಸರ್ವಮಂಗಳ, ನಿರ್ದೇಶಕರಾದ ನಂ ಸಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ, ಪ್ರತಿಧ್ವನಿ ಪ್ರಸಾದ್, ಗಣೇಶ್‌ಮೂರ್ತಿ, ನಾಗಜ್ಯೋತಿ, ಅರುಣ್‌ಸಿದ್ದಪ್ಪ, ಶಿವಪ್ರಕಾಶ್, ಪ್ರ.ವ್ಯವಸ್ಥಾಪಕ ಡಿ.ಅನಂತ ವೀರಪ್ಪ ಮತ್ತಿತರರು ಉಪಸ್ಥಿತರಿದ್ದರು.



ಬೊಮ್ಮೇನಹಳ್ಳಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಉದ್ಘಾಟಿಸಿದರು. ಗ್ರಾಪಂ ಸದಸ್ಯರಾದ ಈಶ್ವರ್, ಮಹದೇವು, ಗೀತಾ ಮಹದೇವು, ಕುಮಾರ್, ಮುಖಂಡ ಶಂಕರ್, ಶಿವಣ್ಣ, ಸಂತೋಷ್, ಚೆಲುವರಾಜು, ಚಂದ್ರಗುಪ್ತ, ಸ್ವಾಮಿ, ಸಂತೋಷ್, ಮಹೇಶ್, ಧರ್ಮ, ಶಿವಸ್ವಾಮಿ, ಕೃಷ್ಣಮೂರ್ತಿ, ಶಿವರಾಮ್, ಶಿವಕುಮಾರ್, ವೆಂಕಟೇಶ, ಶಿವಸ್ವಾಮಿ, ರಾಮಸ್ವಾಮಿ, ಮುಗಣ್ಣ, ದೇವರಾಜು, ಶಿವಕುಮಾರ್ ಇದ್ದರು.



ಮೈಸೂರಿನ ಕುವೆಂಪುನಗರ ನಿವಾಸಿಗಳ ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 76ನೇ ಗಣರಾಜ್ಯೋತ್ಸವವನ್ನು ಪ್ರಸಾರಾಂಗದ ನಿವೃತ್ತ ನಿರ್ದೇಶಕ ಕೆ.ಟಿ.ವೀರಪ್ಪ ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಹೆಚ್.ಕೆ.ರಾಮು, ಕಾರ್ಯದರ್ಶಿ ರಘುರಾಮ್‌ಗೌಡ, ಸಂಚಾಲಕ ಬೂಕನಕೆರೆ ವಿಜೇಂದ್ರ ಸೇರಿದಂತೆ ಪದಾಧಿಕಾರಿಗಳು ಈ ವೇಳೆ ಹಾಜರಿದ್ದರು.



ಮೈಸೂರಿನ ಕುವೆಂಪುನಗರದ ಸಿ ಅಂಡ್ ಡಿ ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಸಮಿತಿ ಅಧ್ಯಕ್ಷ ಡಾ.ಎಲ್.ದೇವೇಗೌಡ, ಉಪಾಧ್ಯಕ್ಷ ಅಶ್ವಥ್ ನಾರಾಯಣ್, ಕಾರ್ಯದರ್ಶಿ ಚರಣ್ ಶಿವರಾಜ್, ಖಜಾಂಚಿ ಕೃಷ್ಣಕುಮಾರ್, ಸಮಿತಿಯ ಸದಸ್ಯರಾದ ರೋಹಿಣಿ ಪದ್ಮಕುಮಾರ್, ಜಯ ಹರಳೆ, ಜಲಜಾ, ಹೊಂಗಪ್ಪ, ವಸಂತ, ಏಕನಾಥ್ ರೈ, ನಾರಾಯಣ ಸ್ವಾಮಿ ಉಪಸ್ಥಿತರಿದ್ದರು. ಇದೇ ವೇಳೆ ಹಿರಿಯರಾದ ಪ್ರೊ.ಶಾರದ, ನಿವೃತ್ತ ಅಭಿಯಂತರರಾದ ಬಿ.ಕೆ.ಹೊಂಗಪ್ಪ, ಚನ್ನೇಗೌಡ, ವಕೀಲರಾದ ಅಶ್ವಥ್ ನಾರಾಯಣ್, ಸಹಾಯಕ ಆರಕ್ಷಕ ಉಪನಿರೀಕ್ಷಕ ಬಸವೇಗೌಡರನ್ನು ಸನ್ಮಾನಿಸಲಾಯಿತು.



ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ವತಿಯಿಂದ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಹೂಟಗಳ್ಳಿ ನಗರಸಭೆಯ ಆಯುಕ್ತ ಬಿ.ಎನ್.ಚಂದ್ರಶೇಖರ್ ಧ್ವಜಾರೋಹಣ ನೆರವೇರಿಸಿದರು. ವಿದ್ಯಾವರ್ಧಕ ಸಂಘದ ಗೌರವ ಖಜಾಂಚಿ ಶ್ರೀಶೈಲರಾಮಣ್ಣವರ್, ಸಂಘದ ಆಡಳಿತ ಮಂಡಳಿಯ ಸದಸ್ಯ ಎಸ್.ಶಿವಲಿಂಗಯ್ಯ, ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ, ಡಾ.ದೀಪು, ಸಿದ್ದಯ್ಯ, ಪ್ರೌಢಶಾಲೆ ಮುಖ್ಯಸ್ಥ ಸುರೇಶ್ ಕೆ.ಎಂ, ಡಾ.ರಘು.ಬಿ.ಟಿ., ಕು.ವೈಷ್ಣವಿ, ಕಾನೂನು ಕಾಲೇಜಿನ ಪ್ರೊ.ಹೆಚ್.ಎಸ್. ಶಿವಕುಮಾರ್, ಪ್ರೌಢಶಾಲೆಯ ಪುಟ್ಟೇಗೌಡ ಇನ್ನಿತರರು ಉಪಸ್ಥಿತರಿದ್ದರು.

ಸಂವಿಧಾನ ವಿರೋಧಿಗಳ ಉದ್ದೇಶ ಸೋಲಿಸಿ, ಬಹುಜನರು ಅಧಿಕಾರಕ್ಕೇರಬೇಕು

ಬಹುಜನ ವಿದ್ಯಾರ್ಥಿ ಸಂಘದ ಬೆಳ್ಳಿಹಬ್ಬದಲ್ಲಿ ಚಿತ್ರನಟ ಅಶೋಕ್ ಅಭಿಮತ

ಮೈಸೂರು, ಜ. 27– 'ಸಂವಿಧಾನ ವಿರೋಧಿಗಳ ಉದ್ದೇಶವನ್ನು ಸೋಲಿಸಿ, ಬಹುಜನರು ಅಧಿಕಾರಕ್ಕೆ ಏರಬೇಕು ಎಂದು ಚಿತ್ರನಟ ಅಶೋಕ್ ಹೇಳಿದರು.

ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಬಹುಜನ ವಿದ್ಯಾರ್ಥಿ ಸಂಘದ ಬೆಳ್ಳಿಹಬ್ಬ ಹಾಗೂ ಸಂವಿಧಾನದ 75ನೇ ವರ್ಷಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 10 ವರ್ಷದಿಂದ ಸಂವಿಧಾನದ ಬುಡವೇ ಅಲುಗಾಡುತ್ತಿದೆ. ಆ ಪಕ್ಷಕ್ಕೆ 400 ಸೀಟು ದೊರೆತಿದ್ದರೆ ಸಂವಿಧಾನವೇ ಬದಲಾಗುತ್ತಿತ್ತು ಎಂದು ಹೇಳಿದರು.

ಶತಮಾನಗಳ ಹಿಂದಿನ ಗುಲಾಮಗಿರಿಗೆ ಮತ್ತೆ ಮರಳದಂತೆ ತಮ್ಮ ಹಕ್ಕನ್ನು ಪಡೆಯಬೇಕು. ಕಾನೂನು ರಚನೆಯಲ್ಲಿ ತೊಡಗಬೇಕು' ಎಂದು ಕರೆ ನೀಡಿದರು. 2014ರ ಚುನಾವಣೆ ಬಳಿಕ, ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಿದ ಮೇಲೆಯೇ ನಮಗೆ ಸ್ವಾತಂತ್ರ್ಯ ಬಂತು ಎಂದು ಕೆಲವರು ಹೇಳುತ್ತಾರೆ. ಭಾರತವನ್ನು ಹಿಂದೂ ರಾಷ್ಟ್ರ ಮಾಡಬೇಕು, ಮೇಲ್ವರ್ಗದವರೇ ಆಡಳಿತದಲ್ಲಿರಬೇಕು ಎಂಬ ಆರ್‌ಎಸ್‌ಎಸ್ ಉದ್ದೇಶ, ಅವಿರತ ಶ್ರಮದಿಂದ ಅಧಿಕಾರಕ್ಕೆ ಬಂದಿದ್ದಾರೆ ಎಂದು ಹೇಳಿದರು.

ಬಹುಜನರ ಸಾಮರ್ಥ್ಯ ಚದುರಿ ಹೋಗಿದೆ. ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಸಿಕ್ಕಿದೆಯೇ ಎಂಬ ಬಗ್ಗೆ ಸರ್ಕಾರಗಳು ಯಾವುದೇ ಆಲೋಚನೆ ಮಾಡುತ್ತಿಲ್ಲ. ಇನ್ನೂ ಮೌನವಾಗಿದ್ದರೆ ಅವರು ಎಲ್ಲೆಡೆಯೂ ಹುದ್ದೆಗಳನ್ನು ಆಕ್ರಮಿಸುತ್ತಾರೆ ಎಂದು ಎಚ್ಚರಿಸಿದರು.

ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಮಾತನಾಡಿ, ಸಂವಿಧಾನವನ್ನು ನಾಶ ಮಾಡಲು ಹೊರಟವರು ಹಾಗೂ ಸಂವಿಧಾನ ರಕ್ಷಣೆ ಹೆಸರಿನಲ್ಲಿ ಮೌನವಾಗಿದ್ದವರು, ಈ ಇಬ್ಬರೂ ನಮ್ಮನ್ನು ಆಳುತ್ತಿದ್ದಾರೆ. ತೋರಿಕೆಗೆ ಸೀಮಿತರಾಗಿ ಆಶಯಗಳನ್ನು ಮರೆಮಾಚುವವರು ಹೆಚ್ಚು ಅಪಾಯಕಾರಿಗಳು ಎಂದರು. 'ಕಾನ್ಶಿರಾಮ್ ಅವರಂತೆ ತ್ಯಾಗ ಮಾಡಬೇಕು, ಪರ್ಯಾಯ ರಾಜಕಾರಣ ಕಟ್ಟಬೇಕು. ಬೌದ್ಧ ಧರ್ಮವನ್ನು ಅಂಬೇಡ್ಕರ್ ಅವರು ಪುನರ್ ಸ್ಥಾಪಿಸಿದಂತೆ, ಬಿವಿಎಸ್ ಜಾಗೃತಿಗೆ ಮುಂದಾಗಬೇಕು. ಪರ್ಯಾಯ ಆಲೋಚನೆಯನ್ನು ಕಟ್ಟಬೇಕಾದ ಅಗತ್ಯ ನಮಗಿದೆ' ಎಂದರು.

ಇದೇ ವೇಳೆ ಕವಿ ಹನಸೋಗೆ ಸೋಮಶೇಖರ್ ಅವರ ಕವಿತೆಗಳ ಪುಸ್ತಕ 'ಸ್ವಾಭಿಮಾನಕ್ಕಿಲ್ಲ ಸೋಲು', ಲೇಖಕ ಡಾ. ಕೃಷ್ಣಮೂರ್ತಿ ಚಮರಂ ಅವರ 'ಬಹಿಷ್ಕೃತ ಭಾರತ', 'ಎಲ್ಲಿದೆ ಪ್ರಜಾಪ್ರಭುತ್ವ?' ಪುಸ್ತಕಗಳು ಹಾಗೂ ಹ.ರಾ.ಮಹೇಶ್ ಅವರ ಸಾಹಿತ್ಯ, ಸಂಗೀತವುಳ್ಳ 'ಸಲಾಂ ಸಂವಿಧಾನ', ಸುರೇಶ್ ಗೌತಮ್ ಅವರ ರಚನೆ, ಹ.ರಾ.ಮಹೇಶ್ ರಾಗ ಸಂಯೋಜನೆ, ಗಾಯನದ 'ಅಂಬೇಡ್ಕರಾ ಎಂದರೆ' ಧ್ವನಿಮುದ್ರಿಕೆಗಳು ಬಿಡುಗಡೆಗೊಂಡವು.

ತುಮಕೂರು ವಿಶ್ವವಿದ್ಯಾಲಯದ ಪ್ರೊ.ಬಿ.ರಮೇಶ್, ಮಾಜಿ ಮೇಯರ್ ಪುರುಷೋತ್ತಮ್, 'ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಕೆ.ನರಸಿಂಹಮೂರ್ತಿ, ಲೇಖಕ ವಡ್ಡಗೆರೆ ನಾಗರಾಜಯ್ಯ, ಚಿಂತಕ ಬಿ. ಶಿವಣ್ಣ ಕನಕಪುರ, ಚಂದ್ರಹಾಸ್, ಲೇಖಕ ಕೃಷ್ಣಮೂರ್ತಿ ಚಮರಂ, ಲೇಖಕಿ ಎಂ.ಪ್ರೇಮಾ ಬೋಧಿ ಮೊದಲಾದವರು ಇದ್ದರು.



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಬಹುಜನ ವಿದ್ಯಾರ್ಥಿ ಸಂಘದ ಬೆಳ್ಳಿ ಹಬ್ಬವನ್ನು ಗಣ್ಯರು ಉದ್ಘಾಟಿಸಿದರು.

ಚಿನಕುರಳಿ ಕೃಷಿ ಪತ್ತಿನ ಸಹಕಾರ ಸಂಘದ ಎಲ್ಲಾ 11 ಸ್ಥಾನಗಳನ್ನು

ಗೆದ್ದು ಬೀಗಿದ ಜೆಡಿಎಸ್ ಬೆಂಬಲಿತರು

ಚಿನಕುರಳಿ: ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 11 ಸ್ಥಾನದಲ್ಲೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. ರೈತಸಂಘ-ಕಾಂಗ್ರೆಸ್ ಬೆಂಬಲಿತ ಎಲ್ಲಾ ಅಭ್ಯರ್ಥಿಗಳು ಹೀನಾಯ ಸೋಲುಂಡಿದ್ದಾರೆ.

ಚಿನಕುರಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಒಟ್ಟು 11 ನಿರ್ದೇಶಕ ಸ್ಥಾನಗಳ ಪೈಕಿ 10 ಮಂದಿ ಸಾಲಗಾರರ ಕ್ಷೇತ್ರ ಹಾಗೂ 1 ಸಾಲಗಾರರಲ್ಲದ ಕ್ಷೇತ್ರದ ನಿರ್ದೇಶಕ ಸ್ಥಾನಕ್ಕೆ ಭಾನುವಾರ ಚುನಾವಣೆ ನಿಗದಿಯಾಗಿತ್ತು. ಸಾಲಗಾರರ ಕ್ಷೇತ್ರದ 10 ನಿರ್ದೇಶಕ ಸ್ಥಾನಕ್ಕೆ 22 ಮಂದಿ, ಹಾಗೂ ಸಾಲಗಾರರಲ್ಲದ ಕ್ಷೇತ್ರದ 1 ಸ್ಥಾನಕ್ಕೆ 3 ಮಂದಿ ಅಭ್ಯರ್ಥಿಗಳು ಸ್ಪರ್ಧಿಸಿ ಚುನಾವಣಾ ಕಣದಲ್ಲಿದ್ದರು.

ಚಿನಕುರಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಿತು. ಸಂಜೆ 4 ಗಂಟೆಯ ನಂತರ ಮತ ಎಣಿಕೆ ಕಾರ್ಯನಡೆಯಿತು.

ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಸಿ.ಎಂ.ಕಾಳೇಗೌಡ-(255), ಸಿ.ಎಸ್.ಗೋಪಾಲಗೌಡ(255), ಕೆ.ವೈ.ಭಷ್ಯ(245), ಕೆ.ಎ.ಸ್ವಾಮೀಗೌಡ(244), ರಾಮಕೃಷ್ಣೇಗೌಡ (ಆರ್.ಕೆ)-(243), ಜಿ.ಕೆ.ಕುಮಾರ್(243), ಕೆ.ಎಸ್.ಚಂದ್ರು(241), ತಾಯಮ್ಮ(218), ಸಿ.ಸುರೇಂದ್ರ (215), ಸಿಂಗ್ರಯ್ಯ(195) ಮತಗಳನ್ನು ಪಡೆದು ಭರ್ಜರಿ ಗೆಲುವು ಸಾಧಿಸಿದ್ದಾರೆ.

ರೈತಸಂಘ-ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಸಿ.ಎಂ.ರಮೇಶ್(130), ಪ್ರಕಾಶ್(110), ಸಿ.ಆರ್.ಅಭಿನಂದನ-(90), ಕೆ.ರಮೇಶ್(89), ವಿಶಾಲಾಕ್ಷಮ್ಮ (74), ಕೆ.ಸಿ.ಗೀತಾ(71) ಶಾಂತಮ್ಮ(67), ಸೋಮಶೇಖರ್(66), ಪಿ.ಪಾಪೇಗೌಡ(65), ನರಸಮ್ಮ (56) ಮತಗಳು ಹಾಗೂ ಪಕ್ಷೇತರ ಅಭ್ಯರ್ಥಿಗಳಾದ ರಾಮಮ್ಮ(15), ಎಂ.ಚಿಕ್ಕಣ್ಣ(46) ಪಡೆದು ಚುನಾವಣೆಯಲ್ಲಿ ಹೀನಾಯ ಸೋಲುಂಡಿದ್ದಾರೆ.

ಸಾಲಗಾರರಲ್ಲದ ಕ್ಷೇತ್ರದಿಂದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸ್ವಾಮಿಗೌಡ(608) ಮತಪಡೆದು 410 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ರೈತಸಂಘ-ಕಾಂಗ್ರೆಸ್ ಬೆಂಬಲಿತ ಸಿ.ಎಸ್.ನಾಗೇಶ್ (198) ಹಾಗೂ ಪಕ್ಷೇತರ ಅಭ್ಯರ್ಥಿ (16) ಮತಗಳನ್ನು ಪಡೆದು ಸೋಲುಂಡಿದ್ದಾರೆ.



ಚಿನಕುರಳಿ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಎಲ್ಲಾ ನೂತನ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಭಿನಂದಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಚಿನಕುರಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಚಿನಕುರಳಿ, ಗುಮ್ಮನಹಳ್ಳಿ ಹಾಗೂ ಹೊನಗಾನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ರೈತರು ಜೆಡಿಎಸ್ ಬೆಂಬಲಿತ ಎಲ್ಲಾ ಅಭ್ಯರ್ಥಿಗಳಿಗೆ ಅಧಿಕ ಮತಗಳನ್ನು ಕೊಟ್ಟು ಗೆಲ್ಲಿಸುವ ಮೂಲಕ ಚುನಾವಣೆಯಲ್ಲಿ ಆಯ್ಕೆ ಮಾಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಹಿಂದಿನ ಆಡಳಿತ ಮಂಡಳಿ ಉತ್ತಮವಾಗಿ ಕೆಲಸ ಮಾಡಿದೆ, ವಾಣಿಜ್ಯ ಸಂಕೀರ್ಣದ ಮಳಿಗೆ ಕಟ್ಟಡ ನಿರ್ಮಾಣ ಮಾಡಿ ರೈತರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೂಪರ್ ಮಾರ್ಕೆಟ್ ಆರಂಭಿಸಿದ್ದಾರೆ. ಅಲ್ಲದೆ ಪಡಿತರ ಶಾಪ್, ಗೊಬ್ಬರ ಶಾಪ್‌ಯನ್ನು ಪ್ರಶಂಸನೀಯವಾಗಿ ನಡೆಸುತ್ತಿದ್ದಾರೆ. ಅದೇ ರೀತಿ ನೂತನವಾಗಿ ಆಯ್ಕೆಯಾಗಿರುವಂತಹ ಎಲ್ಲಾ ನಿರ್ದೇಶಕರು ಸಂಘದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯರಾದ ನಾಗಮ್ಮ ಪುಟ್ಟರಾಜು, ಸಿ.ಅಶೋಕ್, ಡೇರಿ ಅಧ್ಯಕ್ಷ ಸಿ.ಶಿವಕುಮಾರ್, ಸೊಸೈಟಿ ಅಧ್ಯಕ್ಷ ಸಿ.ಎಸ್.ಮಂಜುನಾಥ್, ಮಾಜಿ ಅಧ್ಯಕ್ಷರಾದ ಮೊಗ್ಗಣ್ಣಗೌಡ, ವಾಸುದೇವಯ್ಯ ಸೇರಿದಂತೆ ಚಿನಕುರಳಿ, ಗುಮ್ಮನ ಹಳ್ಳಿ, ಹೊನಗಾನಹಳ್ಳಿ ಗ್ರಾಪಂ ವ್ಯಾಪ್ತಿಯ ಜೆಡಿಎಸ್‌ನ ಎಲ್ಲಾ ಮುಖಂಡರು ಹಾಜರಿದ್ದರು.

ನಾಲೆಗೆ ಹಾರಿದ ತಾಯಿ, ಮಕ್ಕಳು

ಮಕ್ಕಳು ನೀರು ಪಾಲು, ತಾಯಿ ಪಾರು



ಲಿತಿಷ(8)



ಕಿಶನ್(2)

ಪಾಂಡವಪುರ, ಜ.27- ಗೃಹಿಣಿಯೊಬ್ಬರು ತನ್ನ ಎರಡು ಮಕ್ಕಳೊಂದಿಗೆ ನಾಲೆಗೆ ಜಿಗಿದಿದ್ದು, ಘಟನೆಯಲ್ಲಿ ಇಬ್ಬರು ಮಕ್ಕಳು ಮೃತಪಟ್ಟು, ತಾಯಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪಟ್ಟಣದ ಹಾರೋಹಳ್ಳಿ ಗ್ರಾಮದ ನಿವಾಸಿ ಧನಂಜಯ್ ಎಂಬುವರ ಪತ್ನಿ ವಿದ್ಯಾ(30) ಬದುಕುಳಿದಿದ್ದು, ಆಕೆಯ ಮಕ್ಕಳಾದ ಲಿತಿಷ(8), ಕಿಶನ್(2) ಘಟನೆಯಲ್ಲಿ ಮೃತಪಟ್ಟಿದ್ದಾರೆ. ಮಕ್ಕಳ ಮೃತದೇಹಕ್ಕಾಗಿ ಶೋಧಕಾರ್ಯ ನಡೆಯುತ್ತಿದೆ.

ಹಾರೋಹಳ್ಳಿ ಗ್ರಾಮದ ನಿವಾಸಿ ಧನಂಜಯ್ ಅವರು ಖಾಸಗಿ ಫೈನಾನ್ಸ್ ಕಂಪನಿಯೊಂದರಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಧನಂಜಯ್ ಅವರ ಪತ್ನಿ ವಿದ್ಯಾ ಅವರು ತನ್ನ ಇಬ್ಬರು ಮಕ್ಕಳೊಂದಿಗೆ ತಾಲೂಕಿನ ಬನಘಟ್ಟ ಗೇಟ್ ಸಮೀಪದ ವಿಸಿ ನಾಲೆಯ ಬಳಿ ತೆರಳಿದ್ದಾರೆ. ಬೈಕ್ ನಾಲೆಯ ಏರಿಯ ಮೇಲೆ ನಿಲ್ಲಿಸಿ, ಮೊಬೈಲ್ ಅಲ್ಲೇ ಇಟ್ಟು ವಿಸಿ ನಾಲೆಗೆ ಜಿದ್ದು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎನ್ನಲಾಗಿದೆ. ವಿದ್ಯಾ ಅವರು ನಾಲೆಯಲ್ಲಿ ಮುಳುಗುತ್ತಿದ್ದನ್ನು ಕಂಡ ಸ್ಥಳೀಯರು ನಾಲೆಗೆ ಹಾರಿ ವಿದ್ಯಾರನ್ನು ಬದುಕಿಸಿದ್ದಾರೆ, ಆದರೆ ಇಬ್ಬರು ಮಕ್ಕಳು ನಾಲೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಪ್ರಾಣಾಪಾಯದಿಂದ ಪಾರಾಗಿರುವ ವಿದ್ಯಾ ನಾನು ಮತ್ತು ಮಕ್ಕಳು ನಾಲೆಯ ಏರಿಯ ಮೇಲೆ ಸೆಲ್ಫಿ ತೆಗೆದುಕೊಳ್ಳಲು ಹೋಗಿ ಕಾಲು ಜಾರಿ ನಾಲೆಗೆ ಬಿದ್ದಿದ್ದೇವೆ ಎಂದು ಪೊಲೀಸರಿಗೆ ತಿಳಿಸಿದ್ದಾರೆ ಎನ್ನಲಾಗಿದೆ. ಆದರೆ, ಸೆಲ್ಫಿ ತೆಗೆದು ಕೊಳ್ಳುವುದಕ್ಕಾಗಿ ಹಾರೋಹಳ್ಳಿಯಿಂದ ಬನಘಟ್ಟ ಬಳಿ ಯಾಕೆ ಹೋಗಿದ್ದು ಎಂಬ ಅನುಮಾನವನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ. ವಿದ್ಯಾ ಉಪಯೋಗಿಸುತ್ತಿದ್ದ ಬೈಕ್ ಮತ್ತು ಮೊಬೈಲ್ ಎರಡನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಿಸಿ ನಾಲೆಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ಮಕ್ಕಳ ಮೃತದೇಹಕ್ಕಾಗಿ ಶೋಧ ಕಾರ್ಯ ನಡೆಯುತ್ತಿದೆ.

ಮೃತ ಮಕ್ಕಳ ತಂದೆ ಧನಂಜಯ್ ಪೊಲೀಸ್ ಠಾಣೆಗೆ ಇನ್ನೂ ದೂರು ನೀಡುವುದು ತಡವಾಗಿರುವುದರಿಂದ ಘಟನೆ ಸಂಬಂಧ ಪ್ರಕರಣ ದಾಖಲಾಗಿಲ್ಲ.

ಆಕ್ರಂದನ: ಪುಟಾಣಿ ಮಕ್ಕಳನ್ನು ಕಳೆದುಕೊಂಡಿರುವ ಪೋಷಕರ ಮನೆಯಲ್ಲಿ ಆಕ್ರಂದನ ಮುಗಿಲು ಮುಟ್ಟಿದೆ. ಪೋಷಕರ ಗೋಳಾಟ ಮನಕಲುಕುವಂತಿತ್ತು.

ಗಣರಾಜ್ಯೋತ್ಸವದಲ್ಲಿ ಸರ್ಕಾರದ ಸಾಧನೆ ಸಾರಿದ ಜಿಲ್ಲಾ ಉಸ್ತುವಾರಿ ಸಚಿವ

ಮಂಡ್ಯ,ಜ.27- ಗಣರಾಜ್ಯೋತ್ಸವ ಪ್ರತಿಯೊಬ್ಬ ಭಾರತೀಯನಿಗೂ ಮಹತ್ವವಾದ ಮತ್ತು ಪವಿತ್ರವಾದ ದಿನ. ಎಲ್ಲ ಭಾರತೀಯರನ್ನು ಭಾವನಾತ್ಮಕ ವಾಗಿ, ಭಾಷಿಕವಾಗಿ, ಭೌಗೋಳಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಬೆಸುಗೆ ಹಾಕಿದ ದಿನ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸ್ವಾತಂತ್ರ್ಯಗೊಂಡ ನಂತರ, ಇಡೀ ದೇಶವನ್ನು ಭೌಗೋಳಿಕವಾಗಿ, ಭಾಷಿಕವಾಗಿ ಒಗ್ಗೂಡಿಸುವ ಅನಿವಾರ್ಯತೆ ಉದ್ಭವಿಸಿತು. ಜೊತೆಗೆ ಏಕರೂಪದ ಕಾನೂನು ಹಾಗೂ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ದೇಶದ ಏಕತೆಯನ್ನು ಬಲಪಡಿಸಲು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ನೇತೃತ್ವದಲ್ಲಿ "ಭಾರತ ಸಂವಿಧಾನ ಕರಡು ರಚನಾ ಸಮಿತಿ" ಯನ್ನು ರಚಿಸಲಾಯಿತು ಎಂದು ಹೇಳಿದರು.



ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ಎರಡು ವರ್ಷಗಳ ಸುದೀರ್ಘ ಅವಲೋಕನ ಮತ್ತು ಚರ್ಚೆಯ ನಂತರ, ಅಂತಿಮವಾಗಿ 26 ನವೆಂಬರ್ 1949 ರಂದು ಸಂವಿಧಾನವನ್ನು ಅಂಗೀಕರಿಸಲಾಯಿತು. ಡಾ.ಬಿ.ಆರ್. ಅಂಬೇಡ್ಕರ್‌ರವರು ರಚಿಸಿದ ಸಂವಿಧಾನವನ್ನು ದೇಶಾದ್ಯಂತ 26ನೇ ಜನವರಿ 1950 ರಿಂದ ಜಾರಿಗೆ ತರಲಾಗಿದೆ ಎಂದರು.

ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ನಮ್ಮ ಸರ್ಕಾರವು ಶಕ್ತಿ ಯೋಜನೆಯನ್ನು ಜಾರಿಗೆ ತಂದಿದ್ದು, ನಮ್ಮ ಮಂಡ್ಯ ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 10.83 ಕೋಟಿ ಟಿಕೆಟ್‌ಗಳನ್ನು ಮಹಿಳೆಯರಿಗೆ ಉಚಿತವಾಗಿ ಪ್ರಯಾಣಿಸಲು ನೀಡಿ ಒಟ್ಟು ರೂ.274 ಕೋಟಿ ವೆಚ್ಚ ಭರಿಸಲಾಗಿದೆ. ಪ್ರತಿಯೊಬ್ಬರಿಗೂ ಆಹಾರದ ಕೊರತೆ ನೀಗಿಸುವ ಉದ್ದೇಶದಿಂದ ನಮ್ಮ ಸರ್ಕಾರ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಪ್ರತಿ ವ್ಯಕ್ತಿಗೆ 5 ಕೆ.ಜಿ ಅಕ್ಕಿಯನ್ನು ದಾಸ್ತಾನು ರೂಪದಲ್ಲಿ ಹಾಗೂ 5 ಕೆ.ಜಿ ಅಕ್ಕಿಯನ್ನು ನಗದು ರೂಪದಲ್ಲಿ ನೀಡಲಾಗುತ್ತಿದ್ದು, ಈವರೆಗೆ ಒಟ್ಟು 4,43,292 ಫಲಾನುಭವಿಗಳಿಗೆ ಅನ್ನಭಾಗ್ಯ ಯೋಜನೆಯಡಿ ರೂ.354.78 ಕೋಟಿ ಹಣವನ್ನು ನೇರ ನಗದು ಪಾವತಿ ಮೂಲಕ ನೀಡಲಾಗಿದೆ ಎಂದು ಹೇಳಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಕ್ರಿ.ಶ. 950 ರಲ್ಲಿ ಸ್ಥಾಪಿತವಾದ ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು ಆತಗೂರು "ಕಾಳಿ" ಎಂಬ ಯುದ್ಧದ ಬೇಟೆನಾಯಿ ಸ್ಮಾರಕದ ಆತಗೂರು ಶಾಸನದ ಪ್ರತಿಕೃತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸಮ್ಮೇಳನದ ಆರಂಭಕ್ಕೂ ಮುನ್ನ ಸಾಹಿತಿಗಳ ಕೋರಿಕೆಯಂತೆ ಪುರಾತತ್ವ ಇಲಾಖೆಯ ಸಹಕಾರದೊಂದಿಗೆ ಪರಮ ಪೂಜ್ಯ ಡಾ.ನಿರ್ಮಲಾನಂದನಾಥ ಸ್ವಾಮೀಜಿರವರ ಸಾನ್ನಿಧ್ಯದಲ್ಲಿ ಅನಾವರಣಗೊಳಿಸಲಾಗಿದೆ. 14 ಸಾವಿರಕ್ಕೂ ಹೆಚ್ಚು ನ್ಯಾಯಾಲಯ ಪ್ರಕರಣ ಇತ್ಯರ್ಥ, ಕಂದಾಯ ಇಲಾಖೆಯಲ್ಲಿ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಇದರಂತೆ, ಕಂದಾಯ ನ್ಯಾಯಾಲಯಗಳಲ್ಲಿ ಸುಮಾರು 14 ಸಾವಿರಕ್ಕೂ ಹೆಚ್ಚು ನ್ಯಾಯಾಲಯ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದರು.

ಮಂಡ್ಯದಲ್ಲಿ ನೂತನ ಸಮಗ್ರ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಬೇಕೆನ್ನುವ ಬಹು ದಿನಗಳ ಕನಸು ನನಸಾಗುವ ಹಂತ ತಲುಪಿದೆ ಈ ನಿಟ್ಟಿನಲ್ಲಿ ಮಂಡ್ಯದಲ್ಲಿ ನೂತನ ಸಮಗ್ರ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಮಂಡ್ಯ ಜಿಲ್ಲೆಯ ಜನರ ಬಹುದಿನಗಳ ಕನಸನ್ನು ಸಾಕಾರಗೊಳಿಸಿದ್ದಕ್ಕಾಗಿ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಹಾಗೂ ಸಂಪುಟದ ಸಹದ್ಯೋಗಿಗಳನ್ನು ವಿಶೇಷವಾಗಿ ಅಭಿನಂದಿಸುತ್ತೇನೆ. ಆರ್‌ಐಡಿಎಫ್-ಟ್ರಾಂಚ್ 30ರಡಿ ಮದ್ದೂರು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಕ್ಯಾಬಿನೆಟ್ ಸಭೆಯಲ್ಲಿ ಅನುಮೋದನೆ ದೊರಕಿದೆ ಎಂದರು.

ಮೈಶುಗರ್ ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕಾಗಿ ಸರ್ಕಾರದಿಂದ ಕಳೆದ ವರ್ಷ ರೂ. 50 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು ಕಾರ್ಖಾನೆ ಯಶಸ್ವಿಯಾಗಿ ಈ ವರ್ಷ 2,01,000 ಮೆಟ್ರಿಕ್ ಟನ್ ಕಬ್ಬು ನುರಿಸಲಾಗಿರುತ್ತದೆ. ಮೈಶುಗರ್‌ನಿಂದ ಬಹುದಿನಗಳಿಂದ ಬಾಕಿ ಇದ್ದ ವಿದ್ಯುತ್ ಬಿಲ್ ಬಾಕಿ ಮೊತ್ತ ರೂ54 ಕೋಟಿಯನ್ನು ಮನ್ನಾ ಮಾಡಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಆಗಿರುವ ಸಾಧನೆಗಳೇ ಸರ್ಕಾರದ ಯಶಸ್ಸಿನ ಕೈಗನ್ನಡಿ. ಕಣ್ಣಿಗೆ ಕಾಣುವಂಥ ಅಭಿವೃದ್ಧಿಗಳೇ ನಮಗೆ ಶ್ರೀರಕ್ಷೆ. ಅಭಿವೃದ್ಧಿಯೇ ನಮ್ಮ ಮಾತಾಗಬೇಕು ಎಂದು ನಂಬಿದ್ದೇನೆ. ಹೀಗಾಗಿ, ಜಿಲ್ಲೆಯಲ್ಲಿನ ಅಭಿವೃದ್ಧಿ ಚಿತ್ರಗಳು ಮುಂದಿನ ದಿನಗಳಲ್ಲಿ ಯಶಸ್ಸಿನ ಬಿಂದುಗಳಾಗಲಿವೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ರವಿಕುಮಾರ್, ವಿಧಾನಪರಿಷತ್ ಶಾಸಕ ದಿನೇಶ್ ಗೂಳಿಗೌಡ, ನಗರಸಭೆ ಅಧ್ಯಕ್ಷ ಪ್ರಕಾಶ್, ಮುಡಾ ಅಧ್ಯಕ್ಷ ನಯೀಮ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಸಣ್ಣಹೈದೇಗೌಡ ನಿಧನ

ಚಿನಕುರಳಿ: ಚಿನಕುರಳಿ ಗ್ರಾಮದ ಹಿರಿಯ ಮುಖಂಡ ಸಣ್ಣಹೈದೇಗೌಡ(70) ಅವರು ವಯೋಸಹಜ ಕಾಯಿಲೆಯಿಂದ ಸೋಮವಾರ ಬೆಳಿಗ್ಗೆ ನಿಧನರಾದರು.



ಮೃತರು ಪತ್ನಿ ಎಪಿಎಂಸಿ ಮಾಜಿ ಸದಸ್ಯೆ ಜಯಮ್ಮ, ಪುತ್ರರಾದ ಹರೀಶ್, ಗಿರೀಶ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಅನೇಕ ಗಣ್ಯರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಅಂತಿಮ ದರ್ಶನ ಪಡೆದರು. ಸೋಮವಾರ ಮಧ್ಯಾಹ್ನ ಗ್ರಾಮದ ಹೊರವಲಯದ ಅವರ ತೋಟದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಒಂದನೇ ಪುಟದಿಂದ


ಅದ್ದೂರಿ ಸಾಮೂಹಿಕ ವಿವಾಹ ಮಹೋತ್ಸವ



ಮೈಸೂರಿನ ಶ್ರೀ ಕ್ಷೇತ್ರ ಸುತ್ತೂರಿನ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಉದ್ಘಾಟಿಸಿದರು.

ಸಂದರ್ಭದಲ್ಲಿ ಶ್ರೀ ಮಠ ಸಾಮೂಹಿಕ ವಿವಾಹ ಆಯೋಜಿಸಿ ಸಮಾಜ ಮುಖಿ ಕಾರ್ಯ ಮಾಡಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ದೀಪ ಕತ್ತಲನ್ನು ಬೆಳಗುವಂತೆ ಸುತ್ತೂರು ಮಠದ ಸೇವಾ ಕಾರ್ಯ ಮೈಸೂರು, ಕರ್ನಾಟಕ, ಭಾರತ ಮಾತ್ರವಲ್ಲದೆ ವಿದೇಶದಲ್ಲೂ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ ಗುರೂಜಿ ಅಭಿಪ್ರಾಯಪಟ್ಟರು. ದೇಶ ವಿದೇಶದಲ್ಲಿ ಕನ್ನಡದ ಹಿರಿಮೆ-ಗರಿಮೆಯ ಕೀರ್ತಿ ಪತಾಕೆ ಹಾರುತ್ತಿದೆ. ಈ ಮೂಲಕ ವಿಶ್ವದೆಲ್ಲೆಡೆ ನಮ್ಮ ಪುರಾತನ ಸಂಸ್ಕೃತಿಯ ಸುಗಂಧ ಹರಡುತ್ತಿದೆ ಎಂದರು. ತ್ರಿವಿಧ ದಾಸೋಹದ ಮೂಲಕ ಸಮಾಜ ಮುಖಿಯಾಗಿ ಕೆಲಸ ಮಾಡುತ್ತಿರುವ ಈ ನೆಲದಲ್ಲಿ ಜನ್ಮವೆತ್ತಿದ ನೀವೇ ಪುಣ್ಯವಂತರು ಎಂದು ಪ್ರತಿಪಾದಿಸಿದ ರವಿಶಂಕರ ಗುರೂಜಿ, ಸುತ್ತೂರು ಶ್ರೀಗಳ ಸರಳತೆ, ಸಹಜತೆ, ಪ್ರೀತಿ ಎಲ್ಲರನ್ನು ಕಟ್ಟಿ ಹಾಕುತ್ತದೆ. ಆದ ಕಾರಣ ಪ್ರತಿಯೊಬ್ಬರೂ ಸುತ್ತೂರು ಮಠದ ಬಗ್ಗೆ ಅಭಿಮಾನವಿದೆ ಎಂದು ಹೇಳಿದರು. ಈ ವೇಳೆ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗರೆಡ್ಡಿ, ಸುತ್ತೂರು ಜಾತ್ರೆ ಯಲ್ಲಿ ಧಾರ್ಮಿಕತೆ, ಆಧ್ಯಾತ್ಮಿಕತೆ ಮಾತ್ರವಲ್ಲದೆ ರೈತರಿಗೆ ಅನುಕೂಲವಾಗುವ ಕೃಷಿ ಮೇಳದಂತಹ ಕಾರ್ಯಕ್ರಮ ನಡೆಯುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿ ಸಿದರು. ಸುತ್ತೂರು ಮಠ ಹಲವು ಕಾರ್ಯಕ್ರಮಗಳ ಮೂಲಕ ಜನರು ಸನ್ಮಾರ್ಗದಲ್ಲಿ ಸಾಗುವಂತೆ ಮಾಡುತ್ತಿದೆ. ಜೊತೆಗೆ ದೇಶಿ ಗುಣ ಸಾರುವ ಹಲವು ಅರ್ಥಪೂರ್ಣ ಕಾರ್ಯಕ್ರಮ ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ ಅಂಧರಿಬ್ಬರು ಸತಿ-ಪತಿಗಳಾದರು.

ಸದ್ಯ ರಿಲೀಫ್

ಮೂಲಕ ಉತ್ತರ ನೀಡಲು 15 ದಿನಗಳ ಕಾಲಾವಕಾಶ ಕೋರಿದ್ದರು. ಹದಿನೈದು ದಿನಗಳ ಕಾಲಾವಕಾಶ ಮುಗಿಯುತ್ತಿದ್ದಂತೆ ತಮ್ಮ ವಕೀಲರ ಮೂಲಕ ಮನವಿ ಸಲ್ಲಿಸಿ, ತಮಗೆ ವಯಸ್ಸಾಗಿದ್ದು, ತಾವು ನಮ್ಮ ಮನೆಗೇ ಬಂದು ವಿಚಾರಣೆ ನಡೆಸಬಹುದು ಎಂದು ಕೋರಿದ್ದರು. ಮನವಿಗೆ ಸ್ಪಂದಿಸದ ಇ.ಡಿ. 24ರಂದು ನೋಟಿಸ್ ನೀಡಿ ಖುದ್ದು ಹಾಜರಾಗುವಂತೆ ಆದೇಶ ನೀಡಿತು.

ಬೈರತಿ ಸುರೇಶ್‌ಗೂ 2ನೇ ನೋಟಿಸ್: ಸಚಿವ ಭೈರತಿ ಸುರೇಶ್‌ಗೂ ಇದು ಎರಡನೇ ನೋಟಿಸ್ ಆಗಿದೆ. ನಿಯಮಾವಳಿಗಳನ್ನು ಗಾಳಿಗೆ 50:50ರ ಅನುಪಾತದಲ್ಲಿ ಪ್ರಾಧಿಕಾರ ನಿವೇಶನಗಳನ್ನು ಪಾರ್ವತಿ ಅವರಿಗೆ ಹಂಚಿಕೆ ಮಾಡಿತ್ತು ಎಂದು ಆರೋಪಿಸಲಾಗಿದೆ.

ಈ 14 ನಿವೇಶನಗಳನ್ನು ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಪಡೆದುಕೊಂಡಿದ್ದರು, ಇದರಿಂದ ಪ್ರಾಧಿಕಾರಕ್ಕೆ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ನಷ್ಟ ಉಂಟು ಮಾಡಿದೆ. ಅಧಿಕಾರಿಗಳು, ಕಾಣದ ಕೈಗಳ ಒತ್ತಡಕ್ಕೆ ಮಣಿದು ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಿದ್ದರಿಂದ 58 ಕೋಟಿ ರೂ.ನಷ್ಟು ನಷ್ಟ ಆಗಿದೆ.

ಈ ಪ್ರಕರಣವನ್ನೇ ಮುಂದಿಟ್ಟುಕೊಂಡು ಪ್ರಾಧಿಕಾರ ಸಾವಿರಾರು ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಿದ್ದರಿಂದ ಕೋಟ್ಯಂತರ ರೂ. ನಷ್ಟ ಉಂಟಾಗಿದೆ.

ಅಕ್ರಮ ಹಣ ವರ್ಗಾವಣೆ ಆಗಿದೆ ಎಂಬ ಹಿನ್ನೆಲೆಯಲ್ಲಿ ತನಿಖೆ ನಡೆಸಿದ ಇ.ಡಿ. ಸಂಬಂಧಪಟ್ಟ ದಾಖಲೆಗಳನ್ನು ವಶಕ್ಕೆ ಪಡೆದಿದ್ದಲ್ಲದೆ, ಇದುವರೆಗೆ ಮುಡಾದ ಹಿಂದಿನ ಇಬ್ಬರು ಆಯುಕ್ತರು ಹಾಗೂ ಅಧಿಕಾರಿಗಳು ಅಲ್ಲದೆ, ಡೆವಲಪರ್ಸ್‌ಗಳ ಮನೆಗಳ ಮೇಲೆ ದಾಳಿ ನಡೆಸಿ ಕೆಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ 80ಕ್ಕೂ ಹೆಚ್ಚು ಅಧಿಕಾರಿಗಳು, ಡೆವಲಪರ್ಸ್ ಮತ್ತು ಮಧ್ಯವರ್ತಿಗಳನ್ನು ಇ.ಡಿ. ವಿಚಾರಣೆಗೆ ಒಳಪಡಿಸಿ, ಇದರಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ ಎಂದು ಹಗರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತಕ್ಕೂ ಮಾಹಿತಿ ನೀಡಿತ್ತು.

ಇತ್ತೀಚೆಗೆ ತನ್ನ ಜಾಲತಾಣ ಖಾತೆಯಲ್ಲಿ ಮುಡಾದಲ್ಲಿ ನಡೆದಿರುವ ಭ್ರಷ್ಟಾಚಾರ ಹಾಗೂ ಪಾಲುದಾರರ ಕುರಿತು ವಿಷಯ ಬಹಿರಂಗ ಪಡಿಸಿತ್ತು. ಪ್ರಕರಣವನ್ನು ಸಿಬಿಐಗೆ ವಹಿಸುವ ಸಂಬಂಧ ನ್ಯಾಯಾಲಯದಲ್ಲಿ ಅರ್ಜಿ ವಿಚಾರಣೆ ವೇಳೆಯಲ್ಲೇ ಮುಡಾದಲ್ಲಿನ ಭ್ರಷ್ಟಾಚಾರ ಆರೋಪದ ಬಗ್ಗೆ ಇ.ಡಿ. ಪದೇ ಪದೇ ಮಾಹಿತಿ ಬಹಿರಂಗಪಡಿಸಿತ್ತು. ಇದರ ಬೆನ್ನಲ್ಲೇ ಪ್ರಮುಖ ಆರೋಪಿಗಳಾದ ಪಾರ್ವತಿ ಹಾಗೂ ಭೈರತಿ ಸುರೇಶ್ ಅವರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಖುದ್ದು ಹಾಜರಾಗುವಂತೆ ಸೂಚಿಸಿತ್ತು.

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಕೋರ್ಟ್‌ಗೆ ಸಮಾಧಾನಕರ ಎನ್ನಿಸುವ ಸ್ವತಂತ್ರ ತನಿಖಾ ತಂಡಕ್ಕೆ ತನಿಖೆ ಹೊಣೆ ವಹಿಸಬಹುದು, ತನಿಖೆ ಯಾರು ನಡೆಸಬೇಕೆಂದು ಆರೋಪಿಯನ್ನು ಕೇಳುವ ಅಗತ್ಯವಿಲ್ಲ ಎಂಬುದಾಗಿ ಹೇಳಿ, ಪಂಜಾಬ್, ಗುಜರಾತ್ ಸೇರಿದಂತೆ ಹಲವು ರಾಜ್ಯಗಳ ಪ್ರಕರಣಗಳನ್ನು ಉಲ್ಲೇಖಿಸಿದರು.

ಸ್ವತಂತ್ರ ತನಿಖೆ ಅನಿವಾರ್ಯ: ಸುಪ್ರೀಂಕೋರ್ಟ್ ಮಾರ್ಗಸೂಚಿಯನ್ವಯ ಸ್ವತಂತ್ರ ತನಿಖೆ ಅನಿವಾರ್ಯ, ಲೋಕಾಯುಕ್ತ ಪೊಲೀಸರು ರಾಜ್ಯ ಸರ್ಕಾರದ ಅಧೀನದಲ್ಲಿದ್ದಾರೆ, ಹಗರಣದಲ್ಲಿ ರಾಜಕೀಯ ಮುಖಂಡರ ಹೆಸರು ಇರುವುದರಿಂದ ಸ್ಥಳೀಯ ಪೊಲೀಸರಿಂದ ದಕ್ಷ ತನಿಖೆ ಸಾಧ್ಯವಿಲ್ಲ, ರಾಜಕೀಯ ಒತ್ತಡದಿಂದ ತನಿಖೆ ಹಳಿ ತಪ್ಪಬಹುದು.

ಆರೋಪಿಗಳ 3.26 ಲಕ್ಷ ರೂ. ಮೌಲ್ಯದ ಜಮೀನು ಸ್ವಾಧೀನಕ್ಕೆ ಬದಲಾಗಿ ದುಬಾರಿ ನಿವೇಶನ ಹಂಚಿಕೆ ಮಾಡಲಾಗಿದೆ, ಎಲ್ಲ ಅಧಿಕಾರಿಗಳೂ ಸೇರಿ ಅನುಕೂಲ ಮಾಡಿಕೊಟ್ಟಿದ್ದಾರೆ, ಅಸ್ತಿತ್ವದಲ್ಲೇ ಇಲ್ಲದ ಜಮೀನಿನ ಭೂಪರಿವರ್ತನೆ ಮಾಡಲಾಗಿದೆ, ಕ್ಯಾಬಿನೆಟ್ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಟಿಪ್ಪಣಿ ಇದ್ದು, ಈ ಪ್ರಕರಣದಲ್ಲಿ ಸ್ವತಂತ್ರ ತನಿಖೆ ಅನಿವಾರ್ಯ ಎಂದು ವಾದಿಸಿದರು.

ನ್ಯಾಯಕ್ಕಾಗಿ ಸಿಬಿಐ ತನಿಖೆ ಅನಿವಾರ್ಯ: ನ್ಯಾಯ ಎತ್ತಿಹಿಡಿಯಲು ಸಿಬಿಐ ತನಿಖೆ ಅನಿವಾರ್ಯ, ಮುಡಾ ಪ್ರಕರಣದಲ್ಲಿ ನಡೆದಿರುವ ಘಟನೆಗಳು ತನಿಖೆಯ ಅಗತ್ಯತೆಯನ್ನು ಒತ್ತಿ ಹೇಳುತ್ತಿವೆ, ಏಕಮುಖದ, ತಾರತಮ್ಯದ ತನಿಖೆ ನಡೆಯಬಾರದು. ಸ್ವತಂತ್ರ, ನ್ಯಾಯಸಮ್ಮತ ತನಿಖೆ ಆಗಬೇಕಿದೆ. ಲೋಕಾಯುಕ್ತ ಪೊಲೀಸರಿಂದ ನ್ಯಾಯಸಮ್ಮತ ತನಿಖೆ ಸಾಧ್ಯವಿಲ್ಲ. ಎಲ್ಲವನ್ನೂ ಕಾರ್ಪೆಟ್ ಕೆಳಗೆ ಹಾಕುವ ಪ್ರಯತ್ನ ನಡೆಯುತ್ತಿದೆ ಎಂದರು. ಈ ಮಧ್ಯೆ, ಎಜಿ ಶಶಿಕಿರಣ್ ಶೆಟ್ಟಿ ಮನವಿ ಮಾಡಿ, ಸ್ವಲ್ಪ ಕಾಲಾವಕಾಶ ನೀಡಬೇಕೆಂದು ಕೋರಿದರು. ಸರ್ಕಾರದ ಪರ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಲಿರುವುದರಿಂದ ಬೆಂಗಳೂರಿನಲ್ಲಿ ವಿಚಾರಣೆ ನಡೆದಾಗ ದಿನಾಂಕ ನಿಗದಿಪಡಿಸಿ ಎಂದು ಅವರು ಮಾಡಿದ ಮನವಿಯನ್ನು ಒಪ್ಪದ ಹೈಕೋರ್ಟ್, ಇಂದು ವಿಚಾರಣೆ ನಿಗದಿಯಾಗಿದೆ, ಮುಂದೂಡಿಕೆ ಸಾಧ್ಯವಿಲ್ಲ ಎಂದಿತು.

ದೇವರಾಜು ಅಮಾಯಕ: ಭೂಮಾಲೀಕ ದೇವರಾಜು ಪರ ವಕೀಲ ದುಷ್ಯಂತ್ ದವೆ ವಾದ ಮಂಡಿಸಿ, ದೇವರಾಜು ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣವಿಲ್ಲ, ಆದ್ದರಿಂದ ಸಿಬಿಐ ತನಿಖೆಗೆ ವಹಿಸುವ ಅಗತ್ಯವಿಲ್ಲ. ಲೋಕಾಯುಕ್ತ ಪೊಲೀಸರು ತನಿಖೆ ನಡೆಸಬೇಕೆಂದು ಈ ಹಿಂದೆ ಕೋರಿದ್ದರು. ಈಗ ಲೋಕಾಯುಕ್ತ ಪೊಲೀಸರೇ ತನಿಖೆ ನಡೆಸುತ್ತಿದ್ದಾರೆ, ಈ ಹಂತದಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿರುವುದು ಸೂಕ್ತವಲ್ಲ ಎಂದು ವಾದ ಮಂಡಿಸಿದರು. ದೇವರಾಜು ಹೆಸರಿಗೆ ಇತರೆ ಮಾಲೀಕರು ಹಕ್ಕು ಬಿಡುಗಡೆ ಮಾಡಿದ್ದಾರೆ, ಈ ಅಂಶವನ್ನು ಮುಚ್ಚಿಟ್ಟು ದೂರು ದಾಖಲಿಸಲಾಗಿದೆ.

ದೇವರಾಜು ಅವರ ವ್ಯಕ್ತಿ ಸ್ವಾತಂತ್ರ್ಯವನ್ನು ಪಣಕ್ಕಿಡಲಾಗಿದೆ, ಹೈಕೋರ್ಟ್ ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕು, ದೇವರಾಜು ಅಮಾಯಕ ಎಂದಾದರೆ ಕೇಸ್‌ನ ಆರೋಪಿಯಾಗಬಾರದು, ಆದ್ದರಿಂದ ದೇವರಾಜು ವಾದವನ್ನು ಹೈಕೋರ್ಟ್ ಪರಿಗಣಿಸಬೇಕು ಎಂದು ದವೆ ಮನವಿ ಮಾಡಿದರು.

ದುಷ್ಯಂತ್ ದವೆ ವಾದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು, ಲೋಕಾಯುಕ್ತ ಪೊಲೀಸರು ಈವರೆಗಿನ ತನಿಖಾ ವರದಿ ಸಲ್ಲಿಸಿದ್ದಾರೆ. ಇದನ್ನು ಪರಿಶೀಲಿಸಿ ನಾನು ಸಿಬಿಐ ತನಿಖೆ ಬಗ್ಗೆ ತೀರ್ಮಾನಿಸುತ್ತೇನೆ. ಈಗಾಗಲೇ ವಿಚಾರಣೆಗೊಳಗಾದ ಅಂಶಗಳನ್ನು ಮತ್ತೆ ವಾದಿಸುವ ಅಗತ್ಯವಿಲ್ಲ ಎಂದರು.

ಲೋಕಾಯುಕ್ತ ಪೊಲೀಸರ ತನಿಖೆ ಕೋರಿ ದೂರು ಸಲ್ಲಿಸಿದ್ದೀರಿ, ಎಫ್‌ಐಆರ್ ದಾಖಲಾದ ದಿನವೇ ಸಿಬಿಐ ತನಿಖೆ ಕೋರಿದ್ದೇಕೆಂದು ಹೈಕೋರ್ಟ್ ಪ್ರಶ್ನಿಸಿತು.

ಇದಕ್ಕೆ ಉತ್ತರಿಸಿದ ವಕೀಲ ಮಣೀಂದರ್ ಸಿಂಗ್, ರಿಟ್ ಅರ್ಜಿ ದಾಖಲಾದ ಬಳಿಕ ಎಫ್‌ಐಆರ್ ದಾಖಲಾಗಿದೆ. ಅದುವರೆಗೂ ಪೊಲೀಸರು ಎಫ್‌ಐಆರ್ ದಾಖಲಿಸಿರಲಿಲ್ಲ ಎಂದು ವಾದಿಸಿದರು.

ಸಿಬಿಐ ಕೇಂದ್ರದ ಹಿಡಿತದಲ್ಲಿದೆ: ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಿಲ್ ವಾದ ಮಂಡಿಸಿ, ಲೋಕಾಯುಕ್ತ ಸ್ವತಂತ್ರ ತನಿಖಾ ಸಂಸ್ಥೆಯಾಗಿದೆ. ಲೋಕಾಯುಕ್ತ ಪೊಲೀಸರು ರಾಜ್ಯ ಸರ್ಕಾರದ ಹಿಡಿತದಲ್ಲಿದ್ದಾರೆ ಎಂದಿದ್ದಾರೆ. ಆದರೆ, ಸಿಬಿಐ ಸಹಾ ಕೇಂದ್ರ ಸರ್ಕಾರದ ಹಿಡಿತದಲ್ಲಿದೆ. ಆದ್ದರಿಂದ ಸಿಬಿಐಯನ್ನೂ ಸ್ವತಂತ್ರ ತನಿಖಾ ಸಂಸ್ಥೆ ಎನ್ನಲಾಗದು. ಲೋಕಾಯುಕ್ತ ಸಂಸ್ಥೆ ಕಳಂಕಿತ ಎನ್ನಲಾಗದು, ಲೋಕಾಯುಕ್ತ ಸಂಸ್ಥೆಯ ನಿಗಾ ಇರುವುದರಿಂದ ತನಿಖೆ ಸ್ವತಂತ್ರ ವಾಗಿರಲಿದೆ ಎಂದರು.

ಸಿಬಿಐ ಪಂಜರದ ಗಿಳಿ ಎಂದಿತ್ತು ಸುಪ್ರೀಂ: ಸಿಬಿಐ ಪಂಜರದೊಳಗಿನ ಗಿಣಿ ಎಂಬುದಾಗಿ 'ಸುಪ್ರೀಂ' ಸಹಾ ಹೇಳಿದೆ. ಆದ್ದರಿಂದ ಸಿಬಿಐ ಈ ಅಭಿಪ್ರಾಯವನ್ನು ಹೋಗಲಾಡಿಸಬೇಕಿದ್ದು, ಲೋಕಾಯುಕ್ತ ಪೊಲೀಸರನ್ನು ಸಂಶಯಿಸಬಾರದು. ರಾಜ್ಯ ಸರ್ಕಾರ ಸಿಬಿಐ ತನಿಖೆಗೆ ವಹಿಸುವ ಸಾಮಾನ್ಯ ಅನುಮತಿಯನ್ನು ಹಿಂಪಡೆದಿದೆ. ಸಿಬಿಐ ಸ್ವತಂತ್ರವಾಗಿಲ್ಲದಿರುವುದೇ ಈ ಕ್ರಮಕ್ಕೆ ಕಾರಣವಾಗಿದೆ ಎಂದು ವಾದಿಸಿದರು.

ಸಿಬಿಐ ತನಿಖೆಗೆ ಅರ್ಹವೇನಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ವಕೀಲ ಅಭಿಷೇಕ್ ಮನುಸಿಂಘ್ವಿ ವಾದ ಮಂಡಿಸಿ, ಸಿಬಿಐ ತನಿಖೆಗೆ ಅರ್ಹವೆನ್ನಲು ಇದು ಅಪರೂಪದ ಪ್ರಕರಣವಲ್ಲ, ಲೋಕಾಯುಕ್ತ ತನಿಖೆಯಲ್ಲಿ ಮಧ್ಯಪ್ರವೇಶಿಸಿ ಸಿಬಿಐಗೆ ಹಸ್ತಾಂತರಿಸುವುದು ಸರಿಯಲ್ಲ. ದೂರುದಾರರಿಗೆ ರಾಜ್ಯಪಾಲರ ಅನುಮತಿ ಬೇಕಿತ್ತು, ಪಡೆದರು. ಮೊದಲಿಗೆ ಲೋಕಾಯುಕ್ತ ಪೊಲೀಸರ ತನಿಖೆ ಕೋರಿದರು, ತನಿಖೆ ಆಗುವ ಮೊದಲೇ ಸಿಬಿಐ ತನಿಖೆ ಕೇಳುತ್ತಿದ್ದಾರೆ ಎಂದು ವಾದಿಸಿದರು.

ಇಬ್ಬರು ಆತ್ಮಹತ್ಯೆ

ಜೀವನ ನಿರ್ವಹಣೆಯು ಕಷ್ಟವಾಯಿತು ಎಂದು ಹೇಳಲಾಗಿದೆ. ಈ ನಡುವೆ ಮೈಕ್ರೋ ಫೈನಾನ್ಸ್ ಏಜೆಂಟ್‌ಗಳ ಕಿರುಕುಳ ಹೆಚ್ಚಾಗಿದ್ದರಿಂದ ಜಯಶೀಲ ಅವರು ಭಾನುವಾರ ಜೋಳದ ಕಾಳುಗಳಿಗೆ ಹಾಕುವ ವಿಷದ ಮಾತ್ರೆಗಳನ್ನು ಸೇವಿಸಿ ತಮ್ಮ ಜಮೀನಿನಲ್ಲೇ ಅಸ್ವಸ್ಥ ಗೊಂಡಿದ್ದರು. ಗ್ರಾಮಸ್ಥರು ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಈ ಸಂಬಂಧ ಅವರ ಪುತ್ರ ರಾಜೇಶ್ ನೀಡಿದ ದೂರಿನ ಮೇರೆಗೆ ಹುಲ್ಲಹಳ್ಳಿ ಠಾಣೆ ಪೊಲೀಸರು ಐಐಎಫ್‌ಎಲ್ ಸಮಸ್ತ ಮತ್ತು ಫೈವ್‌ಸ್ಟಾರ್ ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಕೃಷ್ಣಮೂರ್ತಿ: ಮಲ್ಕುಂಡಿ ಗ್ರಾಮದ ಕೃಷ್ಣಮೂರ್ತಿ ಸೆಂಟ್ರಿಂಗ್ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಇವರು ಮನೆ ಕಟ್ಟಿಸುವ ಸಲುವಾಗಿ ಪತ್ನಿ ಲತಾ ಹೆಸರಿನಲ್ಲಿ ಧರ್ಮಸ್ಥಳ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಬಿಎಸ್‌ಎಸ್ ಸಂಘ, ಗ್ರಾಮೀಣ ಒಕ್ಕೂಟ, ಐಡಿಎಫ್‌ಸಿ ಸಂಘ ಮತ್ತು ಉಜ್ಜೀವನ್ ಸಂಘಗಳಿಂದ ಲಕ್ಷಾಂತರ ರೂ. ಸಾಲ ಪಡೆದಿದ್ದು, ಸಾಲದ ಕಂತು ಕಟ್ಟಲು ಪರದಾಡುತ್ತಿದ್ದ ಇವರು, ಅದಕ್ಕಾಗಿ ಪತ್ನಿಯ ಚಿನ್ನಾಭರಣ ಮತ್ತು ಬೈಕ್ ಅನ್ನು ಅಡಮಾನ ಇಟ್ಟಿದ್ದರು. ಕಳೆದ ಬಾರಿ ಕಂತು ಕಟ್ಟುವುದು ತಡವಾದಾಗ ಮನೆಗೆ ಬಂದಿದ್ದ ಮೈಕ್ರೋ ಫೈನಾನ್ಸ್ ಏಜೆಂಟರು, ಮುಂದಿನ ಬಾರಿ ಸಮಯಕ್ಕೆ ಸರಿಯಾಗಿ ಕಂತು ಕಟ್ಟದಿದ್ದರೆ ಮನೆ ಜಪ್ತಿ ಮಾಡುವುದಾಗಿ ಎಚ್ಚರಿಕೆ ನೀಡಿದ್ದರಂತೆ. ಇಂದು (ಸೋಮವಾರ) ಮೈಕ್ರೋ ಫೈನಾನ್ಸ್‌ವೊಂದಕ್ಕೆ ಸಾಲದ ಕಂತು ಕಟ್ಟಬೇಕಾಗಿತ್ತು. ಅದಕ್ಕಾಗಿ ಅವರು ಪರಿಚಯಸ್ಥರ ಬಳಿ ಸಾಲ ಕೇಳಿದ್ದು, ಎಲ್ಲೂ ಹಣ ದೊರೆಯದ ಕಾರಣ ಮನೆಗೆ ಹಿಂದಿರುಗಿ ಮನೆಯ ಕೊಠಡಿಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಈ ಸಂಬಂಧ ಕೃಷ್ಣಮೂರ್ತಿ ಪತ್ನಿ ಲತಾ ನೀಡಿದ ದೂರಿನನ್ವಯ ಹುಲ್ಲಹಳ್ಳಿ ಠಾಣೆ ಪೊಲೀಸರು ಧರ್ಮಸ್ಥಳ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಬಿಎಸ್‌ಎಸ್ ಸಂಘ, ಗ್ರಾಮೀಣ ಒಕ್ಕೂಟ, ಐಡಿಎಫ್‌ಸಿ ಸಂಘ ಮತ್ತು ಉಜ್ಜೀವನ್ ಸಂಘ ಸೇರಿದಂತೆ 5 ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಪ್ರತಿಭಟನೆ: ಈ ವಿಷಯ ತಿಳಿಯುತ್ತಿದ್ದಂತೆಯೇ ರೈತ ಸಂಘ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ಸದಸ್ಯರು ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿ, ಮೃತರ ಕುಟುಂಬಕ್ಕೆ ತಲಾ 50 ಲಕ್ಷ ರೂ. ಪರಿಹಾರ ನೀಡಬೇಕು. ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಸರ್ಕಾರ ಸುಗ್ರೀವಾಜ್ಞೆ ತರುತ್ತಿದೆ

ರೂಪದಲ್ಲಿ ಟಿಡಿಆರ್ ಕೊಡುವುದರಿಂದ ಸರ್ಕಾರದ ಖಜಾನೆ ಯಿಂದ ಒಂದು ಪೈಸೆ ಕೂಡ ವೆಚ್ಚವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಬೆಂಗಳೂರು ಅರಮನೆ ವ್ಯಾಜ್ಯದಲ್ಲಿ ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ಇಲ್ಲ ಎಂದು ಸಚಿವರು ಅರ್ಧಸತ್ಯ ಮಾತ್ರ ಹೇಳಿದ್ದಾರೆ. ಅವರು ಹೇಳಿದಂತೆ ತಡೆ ಯಾಜ್ಞೆ ಇಲ್ಲ ನಿಜ.

ಆದರೆ.... ಯಥಾ ಸ್ಥಿತಿ ಮುಂದುವರೆಯುವಂತೆ ಸುಪ್ರೀಂಕೋರ್ಟ್‌ನ ಆದೇಶವಿದೆ ಎಂಬುದನ್ನು ತಿಳಿದುಕೊಳ್ಳಬೇಕು ಎಂದರು. ಬೆಂಗಳೂರು ಅರಮನೆಗೆ ಸೇರಿದಂತೆ ರಸ್ತೆ ಅಗಲೀಕರಣಕ್ಕೆ ಪರಿಹಾರವಾಗಿ ದೊಡ್ಡ ಮೊತ್ತದ ಹಣ ಕೊಡಬೇಕಾಗುತ್ತದೆ ಎಂದು ಅವರು ಹೇಳುತ್ತಿದ್ದಾರೆ. ಆದರೆ, ರಾಜ್ಯ ಸರ್ಕಾರದ ಉದ್ದೇಶಿತ ಸುರಂಗ ಮಾರ್ಗ ಯೋಜನೆಗೆ ಸುಮಾರು 8 ಸಾವಿರ ಕೋಟಿಗೂ ಹೆಚ್ಚು ತೆರಿಗೆದಾರರು ಪಾವತಿಸುವ ಹಣ ವೆಚ್ಚವಾಗುತ್ತದೆ. ಅದೇ ವೇಳೆ ರಸ್ತೆ ಅಗಲೀಕರಣಕ್ಕೆ 100 ರಿಂದ 150 ಕೋಟಿ ರೂ. ಮಾತ್ರ ವೆಚ್ಚವಾಗುತ್ತದೆ. ಇದು ಗೊತ್ತಿದ್ದರೂ ಅವರು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ತಮ್ಮದೇ ಸರ್ಕಾರವಿದೆ ಎಂಬ ಕಾರಣಕ್ಕಾಗಿ ಅಧಿಕಾರವನ್ನು ಬಳಸಿಕೊಂಡು ನಮಗೆ ಟಿಡಿಆರ್ ಕೊಡುವುದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನಾವು ಅದರ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ. ಸಾರ್ವಜನಿಕ ಹಿತದೃಷ್ಟಿ ಎಂದು ಹೇಳುತ್ತಾರೆ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಎಲ್ಲವನ್ನೂ ನಾವೇ ಬಿಟ್ಟುಕೊಡಬೇಕೇ ಎಂದು ಪ್ರಶ್ನಿಸಿದ ಅವರು, ಐಐಎಸ್‌ಸಿ ಜಾಗವು ಬೆಂಗಳೂರು ಅರಮನೆಯಿಂದ ನೀಡಲ್ಪಟ್ಟದ್ದು, ಸದಾಶಿವನಗರವು ಬೆಂಗಳೂರು ಅರಮನೆಯ ಕೊಡುಗೆಯೇ ಎಂದ ಅವರು, ಸಾಮಾಜಿಕವಾಗಿ ಬೆಂಗಳೂರು ಅರಮನೆಯಿಂದ ನೀಡಿರುವ ಕೊಡುಗೆಗಳಿಗೆ ಸಾಕಷ್ಟು ಸಾಕ್ಷ್ಯಗಳಿವೆ ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ. ಅದೇ ರೀತಿ ಸಾಮಾನ್ಯರಿಗೆ ಅನ್ವಯವಾಗುವ ಕಾನೂನೇ ನಮಗೂ ಅನ್ವಯವಾಗುತ್ತದೆ. ಭೂಸ್ವಾಧೀನ ಪ್ರಕ್ರಿಯೆಯಂತೆ ಸರ್ಕಾರ ನಡೆದುಕೊಳ್ಳಬೇಕಾಗಿದೆ. ನಾವು ಟಿಡಿಆರ್ ಬದಲು ನಗದನ್ನೇ ಕೊಡಿ ಎಂದು ಕೇಳಬಹುದಿತ್ತು. ಆದರೆ, ನಮ್ಮ ತಂದೆ, ಚಿಕ್ಕಮ್ಮ ಮತ್ತು ದೊಡ್ಡಮ್ಮನವರು ಸರ್ಕಾರದ ಖಜಾನೆಗೆ ಹೊರೆಯಾಗಬಾರದೆಂಬ ಕಾರಣಕ್ಕೆ ಟಿಡಿಆರ್ ಒಪ್ಪಿಕೊಂಡಿದ್ದು ಸಮಾಜ ಸೇವೆಯ ಒಂದು ಭಾಗ ಎಂದು ಅವರು ಹೇಳಿದರು.

ಮೈಸೂರು ಮಿತ್ರ ಮಂಗಳವಾರ 28 ಜನವರಿ 2025

ಮೈಸೂರು ನಗರಪಾಲಿಕೆ ನೂತನ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅಧಿಕಾರ ಸ್ವೀಕಾರ



ಮೈಸೂರು ನಗರಪಾಲಿಕೆ ನೂತನ ಆಯುಕ್ತರಾಗಿ ಶೇಖ್ ತನ್ವೀರ್ ಆಸಿಫ್ ಅವರು ಇಂದು ಪಾಲಿಕೆ ಕಚೇರಿಯಲ್ಲಿ ನಿರ್ಗಮಿತ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಿಂದ ಅಧಿಕಾರ ಸ್ವೀಕರಿಸಿದರು.

ಮೈಸೂರು, ಜ.27(ಆರ್‌ಕೆ)– ಮೈಸೂರು ಮಹಾನಗರಪಾಲಿಕೆ ನೂತನ ಆಯುಕ್ತರಾಗಿ ಶೇಖ್ ತನ್ವೀರ್ ಆಸಿಫ್ ಅವರು ಇಂದು ಪಾಲಿಕೆ ಕಚೇರಿಯಲ್ಲಿ ನಿರ್ಗಮಿತ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಿಂದ ಅಧಿಕಾರ ಸ್ವೀಕರಿಸಿದರು.

ದಾಖಲೆಗಳಿಗೆ ಇಬ್ಬರು ಅಧಿಕಾರಿಗಳು ಸಹಿ ಮಾಡುವ ಮೂಲಕ ನೂತನ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಅಧಿಕಾರ ವಹಿಸಿಕೊಂಡರು. ಕರ್ನಾಟಕ ಕೇಡರ್ 2017ನೇ ತಂಡದ ಐಎಎಸ್ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಅವರಿಗೆ ಪಾಲಿಕೆ ಉಪಆಯುಕ್ತರು, ಹೆಚ್ಚುವರಿ ಆಯುಕ್ತರು, ಕಂದಾಯ ಉಪ ಆಯುಕ್ತರು, ಸೂಪರಿಂಟೆಂಡೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ಕೌನ್ಸಿಲ್ ಕಾರ್ಯದರ್ಶಿ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಪುಷ್ಪಗುಚ್ಛ ನೀಡಿ, ಶುಭ ಕೋರಿದರು.

ಈ ಸಂದರ್ಭ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನೂತನ ಆಯುಕ್ತ ಶೇಖ್ ತನ್ವೀರ್ ಆಸಿಫ್, ಸಾಂಸ್ಕೃತಿಕ ನಗರಿ ಮೈಸೂರಿನಂತಹ ಮಹಾನಗರ ಪಾಲಿಕೆಯಲ್ಲಿ ಆಯುಕ್ತರಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿರುವುದು ಸಂತಸ ತಂದಿದೆ. ಇಲ್ಲಿನ ಜನ, ಭಾಷೆ, ಸಂಸ್ಕೃತಿ, ಆಚರಣೆಗಳು ಹಾಗೂ ಅಭಿರುಚಿಗೆ ಪೂರಕವಾಗಿ ಕೆಲಸ ಮಾಡಿ ನಾಗರಿಕರ ಮೂಲ ಸೌಕರ್ಯ ನಿರ್ವಹಣೆಗೆ ತಾವು ಒತ್ತು ನೀಡುವುದಾಗಿ ತಿಳಿಸಿದರು. ಅಧಿಕಾರಿಗಳು, ಸಿಬ್ಬಂದಿ, ಜನಪ್ರತಿನಿಧಿಗಳು, ಮಾಧ್ಯಮ ಪ್ರತಿನಿಧಿಗಳು, ಸಂಘ–ಸಂಸ್ಥೆಗಳು, ಕೈಗಾರಿಕೋದ್ಯಮಿಗಳು ಸೇರಿದಂತೆ ಎಲ್ಲರ ವಿಶ್ವಾಸದೊಂದಿಗೆ ಮೈಸೂರು ನಗರದ ಸ್ವಚ್ಛತೆ, ರಸ್ತೆ, ಒಳಚರಂಡಿ, ಬೀದಿದೀಪ, ಉದ್ಯಾನವನಗಳ ನಿರ್ವಹಣೆಗೆ ಹೆಚ್ಚು ಗಮನಹರಿಸುವುದಾಗಿಯೂ ನುಡಿದರು.

ಆರಂಭದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಭೆ ನಡೆಸಿ, ಎಲ್ಲಾ ಒಂಭತ್ತು ವಲಯ ಕಚೇರಿಗಳನ್ನು ಪರಿಚಯ ಮಾಡಿಕೊಂಡು ಸಾರ್ವಜನಿಕರ ಅರ್ಜಿಗಳನ್ನು ಆದ್ಯತೆ ಮೇಲೆ ವಿಲೇವಾರಿ ಮಾಡುವುದು, ಸ್ಥಳೀಯವಾಗಿ ಸಂಪನ್ಮೂಲ ಕ್ರೋಢೀಕರಿಸಿ, ಅಭಿವೃದ್ಧಿ ಕಾರ್ಯಗಳಿಗೆ ಅವಕಾಶ ಮಾಡಿಕೊಡುವ ಬಗ್ಗೆ ಕ್ರಮ ವಹಿಸುತ್ತೇನೆ. ಸಾರ್ವಜನಿಕರು, ಜನಪ್ರತಿನಿಧಿಗಳ ಸಹಕಾರದಿಂದ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಣೆ ನಮ್ಮ ಜವಾಬ್ದಾರಿಯಾಗಿದೆ ಎಂದು ಆಸಿಫ್ ತಿಳಿಸಿದರು.

ಮೈಕ್ರೋ ಫೈನಾನ್ಸ್ ಹಾವಳಿ ಖಂಡಿಸಿ ರೈತರ ಪ್ರತಿಭಟನೆ



ಮೈಕ್ರೋ ಫೈನಾನ್ಸ್ ಹಾವಳಿ ಖಂಡಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದ ವತಿಯಿಂದ ಮೈಸೂರಿನ ಡಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜ.27(ಜಿಎ)–ಮೈಕ್ರೋ ಫೈನಾನ್ಸ್ ಹಾವಳಿ ಖಂಡಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದ ವತಿಯಿಂದ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಮೈಕ್ರೋ ಫೈನಾನ್ಸ್ ಹಾವಳಿಯಿಂದ ರೈತರು, ಮಹಿಳೆಯರು, ಯುವಕರು ಆತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾರೆ. ಮಾನಹಾನಿಕಾರಕ ಶಬ್ದಗಳನ್ನು ಬಳಕೆ ಮಾಡಿ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುವುದು ಹಾಗೂ ಇಂಥ ಪ್ರಕರಣ ಬೆಳಕಿಗೆ ಬಂದಾಗ ಪ್ರಕರಣ ದಾಖಲಿಸಲು ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವಸೂಲಾತಿಗೆ ಬರುವ ಫೈನಾನ್ಸ್ ಏಜೆಂಟ್‌ಗಳು ಪೊಲೀಸ್ ಠಾಣೆಯಿಂದ ಯಾವುದೇ ಪರವಾನಗಿ ಪಡೆದಿರುವುದಿಲ್ಲ. ಇಂತಹ ವಸೂಲುದಾರರ ನೋಂದಣಿಯು ಮತ್ತು ಹಿನ್ನೆಲೆ ಯಾವುದೇ ಠಾಣೆಯಲ್ಲಿ ಗುರುತಿನ ಚೀಟಿ ಸಹ ಇರುವುದಿಲ್ಲ ಇವರು ಮನ ಬಂದಂತೆ ವಸೂಲಾತಿಗೆ ಇಳಿಯುತ್ತಾರೆ ಎಂದು ಕಿಡಿಕಾರಿದರು.

ಸರ್ಕಾರ ಹೇಳಿಕೆ ನೀಡಿರುವುದು ಕೇವಲ ಪ್ರಕಟಣೆಯಾಗಿ ಮಾತ್ರ ಉಳಿದಿದೆ. ಕಾರಣ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಎರಡು ಆತ್ಮಹತ್ಯೆಯ ಪ್ರಕರಣಗಳು ಈಗಾಗಲೇ ದಾಖಲಾಗಿವೆ. ಆದ್ದರಿಂದ ಲೋಕಸಭಾ ಸದಸ್ಯರು, ಮಂತ್ರಿಗಳು ಮೊದಲು ಕೇಂದ್ರ ಸರ್ಕಾರದ ಹಣಕಾಸು ಸಚಿವರ ಜೊತೆ ಚರ್ಚೆ ಮಾಡಿ ಮೈಕ್ರೋ ಫೈನಾನ್ಸ್‌ಗಳ ಮಿತಿ ಮೀರಿದ ವರ್ತನೆಗೆ ಕಡಿವಾಣ ಆಗಬೇಕು ಹಾಗೂ ವಸೂಲಾತಿಗೆ ಸ್ಪಷ್ಟ ನಿಖರ ನಿಯಮಗಳನ್ನು ಆದೇಶ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಖಜಾಂಚಿ ಕೆರೆಹುಂಡಿ ರಾಜಣ್ಣ, ರಾಜ್ಯ ಸಂಘಟನಾ ಕಾರ್ಯದರ್ಶಿ ಹತ್ತಳ್ಳಿ ಸ್ವಾಮಿ, ಕನ್ನಡ ಹೋರಾಟಗಾರ ಬಿ.ಎ. ಶಿವಶಂಕರ್, ಜಿಲ್ಲಾಧ್ಯಕ್ಷ ಹಾಡ್ಯರವಿ, ಎಂ.ವಿ.ಕೃಷ್ಣಪ್ಪ, ನಂಜನಗೂಡು ತಾಲೂಕು ಅಧ್ಯಕ್ಷ ಅಂಬಳೆ ಮಹದೇವಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಸುನಹಳ್ಳಿ ಮಂಜೇಶ್, ಜಿಲ್ಲಾ ಉಪಾಧ್ಯಕ್ಷ ಮುದ್ದಳ್ಳಿ ಚಿಕ್ಕ ಸ್ವಾಮಿ, ಸೇನಾಪತಿ, ಶಾಂತರಾಜು ಮತ್ತಿತರರು ಪಾಲ್ಗೊಂಡಿದ್ದರು.

> "ಒಬ್ಬ ವ್ಯಕ್ತಿಗೆ ನಾಲ್ಕೈದು ಕಂಪೆನಿಗಳಿಂದ ಸಾಲ ನೀಡುವುದು ನಿಲ್ಲಬೇಕು. ತಕ್ಷಣ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸುಗ್ರೀವಾಜ್ಞೆಯ ಮೂಲಕ ಕಠಿಣ ನಿಯಮಗಳನ್ನು ಜಾರಿಗೆ ತಂದು ಅಕ್ರಮ ಹಾಗೂ ಮಿತಿ ಮೀರಿದ ವರ್ತನೆ ಮಾಡಿದಂತಹ ಮೈಕ್ರೋ ಫೈನಾನ್ಸ್ ಕಂಪನಿಗಳನ್ನು ರಾಜ್ಯದಿಂದ ಗಡಿಪಾರು ಮಾಡುವ ನಿಯಮವನ್ನು ರೂಪಿಸಬೇಕು. ಇಲ್ಲವಾದರೆ ರೈತ ಸಂಘಟನೆಗಳು ಜಾಗೃತರಾಗಿ ಮೈಕ್ರೋ ಫೈನಾನ್ಸ್ ಕಂಪನಿಗಳನ್ನು ಧ್ವಂಸ ಮಾಡುವ ಹಾಗೂ ಬೀಗ ಜಡಿಯುವ ಚಳುವಳಿಯನ್ನು ಹಮ್ಮಿಕೊಳ್ಳಬೇಕಾಗುತ್ತದೆ. –ಪ್ರತಿಭಟನಾಕಾರರು

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ

ವಿಪಕ್ಷ ನಾಯಕ ಆರ್.ಅಶೋಕ್ ಆರೋಪ



ಮೈಸೂರು, ಜ.27(ಆರ್‌ಕೆ)– ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದ್ದು, ಆರ್ಥಿಕವಾಗಿಯೂ ಸರ್ಕಾರ ದಿವಾಳಿಯಾಗಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್‌ಗಳ ಕಿರುಕುಳದಿಂದಾಗಿ ಬಡವರು, ಮಧ್ಯಮ ವರ್ಗದವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ನೀಡುತ್ತಿಲ್ಲವಾದ್ದರಿಂದ ಜನ ಮೈಕ್ರೋ ಫೈನಾನ್ಸ್‌ನಲ್ಲಿ ಸಾಲ ಪಡೆಯುತ್ತಿದ್ದಾರೆ. ಸಿದ್ದರಾಮಯ್ಯ ಬಂದ ನಂತರ ಗೂಂಡಾಗಳಿಗೆ ಕೆಲಸ ಸಿಕ್ಕಂತಾಗಿದೆ. ಅವರು ತಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದಾರೆ. ಆದ ಕಾರಣ ಮುಖ್ಯಮಂತ್ರಿಗಳು 6ನೇ ಗ್ಯಾರಂಟಿಯಾಗಿ 'ಗೂಂಡಾ ಭಾಗ್ಯ' ನೀಡಿದ್ದಾರೆ ಎಂದು ಲೇವಡಿ ಮಾಡಿದರು.

ಶ್ರೀರಾಮುಲು–ರೆಡ್ಡಿ ಸಣ್ಣ ಗೊಂದಲ: ಬಿಜೆಪಿಯಲ್ಲಿನ ಬಣ ಬಡಿದಾಟದ ಸಂಬಂಧ ಪ್ರತಿಕ್ರಿಯಿಸಿದ ಅಶೋಕ್, ಶ್ರೀರಾಮುಲು ಮತ್ತು ಜನಾರ್ಧನ ರೆಡ್ಡಿ ಅವರೊಂದಿಗೆ ಮಾತನಾಡಿದ್ದೇನೆ ಅವರಿಬ್ಬರೂ ಒಳ್ಳೆಯ ಸ್ನೇಹಿತರು. ಸಣ್ಣಪುಟ್ಟ ಗೊಂದಲದಿಂದ ವೈಮನಸ್ಸು ಉಂಟಾಗಿದೆ. ಇಷ್ಟರಲ್ಲೇ ಈ ವಿವಾದಕ್ಕೆ ತೆರೆ ಬೀಳಲಿದೆ ಎಂದರು.

ಮುಡಾ ಹಗರಣ ಸಂಬಂಧ ತಾವು ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದ್ದೆವು. ಲೋಕಾಯುಕ್ತದಿಂದ ಸರ್ಕಾರದ ವಿರುದ್ಧ ತನಿಖೆ ಮಾಡುವುದು ಸೂಕ್ತವಲ್ಲ. ಯಾವುದೇ ಸರ್ಕಾರವಿದ್ದರೂ ಲೋಕಾಯುಕ್ತ ಅವರ ಪರವಾಗಿಯೇ ವರದಿ ನೀಡುತ್ತಾರೆ ಎಂದೂ ಅವರು ತಿಳಿಸಿದರು.

ಇಡಿಗೆ ಸಾಧ್ಯವಾಗಿದ್ದು ಲೋಕಾಯುಕ್ತರಿಗೆ ಸಾಧ್ಯವಾಗದು: ಎಲ್ಲಿಂದಲೋ ಬಂದು ಜಾರಿ ನಿರ್ದೇಶನಾಲಯ (ಇಡಿ)ದ ಅಧಿಕಾರಿಗಳು ಮೈಸೂರಿನಲ್ಲಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಇಲ್ಲೇ ಇರುವಂತಹ ಲೋಕಾಯುಕ್ತ ಪೊಲೀಸರು ಏಕೆ ಕ್ರಮ ವಹಿಸುತ್ತಿಲ್ಲ. ಇದು ಕೇವಲ 14 ನಿವೇಶನಗಳ ವಿಚಾರ ಮಾತ್ರವಲ್ಲ. ಸಾವಿರಾರು ನಿವೇಶನಗಳ ಹಗರಣ ನಡೆದಿರುವಾಗ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದ ಅಶೋಕ್, ನಮ್ಮ ಮುಡಾ ಹೋರಾಟ ಇನ್ನು ಮುಂದುವರಿಯಲಿದೆ ಎಂದರು.

ಸಿದ್ದರಾಮಯ್ಯರದ್ದು ಅರಮನೆ ಟಾರ್ಗೆಟ್: ಸಿದ್ದರಾಮಯ್ಯ ಅಧಿಕಾರಕ್ಕೆ ಬಂದಾಗಿನಿಂದ ಮೈಸೂರು ಅರಮನೆ ಆಸ್ತಿ ಮೇಲೆ ಕಣ್ಣು ಹಾಕುತ್ತಾರೆ. ಸರ್ಕಾರದ ಸ್ವಾಧೀನಕ್ಕೆ ಆಸ್ತಿ ಪಡೆಯಲು ಯತ್ನಿಸುತ್ತಾರೆ. ಬೇರೆ ರಾಜ್ಯಗಳಲ್ಲಿ ರಾಜವಂಸ್ಥರ ಗಮನಿಸಬೇಕು. ಮೈಸೂರು ಅರಸರು ಸಾರ್ವಜನಿಕರಿಗೆ ಹಾಗೂ ಸರ್ಕಾರಕ್ಕೆ ಆಸ್ತಿ ಮಾಡಿಟ್ಟು ಹೋಗಿದ್ದಾರೆ. ಹಲವು ಖಾಯಂ ಅಭಿವೃದ್ಧಿ ಕೆಲಸವೂ ಆಗಿದೆ. ಮೈಸೂರಿನ ರಾಜವಂಶಸ್ಥರಿಗೆ ತೊಂದರೆ ಕೊಟ್ಟರೆ, ಒಳ್ಳೆಯದಾಗುವುದಿಲ್ಲ. ಇದು ಖಡಾಖಂಡಿತವಾಗಿ ಟಾರ್ಗೆಟ್ ರಾಜಕಾರಣವಾಗಿದೆ ಎಂದು ಅಶೋಕ್ ಆರೋಪಿಸಿದರು.

ಸಮಾಜ ಸೇವಕ ಶ್ರೀಕಾಂತ್‌ಗೆ ಸನ್ಮಾನ...



ಮೈಸೂರು ನಗರ ಅಶೋಕಪುರಂ ಫ್ರೆಂಡ್ಸ್ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ಸಂವಿಧಾನ ಕಪ್ ಟೆನ್ನಿಸ್‌ಬಾಲ್ ಕ್ರಿಕೆಟ್ ಟೂರ್ನಿಗೆ ಸಮಾಜ ಸೇವಕರಾದ ಎಸ್.ಶ್ರೀಕಾಂತ್ ಅವರು ಚಾಲನೆ ನೀಡಿದರು. ತೃತೀಯ ಬಹುಮಾನದ ಹತ್ತು ಸಾವಿರ ನಗದು, ಟ್ರೋಫಿಯನ್ನು ಕ್ರಿಕೆಟ್ ಟೂರ್ನಿ ಮುಖ್ಯಸ್ಥರಿಗೆ ನೀಡಿದರು. ಈ ವೇಳೆ ಅಶೋಕಪುರಂ ಫ್ರೆಂಡ್ಸ್ ತಂಡದ ಸದಸ್ಯರು ಶ್ರೀಕಾಂತ್ ಅವರನ್ನು ಸನ್ಮಾನಿಸಿದರು. ಪ್ರವೀಣ್, ಸ್ವಾಗತ್, ರಾಜು, ಜಯಂತ್ ಉಪಸ್ಥಿತರಿದ್ದರು.

ಇಂದು 'ಕ್ಷಯ ಮುಕ್ತ ಗ್ರಾಮ ಪಂಚಾಯತ್' ಅರಿವು ಕಾರ್ಯಕ್ರಮ

ಮೈಸೂರು,ಜ.27– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ಎನ್.ಟಿ.ಇ.ಪಿ ವತಿಯಿಂದ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿ 'ಕ್ಷಯ ಮುಕ್ತ ಗ್ರಾಮ ಪಂಚಾಯತ್' ಅರಿವು ಕಾರ್ಯಕ್ರಮವನ್ನು ಜ.28 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್‌ನ ಶ್ರೀ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಶಾಲೆ ಮುಚ್ಚುವುದನ್ನು ಖಂಡಿಸಿ ಎಐಡಿಎಸ್‌ಓ ಪ್ರತಿಭಟನೆ



ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ಖಂಡಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜ.27(ಜಿಎ)–ಸಂಯೋಜನೆ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ 4,200ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದನ್ನು ಖಂಡಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ವತಿಯಿಂದ ನಗರದ ರಾಮಸ್ವಾಮಿ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಇತ್ತೀಚೆಗಷ್ಟೆ ರಾಜ್ಯ ಸರ್ಕಾರ ಹಬ್ ಅಂಡ್ ಸ್ಪೋಕ್ ಅಡಿಯಲ್ಲಿ ಕಡಿಮೆ ಹಾಜರಾತಿ ಇರುವ ಸರ್ಕಾರಿ ಶಾಲೆಗಳನ್ನು ಇತರ ಶಾಲೆಗಳೊಂದಿಗೆ ಸಂಯೋಜಿಸುವ ನಿರ್ಧಾರವನ್ನು ಪ್ರಕಟಿಸಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಸುಧಾರಣಾ ಸಮಿತಿಯನ್ನು ಸಹ ರಚಿಸಲಾಗಿದೆ. ರಾಜ್ಯದಲ್ಲಿ 4 ಸಾವಿರಕ್ಕೂ ಅಧಿಕ ಶಾಲೆಗಳು 10 ಮಕ್ಕಳಿಗಿಂತ ಕಡಿಮೆ ದಾಖಲಾತಿಯನ್ನು ಹೊಂದಿವೆ. ಈ ಶಾಲೆಗಳ ಭವಿಷ್ಯದ ಕುರಿತು ಪೋಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಆತಂಕ ತಲೆದೋರಿದೆ. ಸರ್ಕಾರವು ರಾಜ್ಯದ ಬಡ ಜನರ ಮಕ್ಕಳ ಶಿಕ್ಷಣದ ಆಶಾಕಿರಣವಾಗಿರುವ ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ 6000ಕ್ಕೂ ಹೆಚ್ಚು ಏಕೋಪಾಧ್ಯಾಯ ಶಾಲೆಗಳಿವೆ. 50 ಸಾವಿರಕ್ಕೂ ಹೆಚ್ಚು ಶಿಕ್ಷಕರನ್ನು ನೇಮಕ ಮಾಡಿಕೊಂಡಿಲ್ಲ. ಶಾಲೆಗಳಲ್ಲಿ ಕನಿಷ್ಠ ಮೂಲ ಸೌಕರ್ಯ ಒದಗಿಸುವ ಕ್ರಮಗಳನ್ನು ಕೈಗೊಳ್ಳದೆ, ಹಾಜರಾತಿ ಕಡಿಮೆಯಿರುವ ಶಾಲೆಗಳನ್ನು ಮುಚ್ಚುವುದು, ನೆಗಡಿ ಬಂದರೆ ಮೂಗು ಕತ್ತರಿಸಿದಂತೆ. ಸರ್ಕಾರ ತನ್ನ ಈ ಅವೈಜ್ಞಾನಿಕ ಮತ್ತು ಅಪ್ರಜಾತಾಂತ್ರಿಕ ಜನವಿರೋಧಿ ನಿರ್ಧಾರ ಕೈಬಿಡಬೇಕು ಎಂದು ಒತ್ತಾಯಿಸಿದರು. "ಆದ್ಯತೆಯ ಮೇರೆಗೆ ಸರ್ಕಾರ ಶಿಕ್ಷಣಕ್ಕೆ ಬಜೆಟ್‌ನಲ್ಲಿ ಅನುದಾನ ನಿಗದಿಪಡಿಸಬೇಕು. ಸರ್ಕಾರಿ ಶಾಲೆಗಳನ್ನು ಸಂಯೋಜನೆಗೊಳಿಸುವ ಬದಲು, ಹಾಜರಾತಿ ಕಡಿಮೆಯಿರುವ ಶಾಲೆಗಳನ್ನು ಅವಶ್ಯಕ ಸೌಲಭ್ಯ ನೀಡಿ ರಕ್ಷಿಸಬೇಕು ಎಂದು ಆಗ್ರಹಿಸಿದರು.

ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ರಾಜ್ಯ ಖಜಾಂಚಿ ಸುಭಾಷ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಲ್ಯಾಣ್, ಜಿಲ್ಲಾಧ್ಯಕ್ಷೆ ಚಂದ್ರಕಲಾ, ಕಾರ್ಯದರ್ಶಿ ನಿತಿನ್, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಹೇಮಾ, ಚಂದನಾ, ಅಂಜಲಿ, ಅಭಿಷೇಕ, ದಿಶಾ, ನಂದೀಶ್ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜ.31ಕ್ಕೆ 'ಕಾಡುಮಳೆ' ಚಿತ್ರ ಬಿಡುಗಡೆ

ಮೈಸೂರು, ಜ.27(ಜಿಎ)– ಪ್ರಕೃತಿಯಲ್ಲಿನ ಅನೇಕ ನಿಗೂಢಗಳಿಗೆ ಇನ್ನೂ ಉತ್ತರ ಕಂಡುಕೊಳ್ಳಲಾಗಿಲ್ಲ ಎಂಬ ಎಳೆಯ ಕತೆಯನ್ನು ಆಧರಿಸಿ, ಸಂಪೂರ್ಣ ಕಾಡಿನಲ್ಲಿಯೇ ನಿರ್ಮಾಣಗೊಂಡ 'ಕಾಡುಮಳೆ' ಚಲನಚಿತ್ರ ಜ.31ರಂದು ರಾಜ್ಯಾದ್ಯಂತ ತೆರೆಕಾಣಲಿದೆ ಎಂದು ನಾಯಕ ನಟ ಅರ್ಥ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೊಂದು ವಿಭಿನ್ನ ಕಥೆಯ ಚಿತ್ರವಾಗಿದೆ. ಸಮಯವೇ ಇಲ್ಲದಿರುವ ಜಾಗ ಹೇಗಿರುತ್ತದೆ ಎಂಬಿವೇ ಮೊದಲಾದ ಹೊಸ ವಿಷಯವನ್ನು ಆಧರಿಸಿದೆ. ಸಂಪೂರ್ಣ ಕಾಡಿನಲ್ಲಿಯೇ ಚಿತ್ರೀಕರಣಗೊಂಡಿರುವ ವೇಳೆಯೇ ವಿಶಿಷ್ಟ ರೀತಿಯ ಧ್ವನಿ ಹಾಗೂ ಬೆಳಕನ್ನು ಬಳಸಿಕೊಳ್ಳಲಾಗಿದೆ. ಈ ಚಿತ್ರ ಸುಮಾರು 4 ವರ್ಷಗಳ ಪ್ರಯತ್ನದ ಫಲವಾಗಿದೆ. ಹೀಗಾಗಿ ವಿಭಿನ್ನ ಚಿತ್ರ ನೋಡಬಯಸುವವರು ಚಿತ್ರ ಮಂದಿರಗಳಲ್ಲಿ ವೀಕ್ಷಿಸಿದಲ್ಲಿ ಧ್ವನಿ, ಬೆಳಕಿನ ವಿಶಿಷ್ಟ ಅನುಭವ ನೀಡಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕರಾದ ಶ್ರೀನಿಧಿ, ರಘು, ಡಾ.ಎಚ್.ಸಿ.ಸಣ್ಣಸ್ವಾಮಿಗೌಡ, ರಮೇಶ್ ಉಪಸ್ಥಿತರಿದ್ದರು.

ಸುದರ್ಶನ ವಿದ್ಯಾ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿಯಲ್ಲಿರುವ ಸುದರ್ಶನ ವಿದ್ಯಾಸಂಸ್ಥೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಎನ್.ಶ್ರೀನಿವಾಸನ್, ರಘುಲಾಲ್ ಅಂಡ್ ಕಂಪನಿಯ ಮುಖ್ಯಸ್ಥರಾದ ಎನ್.ರಾಘವನ್, ಎಂ.ಹೆಚ್.ಪ್ರಕಾಶ್ ಸೇರಿದಂತೆ ಸಂಸ್ಥೆಯ ಮುಖ್ಯೋಪಾಧ್ಯಾಯರು,ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಯಾವ ಸೂಪರ್ ಮಾರ್ಕೆಟ್‌ನಲ್ಲೂ ಕೈ–ಕಾಲು ಸಿಗಲ್ಲ ಜೋಕೆ!

ಸಂಚಾರ ನಿಯಮ ಪಾಲಿಸಿ; ಪೊಲೀಸರೊಂದಿಗೆ ಸಹಕರಿಸಿ



ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಆವರಣದಲ್ಲಿ ಮೈ ಭಾರತ್ ನೆಹರು ಯುವ ಕೇಂದ್ರ, ನಗರ ಸಂಚಾರ ಪೊಲೀಸ್, ಸೆಂಟ್ ಫಿಲೋಮಿನಾ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ 2025ರ ಕಾರ್ಯಕ್ರಮವನ್ನು ನರಸಿಂಹರಾಜ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಎಂ.ಎಲ್.ಸಿದ್ದೇಶ್ ಉದ್ಘಾಟಿಸಿದರು.

ಮೈಸೂರು, ಜ. 27– ವಿದ್ಯಾರ್ಥಿಗಳು ಸಂಚಾರ ನಿಯಮವನ್ನು ಪಾಲಿಸುವ ಮೂಲಕ ಸಂಚಾರ ನಿಯಮಗಳ ಉಲ್ಲಂಘನೆ ಮಾಡದೆ ಪೊಲೀಸರೊಂದಿಗೆ ಸಹಕರಿಸಬೇಕು ಎಂದು ನರಸಿಂಹರಾಜ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಎಂ.ಎಲ್.ಸಿದ್ದೇಶ್ ಹೇಳಿದರು.

ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಆವರಣದಲ್ಲಿ ಮೈ ಭಾರತ್ ನೆಹರು ಯುವ ಕೇಂದ್ರ, ನಗರ ಸಂಚಾರ ಪೊಲೀಸ್, ಸೆಂಟ್ ಫಿಲೋಮಿನಾ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ 2025ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನ ಬಹುರಾಷ್ಟ್ರೀಯ ಕಂಪನಿಗಳ ಎಲ್ಲ ವಸ್ತುಗಳು ಕೂಡ ಸಿಗುತ್ತವೆ. ಆದರೆ, ಮನುಷ್ಯನ ಕೈ–ಕಾಲು ಮಾತ್ರ ಮಾರಾಟದಲ್ಲಿ ಸಿಗುವುದಿಲ್ಲ. ಹೀಗಾಗಿ, ನಮಗೆ ನಾವೇ ರಕ್ಷಣೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಅಪರಾಧ ಆಗುವುದಕ್ಕಿಂತ ಮುಂಚಿತವಾಗಿ ಎಲ್ಲರಿಗೂ ಜಾಗೃತಿ ಮೂಡಿಸುವಂತಹ ಕೆಲಸವನ್ನು ನಮ್ಮ ಇಲಾಖೆಯಿಂದ ಮಾಡುತ್ತ ಇರುತ್ತೇವೆ. ಬೈಕ್ ಸವಾರರು ಪೊಲೀಸರು ಬೈಕ್ ಹಿಡಿಯುತ್ತಾರೆಂದು ಹೆಲ್ಮೆಟ್ ಬಳಸುವುದಲ್ಲ. ತಮ್ಮ ರಕ್ಷಣೆಗಾಗಿ ಕಡ್ಡಾಯವಾಗಿ ಬಳಸಬೇಕು. 18 ವರ್ಷಕ್ಕಿಂತ ಕಡಿಮೆ ಇದ್ದವರು ವಾಹನ ಚಲಾಯಿಸಲು ಕಾನೂನಿನಲ್ಲಿ ಅವಕಾಶ ಇಲ್ಲ. ಅದರಂತೆ ಕಾನೂನಿನ ಪಾಲನೆ ಮಾಡಬೇಕು ಎಂದು ಮಕ್ಕಳಿಗೆ ಸಲಹೆ ನೀಡಿದರು. ವಯಸ್ಕರಲ್ಲದ ಮಕ್ಕಳು ರಸ್ತೆಯ ಮೇಲೆ ವಾಹನ ಓಡಾಡಿಸುತ್ತಿರುವುದು ಕಂಡು ಬರುತ್ತದೆ. ಇದಕ್ಕೆ ಕಡಿವಾಣ ಹಾಕುವುದು ನಿಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ವಿದ್ಯಾರ್ಥಿಗಳು ವ್ಹೀಲಿಂಗ್ ಅನ್ನು ಮಾಡಬೇಡಿ, ಮಾಡಿ ಸೋಶಿಯಲ್ ಮೀಡಿಯಾಗೆ ಅದನ್ನು ಅಪ್ಲೋಡ್ ಮಾಡಿದರೆ ಅದು ನಮಗೆ ಸಾಕ್ಷಿ, ನಿಮಗೆ ಲೈಕ್–ಕಾಮೆಂಟ್ ಬರುವುದು ಇಲ್ಲವೋ ಗೊತ್ತಿಲ್ಲ. ಆದರೆ, ಇನ್ಶೂರೆನ್ಸ್ ಅನ್ನು ಮೊದಲ ಪಾರ್ಟಿಯ ಹೆಸರಿನಲ್ಲಿ ಮಾಡಿ ಈಗ ಐಟಿಎಂ ಎಸ್ ಕ್ಯಾಮೆರಾ ಸಿಸಿ ಕ್ಯಾಮೆರಾಗಳು ರೆಕಾರ್ಡ್ ಆಗುತ್ತವೆ. ನಿಮಗೂ ನಮಗೂ ಸಹ ದಂಡ ಬೀಳುತ್ತದೆ. ಆಟೋಮ್ಯಾಟಿಕ್ ಫೋಟೋ ತೆಗೆದು ನಿಮ್ಮ ಮನೆಗೆ ಕಳುಹಿಸುತ್ತದೆ. ವಿಥೌಟ್ ನಂಬರ್ ಪ್ಲೇಟ್, ಹಾಳಾಗಿರುವ ನಂಬರ್ ಪ್ಲೇಟ್ ಅನ್ನು ಬಳಸಬೇಡಿ. ಡ್ರಗ್ಸ್ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಇದೇ ವೇಳೆ ಅಭಿಷೇಕ್ ಚಾವರೆ ಮತದಾರ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು


ಸೆಂಟ್ ಫಿಲೋಮಿನಾ ಕಾಲೇಜಿನ ವ್ಯವಸ್ಥಾಪಕ ಡಾ.ಲೂದ್ರು ಪ್ರಸಾದ್, ನರಸಿಂಹರಾಜ ಸಂಚಾರ ಎಎಸ್‌ಐ ರವಿ ಕುಮಾರ್, ರಾಜು, ಸೆಂಟ್ ಫಿಲೋಮಿನಾ ಕಾಲೇಜಿನ ಆಡಳಿತಾಧಿಕಾರಿ ಜ್ಞಾನ ಪ್ರಗಾಸಮ್, ಪ್ರಾಂಶುಪಾಲ ಡಾರವಿ ಜೆ.ಡಿ.ಸಾಲ್ಡಾನ, ನೆಹರು ಯುವ ಕೇಂದ್ರದ ಅಧಿಕಾರಿ ಅಭಿಷೇಕ್ ಚಾವರೆ, ಎನ್‌ಎಸ್‌ಎಸ್ ವಿಭಾಗದ ಎಲ್ ಜಾನ್ ಸನ್ ಅರುಲ್ ಇನ್ನಿತರರು ಉಪಸ್ಥಿತರಿದ್ದರು.

ಜ.30ರಂದು 'ಸ್ಪರ್ಶ್ ಕುಷ್ಠರೋಗ ಅರಿವು ಜಾಥಾ

ಮೈಸೂರು, ಜ.27– ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಜ.30 ರಂದು ಬೆಳಿಗ್ಗೆ 9ಕ್ಕೆ 'ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನ–2025' ರ ಪ್ರಯುಕ್ತ ಸಮುದಾಯದಲ್ಲಿ ಅರಿವು ಮೂಡಿಸಲು ಜಾಗೃತಿ ಜಾಥಾ ಏರ್ಪಡಿಸಲಾಗಿದೆ ಎಂದು ಮೈಸೂರು ಜಿಲ್ಲೆಯ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ದೇಶ - ವಿದೇಶ

ಗುರುದ್ವಾರಗಳ ಮೇಲೆ ಅಮೆರಿಕ ಅಧಿಕಾರಿಗಳ ದಾಳಿ



ವಾಷಿಂಗ್ಟನ್: ಅಮೆರಿಕದ ನೂತನ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಅಕ್ರಮ ವಲಸಿಗರ ವಿರುದ್ಧ ಸಮರ ಸಾರಿದ್ದು, ಇದರ ಮೊದಲ ಹಂತವಾಗಿ ಅಮೆರಿಕದಲ್ಲಿರುವ ಗುರುದ್ವಾರಗಳ ಮೇಲೆ ದಾಳಿ ನಡೆಸಿ ಅಕ್ರಮ ವಲಸಿಗರ ಕುರಿತು ಕಾರ್ಯಾಚರಣೆ ನಡೆಸಲಾಗುತ್ತಿದೆ. ಅಮೆರಿಕದ ನ್ಯೂಯಾರ್ಕ್, ನ್ಯೂಜೆರ್ಸಿಯಲ್ಲಿರುವ ಗುರುದ್ವಾರಗಳಲ್ಲಿ ಅಕ್ರಮ ವಲಸಿಗರನ್ನು ಪರಿಶೀಲಿಸಲು ಅಮೆರಿಕದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ಕ್ರಮವು CBP ಮತ್ತು ICE ಯಲ್ಲಿರುವ ಧೈರ್ಯಶಾಲಿ ಪುರುಷರು ಮತ್ತು ಮಹಿಳೆಯರಿಗೆ ನಮ್ಮ ವಲಸೆ ಕಾನೂನುಗಳನ್ನು ಜಾರಿಗೊಳಿಸಲು ಮತ್ತು ನಮ್ಮ ದೇಶಕ್ಕೆ ಅಕ್ರಮವಾಗಿ ಬಂದಿರುವ ಕೊಲೆಗಾರರು ಮತ್ತು ಅತ್ಯಾಚಾರಿಗಳು ಸೇರಿದಂತೆ ಕ್ರಿಮಿನಲ್ ವಿದೇಶಿಯರನ್ನು ಹಿಡಿಯಲು ಅಧಿಕಾರ ನೀಡುತ್ತದೆ ಎಂದು DHS ವಕ್ತಾರರು ಹೇಳಿದ್ದಾರೆ. ಬಂಧನವನ್ನು ತಪ್ಪಿಸಿಕೊಳ್ಳಲು ಅಪರಾಧಿಗಳು ಇನ್ನು ಮುಂದೆ ಅಮೆರಿಕದ ಶಾಲೆಗಳು ಮತ್ತು ಚರ್ಚ್‌ಗಳಲ್ಲಿ, ಗುರುದ್ವಾರಗಳಲ್ಲಿ ಅಡಗಿಕೊಳ್ಳಲು ಸಾಧ್ಯವಾಗುವುದಿಲ್ಲ. ಟ್ರಂಪ್ ಆಡಳಿತವು ನಮ್ಮ ಧೈರ್ಯಶಾಲಿ ಕಾನೂನು ಜಾರಿ ಸಂಸ್ಥೆಗಳ ಕೈಗಳನ್ನು ಕಟ್ಟಿಹಾಕುವುದಿಲ್ಲ ಎಂದು ನಂಬುತ್ತದೆ ಎಂದು ವಕ್ತಾರರು ಸಮರ್ಥಿಸಿಕೊಂಡಿದ್ದಾರೆ.

ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ



ಡೆಹ್ರಾಡೂನ್: ಉತ್ತರಾಖಂಡದಲ್ಲಿ ಎಲ್ಲಾ ನಾಗರಿಕರಿಗೆ ಏಕರೂಪದ ಮದುವೆ, ವಿಚ್ಛೇದನ, ಭೂಮಿ, ಆಸ್ತಿ ಮತ್ತು ಉತ್ತರಾಧಿಕಾರ ಕಾನೂನುಗಳನ್ನು ಒಳಗೊಂಡ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಸೋಮವಾರದಿಂದ ಜಾರಿಗೆ ಬಂದಿದೆ. ಇದರೊಂದಿಗೆ ದೇಶದಲ್ಲಿ ಯುಸಿಸಿ ಜಾರಿಗೊಳಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರಾಜ್ಯದಲ್ಲಿ ಯುಸಿಸಿ ಜಾರಿ ಸಂಬಂಧ ಇಂದು ಗೆಜೆಟ್ ಅಧಿಸೂಚನೆ ಹೊರಡಿಸಿದ್ದಾರೆ. ಮದುವೆಗಳು, ವಿಚ್ಛೇದನ ಮತ್ತು ಲಿವ್–ಇನ್ ಸಂಬಂಧಗಳ ಕಡ್ಡಾಯ ಆನ್‌ಲೈನ್ ನೋಂದಣಿಗಾಗಿ ರಚಿಸಲಾದ ಪೋರ್ಟಲ್, ನಿಯಮ ಹಾಗೂ ಗೆಜೆಟ್ ಅಧಿಸೂಚನೆಯನ್ನು ಪುಷ್ಕರ್ ಸಿಂಗ್ ಧಾಮಿ ಬಿಡುಗಡೆ ಮಾಡಿದರು. ಯುಸಿಸಿ ಈ ಕ್ಷಣದಿಂದ ಸಂಪೂರ್ಣವಾಗಿ ಜಾರಿಗೆ ಬಂದಿದೆ. ಅದರ ಕೀರ್ತಿ ಸಂಪೂರ್ಣವಾಗಿ ರಾಜ್ಯದ ಜನರಿಗೆ ಸಲ್ಲುತ್ತದೆ ಎಂದು ಧಾಮಿ ಹೇಳಿದರು. ಸ್ವಾತಂತ್ರ್ಯದ ನಂತರ ಯುಸಿಸಿಯನ್ನು (UCC) ಅಳವಡಿಸಿಕೊಂಡ ದೇಶದ ಮೊದಲ ರಾಜ್ಯ ಉತ್ತರಾಖಂಡ ರಾಜ್ಯವಾಗಿದೆ.

ಸುಡಾನ್‌ನ ಡಾರ್ಫರ್ ಪ್ರದೇಶದ ಆಸ್ಪತ್ರೆ ಮೇಲೆ ದಾಳಿ; ಕನಿಷ್ಠ 70 ಸಾವು

ಖಾರ್ಟೂಮ್(ಸುಡಾನ್): ಎಲ್ ಫಾಶರ್ ನಗರದಲ್ಲಿನ ಏಕೈಕ ಕಾರ್ಯಚರಣೆಯಲ್ಲಿರುವ ಆಸ್ಪತ್ರೆ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ 70 ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥರು ತಿಳಿಸಿದ್ದಾರೆ.

ಸೌದಿ ಟೀಚಿಂಗ್ ಮೆಟರ್ನಲ್ ಆಸ್ಪತ್ರೆಯ ಮೇಲಿನ ದಾಳಿಯನ್ನು ಸ್ಥಳೀಯ ಅಧಿಕಾರಿಗಳು ಬಂಡುಕೋರರ ಕ್ಷಿಪ್ರ ಬೆಂಬಲ ಪಡೆಗಳ ಮೇಲೆ ಆರೋಪಿಸಿದ್ದಾರೆ. ಸೇನಾ ಮುಖ್ಯಸ್ಥ ಜನರಲ್ ಅಬ್ದೆಲ್–ಫತ್ತಾಹ್ ಬುರ್ಹಾನ್ ಅವರ ನೇತೃತ್ವದಲ್ಲಿ ಸುಡಾನ್ ಮಿಲಿಟರಿ ಮತ್ತು ಮಿತ್ರ ಪಡೆಗಳಿಗೆ ಈ ಯುದ್ಧದಿಂದ ಸಾಕಷ್ಟು ನಷ್ಟವಾಗಿದೆ. ನಿನ್ನೆ ಖಾರ್ಟೌಮ್‌ನ ಉತ್ತರಕ್ಕೆ ಉರಿಯುತ್ತಿರುವ ತೈಲ ಸಂಸ್ಕರಣಾಗಾರದ ಬಳಿ ಬುರ್ಹಾನ್ ಕಾಣಿಸಿಕೊಂಡಿದ್ದು, ಅವರ ಪಡೆಗಳು ಆರ್‌ಎಸ್‌ಎಫ್‌ನಿಂದ ವಶಪಡಿಸಿಕೊಂಡಿವೆ.

ಎಲ್ ಫಾಶರ್‌ನಲ್ಲಿ ಸೌದಿ ಆಸ್ಪತ್ರೆಯ ದಾಳಿಯಲ್ಲಿ, WHO ಮಹಾನಿರ್ದೇಶಕ ಟೆಡ್ರೋಸ್ ಅಧಾನೊಮ್ ಘೆಬ್ರೆಯೆಸಸ್ ಎಕ್ಸ್ ಖಾತೆಯಲ್ಲಿ ಸಾವಿನ ಸಂಖ್ಯೆ ಬಗ್ಗೆ ತಿಳಿಸಿದ್ದಾರೆ. ಆರ್‌ಎಸ್‌ಎಫ್ ಮತ್ತು ಸುಡಾನ್ ಮಿಲಿಟರಿ ಎರಡರ ಸಂವಹನ ಸವಾಲುಗಳು ಮತ್ತು ಉತ್ತೇಕ್ಷೆಗಳನ್ನು ಗಮನಿಸಿದರೆ ಸುಡಾನ್ ಕುರಿತು ವರದಿ ಮಾಡುವುದು ನಂಬಲಾಗದಷ್ಟು ಕಷ್ಟಕರವಾಗಿದೆ. ಏಪ್ರಿಲ್ 2023ರಲ್ಲಿ ಪರಸ್ಪರ ಕದನವಾಗಿ ಸಂಘರ್ಷದಲ್ಲಿ 28,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು.

13 ಅಂತಸ್ತಿನ ಕಟ್ಟಡದಿಂದ ಬಿದ್ದ 2 ವರ್ಷದ ಮಗು ಪವಾಡ ಸದೃಶ ಪಾರು



ಮುಂಬೈ: 13 ಅಂತಸ್ತಿನ ಕಟ್ಟಡದಲ್ಲಿ ಆಟವಾಡುತ್ತಾ ಮಗುವೊಂದು ಕೆಳಗೆ ಬಿದ್ದಿದ್ದು, ಕಟ್ಟಡದ ಆವರಣದಲ್ಲಿದ್ದ ವ್ಯಕ್ತಿಯೋರ್ವ ಮಗುವನ್ನು ಪವಾಡಸದೃಶ ರೀತಿಯಲ್ಲಿ ರಕ್ಷಿಸಿರುವ ವಿಡಿಯೋ ಇದೀಗ ವೈರಲ್ ಆಗುತ್ತಿದೆ. ಮಹಾರಾಷ್ಟ್ರದ ಥಾಣೆಯ ಡೊಂಬಿವಲಿಯಲ್ಲಿ ಈ ಘಟನೆ ನಡೆದಿದ್ದು, ಘಟನೆಯ ಸಂಪೂರ್ಣ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಎರಡು ವರ್ಷದ ಮಗುವೊಂದು 13 ಅಂತಸ್ತಿನ ಕಟ್ಟಡದ 3ನೇ ಮಹಡಿಯ ಬಾಲ್ಕನಿಯಲ್ಲಿ ಆಟವಾಡುತ್ತಿದ್ದಾಗ ನೋಡ ನೋಡುತ್ತಲೇ ಕೆಳಗೆ ಬಿದ್ದಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮಗು ಕಟ್ಟಡದ 13ನೇ ಮಹಡಿಯ ಬಾಲ್ಕನಿಯಲ್ಲಿ ಆಟವಾಡುತ್ತಿದ್ದಾಗ ಅಲ್ಲಿಂದ ಜಾರಿ ಬಿದ್ದಿತು. ಈ ವೇಳೆ ಸ್ಥಳೀಯ ನಿವಾಸಿ ಭವೇಶ ಮಹಾತ್ರೆ ಎಂಬುವವರು ಇದನ್ನು ಗಮನಿಸಿ ಮಗುವನ್ನು ಹಿಡಿಯಲೆತ್ನಿಸಿದ್ದಾರೆ. ಈ ವೇಳೆ ಮೇಲಿಂದ ಬಿದ್ದ ಮಗು ನೇರವಾಗಿ ಅವರ ಕೈಗಳಿಂದ ಜಾರಿದೆ. ಈ ಹಂತದಲ್ಲಿ ಮಗು ಬೀಳುತ್ತಿದ್ದ ವೇಗ ಕಡಿತಗೊಂಡು ಮಗು ನೆಲಕ್ಕೆ ಅಪ್ಪಳಿಸಿದೆ. ಹೀಗಾಗಿ ಮಗುವಿಗೆ ಯಾವುದೇ ಗಂಭೀರ ಅಪಾಯವಾಗಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಕೋತಿಗಳ ದಾಳಿ; ಚಾವಣಿಯಿಂದ ಬಿದ್ದು ವಿದ್ಯಾರ್ಥಿನಿ ಸಾವು

ಪಾಟ್ನಾ: ಕೋತಿಗಳ ಗುಂಪೊಂದು ದಾಳಿ ಮಾಡಿದ್ದು, ಚಾವಣಿ ಮೇಲೆ ನಿಂತಿದ್ದ 10ನೇ ತರಗತಿ ವಿದ್ಯಾರ್ಥಿನಿ ಕೆಳಗೆ ಬಿದ್ದು ಸಾವಿಗೀಡಾಗಿರುವ ಆತಂಕಕಾರಿ ಘಟನೆ ಬಿಹಾರದ ಸಿವಾನ್ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸಂತ್ರಸ್ತೆಯನ್ನು ಪ್ರಿಯಾ ಕುಮಾರಿ ಎಂದು ಗುರುತಿಸಲಾಗಿದ್ದು, ಮುಂದಿನ ತಿಂಗಳು ನಡೆಯಲಿರುವ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾಗ ಭಗವಾನ್‌ಪುರ ಪೊಲೀಸ್ ವ್ಯಾಪ್ತಿಗೆ ಒಳಪಡುವ ಮಘರ್ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಏಕಾಏಕಿ ಚಾವಣಿಯಲ್ಲಿ ಕಾಣಿಸಿಕೊಂಡ ಕೋತಿಗಳ ಗುಂಪು ಆಕೆಯ ಮೇಲೆ ದಾಳಿ ಮಾಡಿದ್ದು, ಆಕೆ ಕೆಳಗೆ ಬಿದ್ದಿದ್ದಾಳೆ. ಒಂಟಿಯಾಗಿದ್ದ ಪ್ರಿಯಾ ತಪ್ಪಿಸಿಕೊಳ್ಳಲು ಯತ್ನಿಸಿದ್ದಾಳೆ. ಪ್ರಿಯಾಳ ಕೂಗಾಟ ಕೇಳಿದ ನಂತರ ಕೆಲವು ನೆರೆಹೊರೆಯವರು ಕಟ್ಟಡದ ಹೊರಗೆ ಜಮಾಯಿಸಿ ಕೋತಿಗಳ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸಿದ್ದಾರೆ. ಈ ವೇಳೆ ಪ್ರಿಯಾ ಮೆಟ್ಟಿಲುಗಳತ್ತ ಓಡಿದ್ದಾಳೆ. ದುರದೃಷ್ಟವಶಾತ್ ಒಂದು ಕೋತಿ ಆಕೆಯ ಮೇಲೆ ಹಾರಿದೆ ಮತ್ತು ಆಕೆಯನ್ನು ತಳ್ಳಿದೆ. ಕೆಳಗೆ ಬಿದ್ದ ಪ್ರಿಯಾಳ ತಲೆಯ ಹಿಂಭಾಗಕ್ಕೆ ಗಂಭೀರವಾದ ಗಾಯವಾಗಿದೆ. ಕೂಡಲೇ ಆಕೆಯನ್ನು ಸಿವಾನ್ ಸದರ್ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಅಷ್ಟೊತ್ತಿಗಾಗಲೇ ಆಕೆ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಸಿಎನ್‌ಸಿಯಿಂದ ಹಕ್ಕೊತ್ತಾಯ ಮಂಡನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು ಸಿಎನ್‌ಸಿ ವತಿಯಿಂದ ಮಂಡಿಸಲಾಯಿತು.

ಮಡಿಕೇರಿ, ಜ.27–ಕೊಡವರನ್ನು ಒಳಗೊಂಡ ಪರಿಪೂರ್ಣ ಮತ್ತು ಅರ್ಥಪೂರ್ಣ ಗಣರಾಜ್ಯಕ್ಕಾಗಿ ಒತ್ತಾಯಿಸಿ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು ಗಣರಾಜ್ಯೋತ್ಸವ ದಿನದಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಿಯುತವಾಗಿ ಮಂಡಿಸಲಾಯಿತು.

ನ್ಗಣ್ಯ ಸಂಖ್ಯೆಯ ಕೊಡವರ ಗೌರವಾನ್ವಿತ ಗುರಿ ಮತ್ತು ಶಾಸನ ಬದ್ಧ ಹಕ್ಕೊತ್ತಾಯಗಳ ಅನುಷ್ಠಾನಕ್ಕಾಗಿ ಜಿಲ್ಲಾಡಳಿತ ಮೂಲಕ ಸರ್ಕಾರಗಳಿಗೆ ಮನವಿ ಸಲ್ಲಿಸುತ್ತಿರುವುದಾಗಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದರು. ದೇಶದ ಸಂವಿಧಾನದ ಆರ್ಟಿಕಲ್ 244 ಆರ್/ ಡಬ್ಲ್ಯೂ 6 ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ, ವಿಶ್ವ ಸಂಸ್ಥೆ ಘೋಷಣೆ ಪ್ರಕಾರ ಅಂತಾರಾಷ್ಟ್ರೀಯ ಕಾನೂನಿನನ್ವಯ ಕೊಡವರಿಗೆ ಮಾನ್ಯತೆ ಮತ್ತು ಸೂಕ್ಷ್ಮಾತಿ ಸೂಕ್ಷ್ಮ ಕೊಡವ ಬುಡಕಟ್ಟು ಕುಲಕ್ಕೆ ಎಸ್‌ಟಿ ಟ್ಯಾಗ್ ಪರಿಗಣನೆ ಯೊಂದಿಗೆ ಸಿಎನ್‌ಸಿ ಪ್ರತಿಪಾದಿಸಿರುವ ಕೊಡವರ ಭೂಮಿ, ಭಾಷೆ, ಸಂಸ್ಕೃತಿ, ಜನಪದ ಇತ್ಯಾದಿ ಅಶೋ ತ್ತರಗಳಿಗೆ ರಾಜ್ಯಾಂಗ ಖಾತರಿಯ ಕಾನೂನು ಬದ್ಧ ಹಕ್ಕುಗಳನ್ನು ನೀಡಬೇಕೆಂದು ಒತ್ತಾಯಿಸಿದರು.

ಸಂವಿಧಾನದ ವಿಧಿ 32ರ ಅಡಿಯಲ್ಲಿ ಜನರ ಆಶೋತ್ತರಗಳಿಗೆ ಪರಿಹಾರ ಕಂಡುಕೊಳ್ಳುವುದು 6 ಮೂಲಭೂತ ಹಕ್ಕುಗಳಲ್ಲಿ ಒಂದಾಗಿದ್ದು, ಅದರಂತೆ ಸಾಂವಿಧಾನಿಕ ಕಾರ್ಯವಿಧಾನದ ಮೂಲಕ ಕೊಡವರ ಪರಮೋಚ್ಛ ಆಕಾಂಕ್ಷೆ ಮತ್ತು ಗೌರವಾನ್ವಿತ ಗುರಿಗಳನ್ನು ಸಾಧಿಸಲು ಈ ಶಾಂತಿಯುತ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಪುಲ್ಲೇರ ಸ್ವಾತಿ, ಬಾಚಿನಾಡಂಡ ಗಿರೀಶ್, ಪಟ್ಟಮಾಡ ಲಲಿತಾ, ಕರ್ನಲ್ ಬಿ.ಎಂ. ಪಾರ್ವತಿ, ಬೊಟ್ಟಂಗಡ ಸವಿತಾ, ಅರೆಯಡ ಸವಿತಾ, ಚೋಳಪಂಡ ಜ್ಯೋತಿ ನಾಣಯ್ಯ, ಕಲಿಯಂಡ ಪ್ರಕಾಶ್, ಆಳಮಂಡ ಜೈ ಗಣಪತಿ, ಕಾಂಡೇರ ಸುರೇಶ್, ಬಾಚರಣಿಯಂಡ ಚಿಪ್ಪಣ್ಣ, ಚಂಬಂಡ ಜನತ್, ಕಾರೇರ ಬೋಪಣ್ಣ ಇದ್ದರು.

ಅನುದಾನ ಕೊರತೆ ನಡುವೆಯೂ ಕೊಡಗು ವಿವಿ ಶೈಕ್ಷಣಿಕ ಪ್ರಗತಿ

• ಸಚಿವ ಎನ್.ಎಸ್.ಬೋಸರಾಜು ಶ್ಲಾಘನೆ • ಕೌಶಲಾಧಾರಿತ ಕೋರ್ಸ್‌ಗಳ ಲೋಕಾರ್ಪಣೆ

ಕುಶಾಲನಗರ, ಜ.27–ವಿದ್ಯಾರ್ಥಿಗಳಿಗೆ ಮೂಲ ಕೋರ್ಸ್‌ಗಳ ಜೊತೆಗೆ ಕೌಶಲಾಧಾರಿತ ತರಬೇತಿ ಮತ್ತು ಒತ್ತು ನೀಡಿ ಔದ್ಯೋಗಿಕ ಕ್ಷೇತ್ರಗಳಿಗೆ ಅಣಿಗೊಳಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಶ್ಲಾಘನೆ ವ್ಯಕ್ತಪಡಿಸಿದರು.

ಸಮೀಪದ ಚಿಕ್ಕಅಳುವಾರ ಹಾರಂಗಿ ಸಭಾಂಗಣದಲ್ಲಿ ಕೊಡಗು ವಿಶ್ವವಿದ್ಯಾಲಯ, ಇನ್‌ಟೆಲ್ ಸಂಸ್ಥೆ ಬೆಂಗಳೂರು ಹಾಗೂ ರೀಚ್‌ಮಚ್ ಹೈಯರ್ ಅಕಾಡೆಮಿ ಫೌಂಡೇಷನ್ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೌಶಲಾಧಾರಿತ ಕೋರ್ಸ್ ಲೋಕಾರ್ಪಣೆ ಹಾಗೂ ಕೌಶಲಾಭಿವೃದ್ಧಿ ತರಬೇತಿ ಪಡೆದ ಬೋಧರಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಅನುದಾನ ಕೊರತೆ ನಡುವೆಯೂ ಕೊಡಗು ವಿಶ್ವವಿದ್ಯಾಲಯ ಸಾಕಷ್ಟು ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿದೆ. ಯುಜಿಸಿಯಿಂದ ಕಾಲ ಕಾಲಕ್ಕೆ ಅನುದಾನ ಒದಗಿಸುವುದು, ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ಬಹುಮುಖ್ಯವಾಗಿದೆ. ಆ ಮೂಲಕ ಈ ವಿಶ್ವವಿದ್ಯಾಲಯ ಅಭಿವೃದ್ಧಿ ಸಾಧಿಸಲಿ. ಸರ್ಕಾರದ ಹಂತದಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವಂತಹ ಎಲ್ಲಾ ಸಹಕಾರ ದೊರಕಿಸಿಕೊಡುವಂತಹ ಪ್ರಯತ್ನಿಸಲಾಗುವುದು ಭರವಸೆ ನೀಡಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ವಿದ್ಯಾಭ್ಯಾಸದ ಜೊತೆಗೆ ಕೌಶಲಾಭಿವೃದ್ಧಿಗೆ ಅನುವು ಮಾಡಿಕೊಡುವಂತಹ ಅವಕಾಶ ದೊರೆಯುವುದು ಬಹಳ ವಿರಳ. ಆದರೆ, ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳು ಮೂಲ ಕೋರ್ಸ್‌ಗಳ ಜೊತೆಗೆ ಹೆಚ್ಚುವರಿಯಾಗಿ ಕೌಶಲಾಧಾರಿತ ಶಿಕ್ಷಣ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರುವುದು ಶ್ಲಾಘನೀಯ ಎಂದರು.



ಚಿಕ್ಕಅಳುವಾರ ಹಾರಂಗಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಬೋಸರಾಜು ಮಾತನಾಡಿದರು.

ಕೊಡಗು ವಿಶ್ವವಿದ್ಯಾಲಯ ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ಮಾಡಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಲಿ. ವಿಶ್ವವಿದ್ಯಾಲಯ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯ ಸೌಲಭ್ಯ ದೊರಕಿಸಿಕೊಡುವಲ್ಲಿ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ವಿವಿ ಕುಲಸಚಿವ (ಮೌಲ್ಯಮಾಪನ) ಡಾ.ಎಂ.ಸುರೇಶ್, ಸಿಂಡಿಕೇಟ್ ಸದಸ್ಯ ಡಾ.ಕಾವೇರಪ್ಪ, ರೀಚ್‌ಮಚ್ ಹೈಯರ್ ಅಕಾಡೆಮಿ ಫೌಂಡೇಷನ್‌ನ ಹಿರಿಯ ಸಲಹೆಗಾರ ಡಾ.ಓಂಪ್ರಕಾಶ್ ಗೋಯಲ್ ಹಾಗೂ ಸಚಿವರ ಆಪ್ತ ಕಾರ್ಯದರ್ಶಿ ವೀರಭದ್ರ ಹಂಚಿನಾಳ, ಉಪನ್ಯಾಸಕ ಡಾ.ಜಮೀರ್ ಅಹಮ್ಮದ್ ಉಪಸ್ಥಿತರಿದ್ದರು.

> ಕೊಡಗು ವಿಶ್ವವಿದ್ಯಾಲಯ ಸ್ಥಾಪನೆಯಾಗಿ ಎರಡು ವರ್ಷ ಪೂರೈಸುತ್ತಿದ್ದು, ಈ ಅವಧಿಯಲ್ಲಿ ಬಹಳಷ್ಟು ಶೈಕ್ಷಣಿಕ ಪ್ರಾತಿದಾಯಕ ಯೋಜನೆಗಳನ್ನು ರೂಪಿಸಿ ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ. ವಿವಿಧ ಪ್ರತಿಷ್ಠಿತ ಸಂಘ–ಸಂಸ್ಥೆಗಳ ಜೊತೆಗೆ ಶೈಕ್ಷಣಿಕ ಒಡಂಬಡಿಕೆ ಮಾಡಿಕೊಂಡು ಈಗಾಗಲೇ ಹಲವಾರು ಕಾರ್ಯಕ್ರಮ ನಡೆಸಲಾಗಿದೆ. ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ, ಸಿಬ್ಬಂದಿಗೆ ವಿವಿಧ ತರಬೇತಿ, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ.
>
> –ಪ್ರೊ.ಅಶೋಕ ಸಂಗಪ್ಪ ಆಲೂರ, ಕೊಡಗು ವಿಶ್ವವಿದ್ಯಾಲಯ ಕುಲಪತಿ

ಕಟ್ಟೆಮಾಡು ದೇವಾಲಯ ಪ್ರಧಾನ ಅರ್ಚಕನ ಮೇಲೆ ಹಲ್ಲೆ

ಮಡಿಕೇರಿ: ಕಟ್ಟೆಮಾಡು ದೇವಾಲಯ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಮೇಲೆ ಕೆಲ ವ್ಯಕ್ತಿಗಳು ಹಲ್ಲೆ ನಡೆಸಿ ಗಾಯಗೊಳಿಸಿರುವ ಘಟನೆ ಸೋಮವಾರ ಸಂಜೆ ನಡೆದಿದೆ. ಗಾಯಾಳು ಅರ್ಚಕನನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಮೂರ್ನಾಡುವಿನ ನಮ್ಮ ಮನೆಗೆ ಜೀಪಿನಲ್ಲಿ ಆಗಮಿಸಿದ ಕಾಕೋಟು ಪರಂಬು ನಿವಾಸಿ ಮಂಡೇಟಿರ ಅನಿಲ್ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಗಾಯಾಳು ವಿಘ್ನೇಶ್ ಭಟ್ ತಿಳಿಸಿದ್ದಾರೆ.

ಮನೆಗೆ ಆಗಮಿಸಿದ ಮಂಡೇಟಿರ ಅನಿಲ್ ಮತ್ತು ಮತ್ತೊರ್ವ ಮೊದಲು ಪೂಜೆ ಮಾಡಿಸಬೇಕು ಎಂದು ಹೇಳಿದರು. ಈ ವೇಳೆ ನಾವು ಮಾಂಸಾಹಾರ ಸೇವಿಸಿರುವುದಾಗಿ ತಿಳಿಸಿ, ಮನೆಯಿಂದ ರಸ್ತೆ ಬಳಿಗೆ ಬರ ಹೇಳಿದರು. ನಂತರ ಕಟ್ಟೆಮಾಡು ದೇವಾಲಯ ಪ್ರಧಾನ ಅರ್ಚಕ ನೀವೇ ಎಂದು ಪ್ರಶ್ನಿಸಿದ್ದರು. ನಾನು ಹೌದು ಎಂದು ಉತ್ತರಿಸಿದ ತಕ್ಷಣ ಏಕಾಏಕಿ ತನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಅಲ್ಲೇ ಇದ್ದ ತನ್ನ ತಾಯಿ ಹಲ್ಲೆಯನ್ನು ತಪ್ಪಿಸಲು ಮುಂದಾದಾಗ ಅವರ ಮೇಲೂ ಹಲ್ಲೆ ನಡೆಸಿ ಕೊಲೆ ಬೆದರಿಕೆ ಒಡ್ಡಿ ಸ್ಥಳದಿಂದ ತೆರಳಿದ್ದಾರೆ.



ಗಾಯಗೊಂಡಿರುವ ಅರ್ಚಕ ವಿಘ್ನೇಶ್ ಭಟ್.

ಹಲ್ಲೆ ನಡೆಸುವ ಸಂದರ್ಭ ತನ್ನ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಮತ್ತು ಉಂಗುರವನ್ನು ಕಿತ್ತುಕೊಂಡು ಹೋಗಿದ್ದಾರೆ ಎಂದು ಗಾಯಾಳು ವಿಘ್ನೇಶ್ ಭಟ್ ಘಟನೆ ಬಗ್ಗೆ ವಿವರಿಸಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜು, ನಗರ ಠಾಣಾಧಿಕಾರಿ ಲೋಕೇಶ್, ಗುಪ್ತಚರ ಇಲಾಖೆ ಅಧಿಕಾರಿಗಳು, ನಗರ, ಮೂರ್ನಾಡು ಠಾಣೆ ಅಧಿಕಾರಿಗಳು ಮತ್ತು ಸಿಬ್ಬಂದಿ ಗಾಯಾಳು ಅರ್ಚಕ ವಿಘ್ನೇಶ್ ಭಟ್ ಹೇಳಿಕೆ ಪಡೆದರು.

ಕಠಿಣ ಕ್ರಮಕ್ಕೆ ಆಗ್ರಹ: ಕಟ್ಟೆಮಾಡು ದೇವಾಲಯ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿರುವ ಘಟನೆಯನ್ನು ಕೊಡಗು ಜಿಲ್ಲಾ ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ ಅಧ್ಯಕ್ಷ ರಾಮಚಂದ್ರ ಮೂಗೂರು ತೀವ್ರವಾಗಿ ಖಂಡಿಸಿದ್ದಾರೆ.

ಮಡಿಕೇರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿರುವ ಅರ್ಚಕ ವಿಘ್ನೇಶ್ ಭಟ್‌ಗೆ ಸಾಂತ್ವನ ಹೇಳಿ, ಅರ್ಚಕರ ಕುಟುಂಬಸ್ಥರಿಗೂ ಧೈರ್ಯ ತುಂಬಿದರು. ಘಟನೆಗೆ ಕಾರಣರಾದ ವ್ಯಕ್ತಿಗಳ ವಿರುದ್ಧ ತಕ್ಷಣ ಕಠಿಣ ಕ್ರಮ ಕೈಗೊಳ್ಳುವಂತೆ ಬ್ರಾಹ್ಮಣ ಸಮಾಜದ ಪ್ರಮುಖರ ಒತ್ತಾಯ ಒತ್ತಾಯಿಸಿದರು. ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ ಕಾರ್ಯದರ್ಶಿ ಜಗದೀಶ್ ಸೋಮಯಾಗಿ, ಪ್ರಮುಖರಾದ ಬಿ.ಜಿ. ಅನಂತಶಯನ, ಜಿ.ಆರ್. ರವಿಶಂಕರ್, ಅರುಣ್ ಸೋಮಯಾಗಿ, ವಕೀಲ ಎಂ.ಎನ್.ಶಶಿಕಾಂತ್ ಹಾಜರಿದ್ದರು.

ವಿರಾಜಪೇಟೆಯಲ್ಲಿ 1 ಕೋಟಿ ವೆಚ್ಚದಲ್ಲಿ ವಿವಿಧ ಕಾಮಗಾರಿ



ವಿರಾಜಪೇಟೆಯಲ್ಲಿ ರಸ್ತೆ ಅಭಿವೃದ್ಧಿಗೆ ಶಾಸಕ ಎ.ಎಸ್. ಪೊನ್ನಣ್ಣ, ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಭೂಮಿ ಪೂಜೆ ನೆರವೇರಿಸಿದರು.

ವಿರಾಜಪೇಟೆ: ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಪುರಸಭೆ ವ್ಯಾಪ್ತಿಯ ವಿವಿಧ ಕಾಮಗಾರಿಗಳನ್ನು 1 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಪಟ್ಟಣದ ವಿಜಯನಗರ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮುಂಭಾಗ, ಗೌರಿಕೆರೆ ರಸ್ತೆ, ಪೊಲೀಸ್ ಕ್ವಾಟ್ರಸ್ ಬಳಿಯ ರಸ್ತೆ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸಿ ಬಳಿಕ ನಿಸರ್ಗ ಬಡಾವಣೆ ಹಾಗೂ ಗೌರಿಕೆರೆ ಪಕ್ಕದ ಕಾಂಕ್ರಿಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, ಪುರಸಭೆ ವ್ಯಾಪ್ತಿಯ ರಸ್ತೆ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಅನುದಾನದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇನ್ನು ಪಟ್ಟಣದ ಮುಖ್ಯ ರಸ್ತೆಯನ್ನು 5.60 ಕೋಟಿ ರೂ. ಅನುದಾನದಲ್ಲಿ ಅಭಿವೃದ್ಧಿಗೊಳಿಸಲಾಗುವುದು. ಈ ಸಂಬಂಧ ಶೀಘ್ರ ಸಭೆ ಕರೆದು ತೀರ್ಮಾನಿಸಲಾಗುವುದು ಎಂದರು.

ಇದೇ ವೇಳೆ ಪುರಸಭೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ 2024–25ನೇ ಸಾಲಿನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳು, ಡಾ.ಬಿ.ಆರ್.ಅಂಬೇಡ್ಕರ್ ಬಾಲಕರ ವಿದ್ಯಾರ್ಥಿನಿಲಯಕ್ಕೆ ಸಲಕರಣೆ ಹಾಗೂ ವಾಹನ ಚಾಲನೆಗೆ ಅರ್ಜಿ ಸಲ್ಲಿಸಿದ ಚಾಲಕರಿಗೆ ತರಬೇತಿ ಮತ್ತು ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಅಡುಗೆ ಅನಿಲ ಸ್ಟೌವ್, ಇತರ ಸಾಮಗ್ರಿಗಳನ್ನು ಶಾಸಕ ಪೊನ್ನಣ್ಣ ವಿತರಿಸಿದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಉಪಾಧ್ಯಕ್ಷೆ ಫಸಿಹಾ ತಬಸುಮ್, ಮುಖ್ಯಾಧಿಕಾರಿ ಚಂದ್ರಕುಮಾರ್, ಸದಸ್ಯರಾದ ಸಿ.ಕೆ.ಪೃಥ್ವಿನಾಥ್, ಎಸ್.ಹೆಚ್.ಮತೀನ್, ಮೊಹಮ್ಮದ್ ರಫಿ, ರಜನಿಕಾಂತ್, ಜಲೀಲ್, ಅಗಸ್ಟಿನ್ ಬೆನ್ನಿ, ರಾಜೇಶ್, ಶಾವೂಲ್ ಹಮೀದ್, ದಿನೇಶ್ ನಂಬಿಯಾರ್, ಜಿ.ಜಿ.ಮೋಹನ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಜಾನ್ಸನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ನಗರಾಧ್ಯಕ್ಷ ಮಾದಂಡ ತಿಮ್ಮಯ್ಯ, ಕೋಳುಮಂಡ ರಫೀಕ್, ಕಾಣತಂಡ ಜಗದೀಶ್, ಜಿಲ್ಲಾ ಸಮಿತಿ ಪಿ.ಎ.ಹನೀಫ್, ಜೋಕಿಂ ರಾಡ್ರಿಗಾಸ್ ಮತ್ತಿತರರು ಹಾಜರಿದ್ದರು.



ವಿರಾಜಪೇಟೆ ಕರ್ನಾಟಕ ಸಂಘದಲ್ಲಿ ಧ್ವಜಾರೋಹಣ...

ವಿರಾಜಪೇಟೆ ಕರ್ನಾಟಕ ಸಂಘದ ಆವರಣದಲ್ಲಿ ಅಧ್ಯಕ್ಷ ಮಾಳೇಟಿರ ಎಂ.ಬೆಲ್ಲು ಬೋಪಯ್ಯ ಗಣರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ನೆರವೇರಿಸಿದರು. ಸಂಘದ ಕಾರ್ಯದರ್ಶಿ ಮುಂಡ್ಯೋಳಂಡ ಕುಸುಮ ಸೋಮಣ್ಣ, ಕೋಶಾಧಿಕಾರಿ ಕೋಟೆರ ಯು.ಗಣೇಶ್ ತಮ್ಮಯ್ಯ, ನಿರ್ದೇಶಕರಾದ ಸಿ.ಪಿ.ಕಾವೇರಪ್ಪ, ಸಿ.ಎಂ. ಸುರೇಶ್ ನಾಣಯ್ಯ, ಎಂ.ರಾಣು ಮಂದಣ್ಣ, ಬಿ.ಎಂ.ಸುರೇಶ್, ಎಂ.ಬಿ.ದೇವಯ್ಯ ಚುಮ್ಮಿ, ಕಚೇರಿ ಕಾರ್ಯದರ್ಶಿ ರಾಧಾ ಮತ್ತಿತರರಿದ್ದರು.

ಸಚಿವ ಸಂಪುಟ, ಸಮಾವೇಶಕ್ಕೆ ಸಿದ್ಧತೆ ಕೈಗೊಳ್ಳಿ

ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ

ಚಾಮರಾಜನಗರ, ಜ.27–ಮಲೆಮಹದೇಶ್ವರಬೆಟ್ಟದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆ ಹಾಗೂ ಚಾಮರಾಜನಗರದಲ್ಲಿ ನಿಗದಿಯಾಗಿರುವ ಫಲಾನುಭವಿಗಳ ಸಮಾವೇಶಕ್ಕೆ ಸಮರ್ಪಕವಾಗಿ ಸಿದ್ಧತೆ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ವಿವಿಧ ಇಲಾಖೆ ವ್ಯಾಪ್ತಿ ಪೂರ್ಣಗೊಂಡಿರುವ ಕಾಮಗಾರಿ, ಕಟ್ಟಡ ವಿವರ ಪಡೆದ ಸಚಿವರು, ಫಲಾನುಭವಿಗಳ ಸಮಾವೇಶದಲ್ಲಿ ಕಟ್ಟಡಗಳ ಉದ್ಘಾಟನೆ ಹಾಗೂ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಲು ಎಲ್ಲಾ ಸಿದ್ಧತೆಗಳನ್ನು ತ್ವರಿತಗೊಳಿಸಬೇಕು ಎಂದು ತಿಳಿಸಿದರು.

ವಿವಿಧ ಇಲಾಖೆ, ನಿಗಮ, ಮಂಡಳಿಗಳು, ನಗರ ಸ್ಥಳೀಯ ಸಂಸ್ಥೆಗಳು ಫಲಾನುಭವಿಗಳಿಗೆ ನೀಡುವ ವಿವಿಧ ಸವಲತ್ತುಗಳನ್ನು ಸಮಾವೇಶದಲ್ಲಿ ವಿತರಿಸಲು ಎಲ್ಲಾ ಪ್ರಕ್ರಿಯೆಗಳನ್ನು ಕೈಗೊಳ್ಳಬೇಕು. ಸರ್ಕಾರದ ಸೌಲಭ್ಯಗಳನ್ನು ತಲುಪಿಸಲು ಅಧಿಕಾರಿಗಳು ಬಾಕಿ ಸಿದ್ಧತಾ ಕಾರ್ಯಗಳನ್ನು ಅಚ್ಚುಕಟ್ಟಾಗಿ ಪೂರ್ಣಗೊಳಿಸಬೇಕು ಎಂದರು.



ಚಾಮರಾನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

ಸವಲತ್ತು, ಪರಿಕರ, ಇತರೆ ಯಾವುದೇ ಸಲಕರಣೆಗಳನ್ನು ಮುಂಚಿತವಾಗಿಯೇ ದಾಸ್ತಾನು ಮಾಡಿ ವ್ಯವಸ್ಥಿತವಾಗಿ ಕಾರ್ಯಕ್ರಮದಲ್ಲಿ ವಿತರಣೆ ಮಾಡಬೇಕು. ಫಲಾನುಭವಿಗಳಿಗೆ ಮಾಹಿತಿ ನೀಡಿ ಸಮಾವೇಶಕ್ಕೆ ಕರೆತಂದು ವಿತರಿಸುವ ಕಾರ್ಯವನ್ನು ಹೊಣೆಗಾರಿಕೆಯಿಂದ ನಿರ್ವಹಿಸಬೇಕು. ಸರ್ಕಾರದ ಸೌಲಭ್ಯಗಳನ್ನು ತಲುಪಿಸುವ ಮೂಲಕ ಇಲಾಖೆಗಳು ಜನರಿಗೆ ನೆರವಾಗಬೇಕು. ಇದಕ್ಕಾಗಿ ಪ್ರತಿ ಇಲಾಖೆ ವಿವರವಾದ ಪಟ್ಟಿ ಮಾಡಬೇಕು. ಸಾಕಷ್ಟು ಸಿದ್ಧತೆಯೊಂದಿಗೆ ಫಲಾನುಭವಿಗಳ ಸಮಾವೇಶ ಆಯೋಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಹೆಚ್.ವಿ.ಚಂದ್ರು, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಉಪಾಧ್ಯಕ್ಷೆ ಮಮತಾ, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಬಿ.ಆರ್. ಮಹೇಶ್, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ವಿವಿಧ ತಾಲೂಕಿನ ತಹಸೀಲ್ದಾರ್‌ಗಳು, ತಾಪಂ ಇಓಗಳು, ವಿವಿಧ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪಡಗೂರು ಗ್ರಾಮದಲ್ಲಿ ಬೋನಿಗೆ ಬಿದ್ದ ಚಿರತೆ



ಗುಂಡ್ಲುಪೇಟೆ ತಾಲೂಕಿನ ಪಡಗೂರು ಗ್ರಾಮದಲ್ಲಿ ಬೋನಿಗೆ ಬಿದ್ದ ಚಿರತೆ.

ಗುಂಡ್ಲುಪೇಟೆ: ತಾಲೂಕಿನ ಪಡಗೂರು ಗ್ರಾಮದಲ್ಲಿ ಸೋಮವಾರ ಮುಂಜಾನೆ 4 ವರ್ಷದ ಚಿರತೆ ಬೋನಿನಲ್ಲಿ ಸೆರೆಯಾಗಿದೆ.

ಕಳೆದ 6–7 ತಿಂಗಳಿಂದ ಗ್ರಾಮದ ಸುತ್ತಮುತ್ತ ಸಂಚರಿಸಿ ರೈತರ ಸಾಕುಪ್ರಾಣಿಗಳನ್ನು ಕೊಂದುಹಾಕುತ್ತಿದ್ದ ಚಿರತೆ ಸೆರೆಗೆ ಮನು ಅವರ ಜಮೀನಿನಲ್ಲಿ ಬಫರ್ ವಲಯ ಅರಣ್ಯಾಧಿಕಾರಿಗಳು ಬೋನು ಅಡವಡಿಸಿ ಕರುವನ್ನು ಕೂಡಿಹಾಕಿದ್ದರು. ಆಹಾರ ಅರಸಿ ಬಂದ ಚಿರತೆ ಬೋನಿನೊಳಗೆ ಬಿದ್ದಿದೆ. ನಂತರ ಸ್ಥಳಕ್ಕೆ ತೆರಳಿದ ಅರಣ್ಯಾಧಿಕಾರಿಗಳು ಚಿರತೆಯನ್ನು ಮೂಲೆಹೊಳೆ ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ಬಫರ್ ವಲಯದ ವಡೆಯನಪುರದಿಂದ ಕಡತಾಳಕಟ್ಟೆಹುಂಡಿ, ಸೋಮನಪುರ, ಶೀಲವಂತಪುರ, ದೇಪಾಪುರ, ತೆರಕಣಾಂಬಿ, ಕಗ್ಗಳ, ತ್ರಿಯಂಭಕಪುರ, ಬೆರಟಹಳ್ಳಿ, ಮಲ್ಲಮ್ಮನಹುಂಡಿ, ಕೆಲಸೂರು, ಪಡಗೂರು, ಹಕ್ಕಲಪುರ, ಕಲ್ಲಹಳ್ಳಿ ಮುಂತಾದ ಗ್ರಾಮಗಳಲ್ಲಿ ಚಿರತೆ ಹಾಗೂ ಹುಲಿಗಳ ದಾಳಿಗೆ ನೂರಾರು ಜಾನುವಾರುಗಳು ಬಲಿಯಾಗುತ್ತಿವೆ.

ಚಿರತೆಗಳ ಸೆರೆಗೆ ಅರಣ್ಯ ಇಲಾಖೆ 8–10 ಅಡಿ ಅಗಲದ ತುಮಕೂರು ಮಾದರಿಯ ಬೋನುಗಳನ್ನು ಬಳಕೆ ಮಾಡುತ್ತಿದೆ. ಬೋನು ಅಳವಡಿಸಿ ಅದರ ಮೇಲೆ ಸೊಪ್ಪಿನಿಂದ ಮುಚ್ಚಿ ನಂತರ ಒಳಗೆ ಸಗಣಿ ಚೆಲ್ಲಿ ಮೇಕೆಯನ್ನು ಕೂಡಿಹಾಕುವ ಮೂಲಕ ಚಿರತೆಗಳಿಗೆ ಅದು ಬೋನಲ್ಲ, ಜಾನುವಾರು ಕೊಟ್ಟಿಗೆ ಎಂಬ ಭಾವನೆ ಮೂಡಿಸಲಾಗುತ್ತಿದೆ. ಇದರಿಂದ ಬೋನಿಗೆ ನುಗ್ಗುವ ಚಿರತೆಗಳು ಬಂಧಿಯಾಗುತ್ತಿವೆ. ಕಳೆದ ಒಂದು ವಾರದಿಂದ ತಾಲೂಕಿನ ಹಕ್ಕಲಪುರ, ಕಂದೇಗಾಲ ಹಾಗೂ ಪಡಗೂರಿನಲ್ಲಿ ಮೂರು ಚಿರತೆಗಳು ಸೆರೆಯಾಗಿವೆ.

ಚಾಮುಲ್ ಅಧ್ಯಕ್ಷ ನಾಗೇಂದ್ರ ಪದಚ್ಯುತಿ

ಚಾಮರಾಜನಗರ, ಜ.27–ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ವೈ.ಸಿ.ನಾಗೇಂದ್ರ ವಿರುದ್ಧ ಒಕ್ಕೂಟದ 7 ನಿರ್ದೇಶಕರು ಅವಿಶ್ವಾಸ ಮಂಡನೆಗೊಳಿಸಿ ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸಿದ್ದಾರೆ.



ವೈ.ಸಿ.ನಾಗೇಂದ್ರ

ಕಳೆದ ಎರಡೂವರೆ ವರ್ಷಗಳ ಹಿಂದೆ ನಾಮನಿರ್ದೇಶಕರ ಬೆಂಬಲದೊಂದಿಗೆ ಅಧ್ಯಕ್ಷರಾಗಿದ್ದ ವೈ.ಸಿ.ನಾಗೇಂದ್ರ ಅವರನ್ನು ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿತ ನಿರ್ದೇಶಕರು ಒಗ್ಗೂಡಿ ಅಧ್ಯಕ್ಷ ಸ್ಥಾನದಿಂದ ಕೆಳಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವೈ.ಸಿ.ನಾಗೇಂದ್ರ ವಿರುದ್ಧ ಅವಿಶ್ವಾಸಗೊಳಿಸಿದ ಒಕ್ಕೂಟದ 7 ನಿರ್ದೇಶಕರು ಸಹಿ ಮಾಡಿ ಸಹಕಾರ ಸಂಘಗಳ ಉಪನಿಬಂಧಕರಿಗೆ ಮನವಿ ಸಲ್ಲಿಸಿದ್ದರು. ಇದರ ವಿರುದ್ಧ ಅಧ್ಯಕ್ಷರು ನ್ಯಾಯಾಲಯದ ಮೊರೆ ಹೋಗಿ ಒಂದು ತಿಂಗಳ ಕಾಲ ಅವಿಶ್ವಾಸ ನಿರ್ಣಯ ಸಭೆಗೆ ತಡೆಯಾಜ್ಞೆ ತಂದಿದ್ದರು. ಆದರೆ, ಪ್ರಸ್ತುತ ನ್ಯಾಯಾಲಯದ ತಡೆಯಾಜ್ಞೆ ಅವಧಿ ಮುಕ್ತಾಯವಾಗಿದೆ. ಹೀಗಾಗಿ, ಸೋಮವಾರ ಕುದೇರಿನಲ್ಲಿರುವ ಆಡಳಿತ ಮಂಡಳಿ ಕಚೇರಿಯಲ್ಲಿ ಸಹಕಾರ ಇಲಾಖೆ ಎ.ಆರ್.ಶೋಭಾ ಸಮ್ಮುಖದಲ್ಲಿ ಅಧ್ಯಕ್ಷರ ವಿರುದ್ಧ ಅವಿಶ್ವಾಸಕ್ಕೆ ನಿರ್ಣಯ ಸಭೆ ನಡೆಯಿತು.

ಸಭೆಯಲ್ಲಿ ಹಾಜರಿದ್ದ ಚಾಮುಲ್ ನಿರ್ದೇಶಕರಾದ ಹೆಚ್.ಎಂ. ನಂಜುಂಡಪ್ರಸಾದ್, ನಂಜುಂಡಸ್ವಾಮಿ, ಸದಾಶಿವಮೂರ್ತಿ, ಎಂ.ಪಿ.ಸುನೀಲ್, ಮಹದೇವಪ್ರಸಾದ್, ತಾರೀಕ್ ಅಹಮದ್ ಹಾಗೂ ಶೀಲಾ ಪುಟ್ಟರಂಗಶೆಟ್ಟಿ ಅಧ್ಯಕ್ಷರ ವಿರುದ್ಧ ಮತ ಚಲಾಯಿಸಿದರು. ಆದರೆ, ಸಭೆಗೆ ಅಧ್ಯಕ್ಷ ವೈ.ಸಿ.ನಾಗೇಂದ್ರ, ನಿರ್ದೇಶಕ ಎಚ್.ಎಸ್.ಬಸವರಾಜು ಗೈರಾಗಿದ್ದರು.

ಸಭೆಯಲ್ಲಿ ಸಹಕಾರ ಸಂಘಗಳ ಕಚೇರಿ ಅಧೀಕ್ಷಕ ನಾಗೇಂದ್ರ, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಡಾ.ರಾಜಕುಮಾರ್ ಇದ್ದರು.

ಸ್ವಾಮಿತ್ವ ಯೋಜನೆ ಯಶಸ್ಸಿಗೆ ಸಹಕರಿಸಬೇಕು

ಯಳಂದೂರು, ಜ.27–ಸ್ವಾಮಿತ್ವ ಯೋಜನೆ ಯಶಸ್ಸಿಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಕಟ್ನವಾಡಿ ಗ್ರಾಮದಲ್ಲಿ ಸ್ವಾಮಿತ್ವ ಯೋಜನೆಯಡಿ ಡ್ರೋನ್ ಸರ್ವೇ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸ್ವಾಮಿತ್ವ ನಾವು ವಾಸ ಮಾಡುವ ಮನೆಗಳಿಗೆ ಹಕ್ಕು ನಿರ್ಧರಿಸುವ ನಕ್ಷೆಯನ್ನು ತಯಾರು ಮಾಡುವ ಯೋಜನೆಯಾಗಿದೆ. ಈ ಯೋಜನೆಯ ಮೂಲಕ ಆಸ್ತಿ ಸಮೀಕ್ಷೆ ಮಾಡಿ ದಾಖಲೆ ಮಾಡಿಕೊಡಲಾಗುವುದು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಉಂಟಾಗುವ ಆಸ್ತಿ ಸಂಬಂಧಿತ ವಿವಾದ ಕಡಿಮೆಯಾಗಲಿದೆ. ಗ್ರಾಮೀಣ ಭಾಗದ ಜನರು ಆಸ್ತಿ, ಸಾಲ ಮತ್ತು ಇತರೆ ಸೌಲಭ್ಯ ಪಡೆಯಲು ಸಹಕಾರಿಯಾಗಲಿದೆ ಎಂದರು.

31 ಜಿಲ್ಲೆಗಳ 1.4 ಲಕ್ಷ ಚ.ಕಿ.ಮೀ ಪ್ರದೇಶವನ್ನು ಡ್ರೋನ್ ಮೂಲಕ ಸರ್ವೆ ಮಾಡಿ ಗ್ರಾಮೀಣ ವಸತಿ, ಆಸ್ತಿಯ ಭೂಮಿ ಹಕ್ಕು ದಾಖಲೆಗಳನ್ನು ರಾಜ್ಯ ಭೂ ದಾಖಲೆಗಳ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಸಿದ್ಧಪಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವ ಯೋಜನೆಯಾಗಿದೆ ಎಂದು ತಿಳಿಸಿದರು.



ಡ್ರೋನ್ ಸರ್ವೇ ಕಾರ್ಯಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

ಸರ್ವೆ ನಂಬರ್‌ಗಳಿಗೆ ಅಳತೆ ಮತ್ತು ಮಾಲೀಕತ್ವದ ಬಗ್ಗೆ ಆರ್‌ಟಿಸಿ, ಆಕಾರ್ ಬಂದ್, ಅಟ್ಲಾಸ್, ಟಿಪ್ಪಣಿಗಳು ಇಲಾಖೆಯಲ್ಲಿ ಲಭ್ಯವಿದೆ. ಆದರೆ, ಗ್ರಾಮ ನಕಾಶೆಯಲ್ಲಿರುವ ಗ್ರಾಮ ಠಾಣಾ ಪ್ರದೇಶಗಳಲ್ಲಿ ಜನವಸತಿ ಗ್ರಾಮೀಣ ಆಸ್ತಿಗಳಿಗೆ ನಿಖರವಾದ ಹಕ್ಕು ಹಾಗೂ ಅಳತೆ ದಾಖಲೆಗಳು ಇರುವುದಿಲ್ಲ. ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಸ್ವಾಮಿತ್ವ ಯೋಜನೆ ಜಾರಿಗೆ ತರಲಾಗಿದೆ ಎಂದರು.

ಗ್ರಾಪಂ ಅಧ್ಯಕ್ಷೆ ದೊಡ್ಡತಾಯಮ್ಮ, ಸದಸ್ಯರಾದ ಮಲ್ಲಣ್ಣ, ಮಮತಾ ರಾಜ್, ಮಹೇಂದ್ರ, ಪ್ರಸಾದ್, ಮಾಜಿ ಸದಸ್ಯ ದೊರೆಸ್ವಾಮಿ, ನಾಡಗೌಡರಾದ ಮಹದೇವೇ ಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ತಾಲೂಕು ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್ ಇತರರಿದ್ದರು.

ಗಣರಾಜ್ಯೋತ್ಸವದಲ್ಲಿ ಪ್ರಮಾಣಪತ್ರ ವಿತರಣೆ...



ಚಾಮರಾಜನಗರ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ವತಿಯಿಂದ ನಡೆದ ಗಣರಾಜ್ಯೋತ್ಸವದಲ್ಲಿ ಅಪಘಾತದಲ್ಲಿ ಮರಣ ಹೊಂದಿದವರ ಅಂಗಾಂಗ ದಾನ ಮಾಡಿದ ಕುಟುಂಬದ ಸದಸ್ಯರಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಪ್ರಮಾಣ ಪತ್ರ ನೀಡಿದರು. ಸಂಸದ ಸುನೀಲ್ ಬೋಸ್, ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್. ಸುರೇಶ್, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾಧಿಕಾರಿ ಶಿಲ್ಪನಾಗ್ ಮತ್ತಿತರರಿದ್ದರು.

ಡೆತ್‌ನೋಟ್ ಬರೆದಿಟ್ಟು ಯುವತಿ ಆತ್ಮಹತ್ಯೆ

ಗುಂಡ್ಲುಪೇಟೆ, ಜ.27–ಪಕ್ಕದ ಮನೆಯವರ ಮಾನಸಿಕ ಕಿರುಕುಳದಿಂದ ಬೇಸತ್ತಿರುವುದಾಗಿ ಡೆತ್‌ನೋಟ್ ಬರೆದಿಟ್ಟು ಯುವತಿ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಚನ್ನಮಲ್ಲಿಪುರ ಗ್ರಾಮದಲ್ಲಿ ನಡೆದಿದೆ.



ಕವನ

ಗ್ರಾಮದ ಬಸವರಾಜಾಚಾರಿ ಅವರ ಪುತ್ರಿ ಕವನ (24) ಆತ್ಮಹತ್ಯೆ ಮಾಡಿಕೊಂಡ ಯುವತಿ.

ಪಾಲಕರು ಕೂಲಿಗೆ ಹೋಗಿದ್ದ ಸಂದರ್ಭದಲ್ಲಿ ಮನೆಯಲ್ಲಿದ್ದ ಕವನ ತನ್ನ ಅಕ್ಕ ಕಾವ್ಯಳಿಗೆ ಕರೆ ಮಾಡಿ, ನಾನು ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ತಿಳಿಸಿದ್ದಾಳೆ. ಅಕ್ಕ ಕಾವ್ಯ ಮತ್ತೆ ಕರೆ ಮಾಡಿದರೂ ಸ್ವೀಕರಿಸಿಲ್ಲ. ತಕ್ಷಣ ಕಾವ್ಯ ತಾಯಿ ಗಾಯತ್ರಿಗೆ ಕರೆ ಮಾಡಿ ಮೊದಲು ಮನೆಗೆ ಹೋಗಿ ನೋಡಿ, ಕವನ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಿಳಿಸಿದ್ದಾಳೆ ಎಂದು ಹೇಳಿದ್ದಾಳೆ.

ತಕ್ಷಣ ತಾಯಿ ಮನೆಗೆ ಬಂದು ಬಾಗಿಲನ್ನು ಒಡೆದು ಒಳಗೆ ಹೋಗಿ ನೋಡಿದಾಗ ಮಗಳು ಕವನ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಕೂಡಲೇ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಕರೆತಂದು ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ.

ನನ್ನ ಸಾವಿಗೆ ಪಕ್ಕದ ಮನೆಯ ನಾಲ್ವರು ಕಾರಣ ಎಂದು ಡೆತ್‌ನೋಟ್ ಮತ್ತು ಮನೆಯ ಬಾಗಿಲಿನ ಮೇಲೂ ಬರೆದಿದ್ದಾಳೆ. ನನ್ನ ಮಗಳ ಸಾವಿಗೆ ಪಕ್ಕದ ಮನೆಯವರೇ ಕಾರಣ ಎಂದು ತಾಯಿ ಗಾಯತ್ರಿ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಡಿ.ಎಸ್.ಶಿವಣ್ಣ ನಿಧನ



ಚಾಮರಾಜನಗರ, ಜ.27–ತಾಲೂಕು ದೇಮಹಳ್ಳಿ ಗ್ರಾಮದ ಡಿ.ಎಸ್.ಶಿವಣ್ಣ (77) ಸೋಮವಾರ ಸಂಜೆ ನಿಧನರಾಗಿದ್ದಾರೆ.

ಮೃತರು ಪತ್ನಿ, ಪುತ್ರ ಶಿವಪುರ ಪಿಡಿಓ ಡಿ.ಎಸ್.ರವಿ, ಮೊಮ್ಮಕ್ಕಳು, ಅಪಾರ ಬಂಧು–ಬಳಗದವರು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 1 ಗಂಟೆಗೆ ದೇಮಹಳ್ಳಿ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜೀವ್ ಗಾಂಧಿ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ರಾಜೀವ್‌ನಗರದಲ್ಲಿರುವ ರಾಜೀವ್ ಗಾಂಧಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಚಿತ್ರದಲ್ಲಿ ಮುಖ್ಯ ಶಿಕ್ಷಕರಾದ ಪ್ರಸನ್ನಕುಮಾರ್ ಎಂ.ಎಸ್., ಸ್ಥಳೀಯ ಯುವ ಮುಖಂಡ ಚಂದನ್, ಸಹ ಶಿಕ್ಷಕ ವೃಂದ ಹಾಗೂ ಅಡುಗೆ ಸಿಬ್ಬಂದಿಯನ್ನು ಕಾಣಬಹುದು.

ಆಮ್ ಆದ್ಮಿ ಪಕ್ಷದಿಂದ ಗಣರಾಜ್ಯೋತ್ಸವ



ಮೈಸೂರಿನ ಆಮ್ ಆದ್ಮಿ ಪಕ್ಷದ ವತಿಯಿಂದ ಗಣರಾಜ್ಯೋತ್ಸವ ಆಚರಿಸಲಾಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಾಳವಿಕ ಗುಬ್ಬಿವಾಣಿ ಧ್ವಜಾರೋಹಣ ನೆರವೇರಿಸಿದರು. ಜಿಲ್ಲಾಧ್ಯಕ್ಷ ರಂಗಯ್ಯ, ನಗರ ಘಟಕದ ಅಧ್ಯಕ್ಷ ಸೋಮಶೇಖರ್, ಯುವಘಟಕದ ಅಧ್ಯಕ್ಷ ಅನಂತರಾಜ್ ಸೂರ್ಯ, ಭಾಸ್ಕರ್, ಮಿರ್ಜಾ ವೇಣುಗೋಪಾಲ್, ಶ್ರೀಧರ್, ಪುರ ಪ್ರಮುಖರಾದ ದ್ವಾರಕಾಕೃಷ್ಣ ಮತ್ತಿತರರು ಭಾಗವಹಿಸಿದ್ದರು.

ನೃಪತುಂಗ ಕನ್ನಡ ಶಾಲೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಶಾಲೆಯಲ್ಲಿ 76ನೇ ಗಣರಾಜ್ಯ ದಿನವನ್ನು ಆಚರಿಸಲಾಯಿತು. ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಕಾರ್ಯದರ್ಶಿ ಸವಿತಾ ಪ ಮಲ್ಲೇಶ್, ಸಂಸ್ಥೆಯ ಉಪಾಧ್ಯಕ್ಷ ಸುದರ್ಶನ, ಕಾರ್ಯದರ್ಶಿ ಪ್ರೊ. ಹೆಚ್.ಜಿ.ಕೃಷ್ಣಪ್ಪ, ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಶೀಲಾ ಮತ್ತು ಶ್ರೀಮತಿ ಸೌಮ್ಯಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಕೆ.ಜಿ.ಕೊಪ್ಪಲಿನ ಕನ್ನಡ ಗೆಳೆಯರ ಬಳಗದಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಕೆ.ಜಿ.ಕೊಪ್ಪಲಿನ ಕನ್ನಡ ಗೆಳೆಯರ ಬಳಗದ ಸಂಘದ ಕಚೇರಿಯ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಇಂಜಿನಿಯರ್ ಕಾರ್ತೀಕ್‌ನಾಯಕ್ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಕೆ.ಜಿ.ಕೊಪ್ಪಲು ಗೆಳೆಯರ ಬಳಗದ ಅಧ್ಯಕ್ಷ ಭೈರಪ್ಪ, ಗೌರವ ಕಾರ್ಯದರ್ಶಿ ನಾಗರತಳ್ಳಿ ನಿಂಗರಾಜು, ಉಪನ್ಯಾಸಕ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಸದಸ್ಯರಾದ ಮಹದೇವು, ಉಮೇಶ್, ದೀಪ್ತಿ ಹರ್ಷಿತಾ, ಹರಿಣಿ, ಮನ್ವಿತ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂಸ್ತಾನ್ ಕಾಲೇಜಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಹಿಂದೂಸ್ತಾನ್ ಕಾಲೇಜಿನಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಪ್ರಾಂಶುಪಾಲರಾದ ಡಾ.ಸಿ.ಜೆ.ಪ್ರಿಯ, ಬೋಧಕರು, ಬೋಧಕೇತರ ಬಳಗ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಮಹರ್ಷಿ ವಿದ್ಯಾಸಂಸ್ಥೆಯ ಸಂಯೋಜಕ ತೇಜಸ್ ಬಿ.ಶಂಕರ್, ಸಂಸ್ಥೆಯ ಪ್ರಾಚಾರ್ಯ ಗೋಪಾಲಸ್ವಾಮಿ, ಎ.ಕುಮಾರ್, ಕಾಲೇಜು ವಿಭಾಗದ ಪ್ರಾಚಾರ್ಯ ಮಹದೇವಸ್ವಾಮಿ ಉಪಸ್ಥಿತರಿದ್ದರು.

ಬೆಳಕು ವಾತ್ಸಲ್ಯ ಧಾಮದಿಂದ ಗಣರಾಜ್ಯೋತ್ಸವ



ಮೈಸೂರಿನ ಕುವೆಂಪುನಗರ ಎಂ ಬ್ಲಾಕ್‌ನಲ್ಲಿರುವ ಬೆಳಕು ವಾತ್ಸಲ್ಯ ಧಾಮದ ಹಿರಿಯ ನಾಗರಿಕರಿಗೆ ಹಣ್ಣು ಹಂಪಲು ಹಾಗೂ ದಿನಸಿ ಸಾಮಗ್ರಿಗಳನ್ನು ವಿತರಿಸುವ ಮೂಲಕ 76ನೇ ಗಣರಾಜ್ಯೋತ್ಸವ ಹಾಗೂ ವೀರ ಸೇನಾನಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಲಿದಾನ ಸ್ಮರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ನಗರ ಜೆ.ಡಿ.ಎಸ್. ಕಾರ್ಯಾಧ್ಯಕ್ಷ ಎಸ್ ಪ್ರಕಾಶ್ ಪ್ರಿಯಾದರ್ಶನ್, ಸುಬ್ರಮಣಿ, ವೀರಭದ್ರ ಸ್ವಾಮಿ, ಯಶ್ವಂತ್ ಕುಮಾರ್, ಮಹದೇವ್, ಶ್ರೀಧರ್, ಮಹೇಶ್, ಎಸ್.ಪಿ.ಅಕ್ಷಯ್ ಪ್ರಿಯಾದರ್ಶನ್, ಹರ್ಷಿತ್ ಎಸ್ ನಾಗೇಶ್ ಇತರರು ಹಾಜರಿದ್ದರು.

ನೈಜ ಕಾರ್ಮಿಕರಿಗೆ ಸೌಲಭ್ಯ ತಲುಪಿಸಿ, ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಿ

ಕಟ್ಟಡ ಕಾರ್ಮಿಕರಿಗೆ ಕಿಟ್ ವಿತರಣೆ, ಆರೋಗ್ಯ ತಪಾಸಣೆ, ಕಾರ್ಯಾಗಾರ



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕಟ್ಟಡ ಕಾರ್ಮಿಕರಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಬಿ.ಜಿ. ದಿನೇಶ್ ಕಿಟ್‌ಗಳನ್ನು ವಿತರಿಸಿದರು.

ಮೈಸೂರು, ಜ. 27– ಯಾವುದೇ ಸವಲತ್ತುಗಳಾದರೂ ನೈಜ ಕಾರ್ಮಿಕರಿಗೆ ತಲುಪಿಸಬೇಕು. ಜೊತೆಗೆ ಕಟ್ಟಡ ಕಾರ್ಮಿಕರು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾಯಾಧೀಶ ಬಿ.ಜಿ. ದಿನೇಶ್ ಸಲಹೆ ಮಾಡಿದರು.

ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ಕಾರ್ಮಿಕರ ಸಂಘವು ನಗರದ ವಿನೋಬ ರಸ್ತೆಯ ನಂಜರಾಜ ಬಹದ್ದೂರ್ ಛತ್ರದಲ್ಲಿ ಭಾನುವಾರ ಕಾರ್ಮಿಕ ಇಲಾಖೆಯ ಸಹಯೋಗದೊಂದಿಗೆ ಏರ್ಪಡಿಸಿದ್ದ ಕಟ್ಟಡ ಕಾರ್ಮಿಕರಿಗೆ ಕಿಟ್ ವಿತರಣೆ, ಆರೋಗ್ಯ ತಪಾಸಣೆ ಹಾಗೂ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಮಿಕ ಇಲಾಖೆಯ ಮೂಲಕ ಸರ್ಕಾರ ನೀಡುವ ಸೌಲಭ್ಯಗಳ ಬಗ್ಗೆ ಕಟ್ಟಡ ಕಾರ್ಮಿಕರು ಸೇರಿದಂತೆ ಎಲ್ಲಾ ಬಗೆಯ ಕಾರ್ಮಿಕರಿಗೂ ಮಾಹಿತಿ ನೀಡಬೇಕು. ನೈಜ ಕಾರ್ಮಿಕರನ್ನು ನೋಂದಣಿ ಮಾಡಿಸಬೇಕು. ಯಾರಾದರೂ ಸುಳ್ಳು ದಾಖಲೆ ನೀಡಿ ಸೇರಿದ್ದರೆ ಪಟ್ಟಿಯಿಂದ ತೆಗೆಸಬೇಕು. ಯಾವುದೇ ಸೌಲಭ್ಯವಾದರೂ ಸದುಪಯೋಗ ಆಗಬೇಕೇ ಹೊರತು ದುರುಪಯೋಗ ಆಗಬಾರದು ಎಂದರು.

ಯಾವುದೇ ಕಾರ್ಮಿಕನ ವಾರ್ಷಿಕ ಆದಾಯ 3 ಲಕ್ಷ ರೂ. ಒಳಗಿದ್ದಲ್ಲಿ ಆತನ ಯಾವುದೇ ರೀತಿಯ ಪ್ರಕರಣಗಳ ಬಗ್ಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಉಚಿತ ಕಾನೂನು ನೆರವು ಒದಗಿಸುತ್ತದೆ. ಇದಕ್ಕೆ ಯಾವುದೇ ಶುಲ್ಕ ನೀಡಬೇಕಾಗಿಲ್ಲ. ಸಹಾಯವಾಣಿಗೆ ಕರೆ ಮಾಡಿದರೆ ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಕೀಲರು ಲಭ್ಯವಿದ್ದು, ಅಗತ್ಯ ಮಾಹಿತಿ ನೀಡುತ್ತಾರೆ ಎಂದರು.

ಶ್ರಮಿಕ ವರ್ಗಕ್ಕೆ ಬರುವ ಕಾರ್ಮಿಕರಿಗೆ ದೈಹಿಕ ಆರೋಗ್ಯವೂ ಮುಖ್ಯ, ಆದ್ದರಿಂದ ಬೀಡಿ, ಸಿಗರೇಟು,. ಗುಟ್ಕಾ ಮೊದಲಾದ ದುರಭ್ಯಾಸ ತ್ಯಜಿಸಬೇಕು. ಇಲ್ಲದಿದ್ದಲ್ಲಿ ಕ್ಯಾನ್ಸರ್ ಮತ್ತಿತರ ರೋಗಗಳಿಗೆ ಬಲಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಿಮ್ಮನ್ನು ನಂಬಿ ಕುಟುಂಬ ಇರುತ್ತದೆ. ಆದ್ದರಿಂದ ಒಳ್ಳೆಯ ಹವ್ಯಾಸ ರೂಢಿಸಿಕೊಳ್ಳಬೇಕು. ಪೌಷ್ಟಿಕ ಆಹಾರ ಸೇವಿಸಬೇಕು ಎಂದು ಸಲಹೆ ಮಾಡಿದರು.

ಸಹಾಯಕ ಕಾರ್ಮಿಕ ಆಯುಕ್ತೆ ಎಸ್. ಆರ್. ವೀಣಾ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್‌ಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನಗರ ವಾಹನ ದುರಸ್ತಿಗಾರರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಮಹೇಶ್ ರಾಜ್ ಅರಸ್, ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷೆ ಭಾನುಮೋಹನ್, ಹಿರಿಯ ಕಾರ್ಮಿಕ ನಿರೀಕ್ಷಕರಾದ ಬಿ. ಮಂಗಳಗೌರಿ, ಎಂ.ಸಿ. ಮಾದಪ್ಪ, ಎಚ್.ಪಿ. ಜಯಣ್ಣ,. ವೀಣಾ, ವಿಶಾಲ ಮೈಸೂರು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಶಿವಣ್ಣ, ಶ್ರೀ ಸಿದ್ದರಾಮೇಶ್ವರ ಸ್ವಾಮಿ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಚಂದ್ರು ಮುಖ್ಯ ಅತಿಥಿಗಳಾಗಿದ್ದರು.

ಸಂಘದ ಅಧ್ಯಕ್ಷ ಎಚ್.ಜಿ. ಲೋಕೇಶ್, ಉಪಾಧ್ಯಕ್ಷ ಆರ್. ನಾಗರಾಜು, ಕಾರ್ಯದರ್ಶಿ ಆರ್. ಚಂದ್ರಶೇಖರ್, ಖಜಾಂಚಿ ಕೆ.ಜಿ. ಶ್ರೀನಿವಾಸ, ಸಹ ಕಾರ್ಯದರ್ಶಿ ಮಾದಪ್ಪ, ನಿರ್ದೇಶಕರಾದ ಎಂ. ಸಿದ್ದರಾಜು, ಎಂ. ಚಂದ್ರಶೇಖರ್, ಕುಮಾರ್, ಎಂ. ರಾಘವೇಂದ್ರ, ರಮೇಶ್, ಎಚ್.ಎಸ್. ಚಂದ್ರಶೇಖರ್, ಸೈಯದ್ ಇಮ್ರಾನ್, ಕೆ.ಪಿ. ಶ್ರೀನಿವಾಸ, ಬಿ. ರವಿ, ಸಿ. ನಾಗೇ ಗೌಡ, ಉಮಾಶಂಕರ ಸಿಂಗ್, ಕಾನೂನು ಸಲಹೆಗಾರ ಬಿ.ಎಂ. ಶಶಿಕಿರಣ ಉಪಸ್ಥಿತರಿದ್ದರು. ಕಲಾವಿದ ಯೋಗೇಶ್ ಪ್ರಾರ್ಥಿಸಿದರು.

ಸಂಗೊಳ್ಳಿ ರಾಯಣ್ಣನ ದೇಶಪ್ರೇಮ ಇಂದಿನ ಪೀಳಿಗೆಗೆ ಮಾದರಿ



ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು.

ಮೈಸೂರು, ಜ. 27– ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಿತರಕ್ಷಣಾ ಸಮಿತಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ, ಕುರುಬಾರಹಳ್ಳಿ, ಮೈಸೂರು ಇವರ ಆಶ್ರಯದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರವರ 194ನೇ ಹುತಾತ್ಮ ದಿನಾಚರಣೆ ಹಾಗೂ ಗಣರಾಜ್ಯೋತ್ಸವ ದಿನಾಚರಣೆ ಜರುಗಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಣ್ಣ, ಮುಖಂಡರಾದ ಕ್ಯಾಂಟೀನ್ ನಾಗಣ್ಣ, ಸಮಿತಿಯ ಅಧ್ಯಕ್ಷರಾದ ಟಿ. ಮಂಜುನಾಥ್, ಉಪಾಧ್ಯಕ್ಷ ಮಹದೇವು, ಆಶ್ರಯ ಸಮಿತಿ ಸದಸ್ಯ ಕುರುಬಾರಹಳ್ಳಿ ಸೋಮಶೇಖರ್, ರವಿ, ಧನಂಜಯ, ಕುರುಬಾರಳ್ಳಿ ಪ್ರಕಾಶ್, ಕ್ಯಾಂಟೀನ್ ರವಿ, ಚಂದ್ರಶೇಖರ್, ಪವನ್ ಚಂಗಪ್ಪ ವಿಶ್ವನಾಥ್, ನಜರ್‌ಬಾದ್ ನಟರಾಜು, ಡೈರಿ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು. ಈ ವೇಳೆ ಕುರುಬಾರಳ್ಳಿ ಗ್ರಾಮದ ನಿವೃತ್ತ ಸೈನಿಕರಾದ ಎಂ. ವೆಂಕಟೇಶ್, ಕೊರೊನಾ ಸಂದರ್ಭದಲ್ಲಿ ಹಗಲಿರುಳು ದುಡಿದ ಕುರುಬಾರಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ನವೀನ್.ಬಿ.ಆರ್, ನಿವೃತ್ತ ಪೊಲೀಸ್ ಅಧಿಕಾರಿ ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು.

ಸಾಹುಕಾರಹುಂಡಿಯಲ್ಲಿ ಸಿಕ್ಕ ನವಜಾತ ಶಿಶು ಸಾವು

ಮೈಸೂರು, ಜ.27(ಎಸ್‌ಬಿಡಿ)– ಬಾವಿ ಪಕ್ಕ ಪತ್ತೆಯಾದ ನವಜಾತ ಶಿಶು, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರು ತಾಲೂಕಿನ ಸಾಹುಕಾರ ಹುಂಡಿ ಗ್ರಾಮದ ಬಾವಿ ಪಕ್ಕದಲ್ಲಿ ಬಟ್ಟೆ ಸುತ್ತಿದ್ದ ನವಜಾತ ಗಂಡು ಶಿಶು ಭಾನುವಾರ ಬೆಳಗ್ಗೆ ಸುಮಾರು 8 ಗಂಟೆ ಸಮಯದಲ್ಲಿ ಪತ್ತೆಯಾಗಿತ್ತು. ಈ ಬಗ್ಗೆ ಅಂಗನವಾಡಿ ಕಾರ್ಯಕರ್ತೆ ರೂಪಾ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಹಿರಿಯ ಮೇಲ್ವಿಚಾರಕಿ ಪಾರ್ವತಿ ಅವರಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಅವರ ಸೂಚನೆಯಂತೆ ಆಶಾ ಕಾರ್ಯಕರ್ತೆ ರುಕ್ಮಿಣಿ ಅವರು ಆಂಬುಲೆನ್ಸ್‌ನಲ್ಲಿ ನವಜಾತ ಶಿಶುವನ್ನು ಚೆಲುವಾಂಬ ಆಸ್ಪತ್ರೆಗೆ ಕರೆತಂದಿದ್ದಾರೆ. ಆದರೆ ಪರೀಕ್ಷಿಸಿದ ವೈದ್ಯರು, ನವಜಾತ ಶಿಶು ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ.

ಈ ಸಂಬಂಧ ಶಿಶು ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಪಾರ್ವತಿ ಅವರು ನೀಡಿದ ದೂರಿನನ್ವಯ ಇಲವಾಲ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ನವಜಾತ ಶಿಶುವಿನ ಪೋಷಕರ ಪತ್ತೆಗೆ ಕ್ರಮ ವಹಿಸಿದ್ದಾರೆ.

ಅಪಾಯಕಾರಿ ವ್ಹೀಲಿಂಗ್; ಯುವಕನ ವಿರುದ್ಧ ಪ್ರಕರಣ

ಮೈಸೂರು, ಜ.27(ಎಸ್‌ಬಿಡಿ)– ರಿಂಗ್ ರಸ್ತೆಯಲ್ಲಿ ಸ್ಕೂಟರ್ ವ್ಹೀಲಿಂಗ್ ಮಾಡುತ್ತಿದ್ದ ಯುವಕನ ವಿರುದ್ಧ ಮೈಸೂರಿನ ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಿಂಗ್ ರಸ್ತೆಯಲ್ಲಿ ಕರುಣಾಕರ ಆಸ್ಪತ್ರೆ ಜಂಕ್ಷನ್ ಕಡೆಯಿಂದ ರಾಜೀವ್‌ನಗರ ವಾಟರ್ ಟ್ಯಾಂಕ್ ಜಂಕ್ಷನ್ ಕಡೆಗೆ ಕಲ್ಯಾಣಗಿರಿ ಬಡಾವಣೆಯ ಉಸ್ಮಾನ್ ಷರೀಫ್ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ. ವಿಷಯ ತಿಳಿದ ಸಿದ್ಧಾರ್ಥ ಸಂಚಾರ ಠಾಣೆ ಪೊಲೀಸರು ಆತನ ಸ್ಕೂಟರ್ ವಶಕ್ಕೆ ಪಡೆದು, ಪ್ರಕರಣ ದಾಖಲಿಸಿದ್ದಾರೆ.

ಕಾಳಿಸಿದ್ದನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ



ಕಾಳಿಸಿದ್ದನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಜೈಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅವರನ್ನು ಉಪಾಧ್ಯಕ್ಷ ಮಾಯಣ್ಣ, ನಿಕಟಪೂರ್ವ ಅಧ್ಯಕ್ಷ ಕೃಷ್ಣ, ನಿರ್ದೇಶಕರಾದ ಬಸವರಾಜು, ಮಾದೇವು, ದೊಡ್ಡಪ್ಪಯ್ಯ, ಗೌರಮ್ಮ, ಪ್ರೇಮ, ಎಸ್.ಗಣೇಶ್ ಬೆಂಬಲಿಸಿದ್ದರು. ತಮ್ಮ ಆಯ್ಕೆಗೆ ಸಹಕಾರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಅಭಿಲಾಷ್, ಕಾಂಗ್ರೆಸ್ ಮುಖಂಡರಾದ ಮೆಲ್ಲಹಳ್ಳಿ ರವಿ ಎಂ.ಗೌಡ, ಕಾಡನಹಳ್ಳಿ ಸ್ವಾಮಿಗೌಡ, ಗ್ರಾಮದ ಯಜಮಾನರಾದ ಕೃಷ್ಣ, ಚಿಕ್ಕಮಾದೇವು, ಚೆನ್ನೇಗೌಡ, ಶಿವಣ್ಣ, ಕೃಷ್ಣ, ಮಹದೇವು, ಶಿವಣ್ಣ, ಮೈಮುಲ್ ವಿಸ್ತರಣಾಧಿಕಾರಿ ಡಾ.ಎಂ.ಪರಮೇಶ್ ಇನ್ನಿತರರು ಉಪಸ್ಥಿತರಿದ್ದರು.

ದೀಪಾ ಶಾಲೆಯಲ್ಲಿ ಗಣರಾಜ್ಯೋತ್ಸವ



ಮೈಸೂರಿನ ರೂಪಾನಗರದ ದೀಪಾ ಶಾಲಾ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಮಹಾರಾಣಿ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ಹೇಮಚಂದ್ರ ಪಿ.ಎನ್., ಸಂಸ್ಥೆಯ ಅಧ್ಯಕ್ಷ ಎಂ.ರಾಮಪ್ಪ, ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆಯ ಉಪಾಧ್ಯಕ್ಷ ಸದಾಶಿವ ಪೂಜಾರಿ, ಕಾರ್ಯದರ್ಶಿ ಸುಂದರ್ ವಿ.ಎನ್., ನಿರ್ದೇಶಕ ಬಾಲಕೃಷ್ಣ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪ್ರಣೇತಾ ಎರ್ಮಾಳ್, ದೀಪಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶಿಲ್ಪಾ ಜಗದೀಶ್, ಬೋಧಕರು ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

ಲಕ್ಷ್ಮಿದೇವಮ್ಮ ಹೆರಿಗೆ ಆಸ್ಪತ್ರೆಯಲ್ಲಿ ಗಣರಾಜ್ಯೋತ್ಸವ



ಬಡವರ ಬಂಧು ಅಭಿಮಾನಿಗಳ ಸಂಘದಿಂದ ಲಕ್ಷ್ಮಿದೇವಮ್ಮ ಹೆರಿಗೆ ಆಸ್ಪತ್ರೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಆಸ್ಪತ್ರೆ ನಿರ್ದೇಶಕ ಪಡುವಾರಹಳ್ಳಿ ಪಾಪಣ್ಣ, ಕೃಷ್ಣ, ಡಾ.ಕೆಂಪೇಗೌಡ, ರೂಪ, ನಾಗರಾಜು, ಸಿಬ್ಬಂದಿ ಇದ್ದರು.

ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯದಲ್ಲಿ ಗಣರಾಜ್ಯೋತ್ಸವ



ಮೈಸೂರಿನ ನರಸಿಂಹರಾಜ ಮೊಹಲ್ಲಾದ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯದ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ನಿಲಯದ ಕಾರ್ಯದರ್ಶಿ ಎಂ.ಪಾಟೀಲ್, ಖಜಾಂಚಿ ಪುಟ್ಟರಾಜು, ವಾರ್ಡನ್ ಬಿ.ಪ್ರಸಾದ್, ಆಡಳಿತ ಮಂಡಳಿ ಸದಸ್ಯರಾದ ಪುಟ್ಟಯ್ಯ, ಎಂ.ಸತ್ಯಪ್ರಕಾಶ್, ಜಿ.ಮುರಳೀಧರ, ಶಂಕರ್ ನಾರಾಯಣ್, ಸುಬಾಶ್, ಜೆ.ಮಹದೇವ್, ಅಪ್ಸರ್ ಪಾಷ, ಎಂ.ಕೃಷ್ಣಮೂರ್ತಿ ಮತ್ತಿತರರು ಹಾಜರಿದ್ದರು.

ಮಹಾಜನ ಕಾಲೇಜಿನಲ್ಲಿ ಗಣರಾಜ್ಯೋತ್ಸವ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಬೆಂಗಳೂರಿನ ಭಾರತೀಯ ವಾಯುಸೇನೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಎನ್.ಆರ್.ರವಿ ಧ್ವಜಾರೋಹಣ ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಸ್ನಾತಕೋತ್ತರ ಕೇಂದ್ರ ನಿರ್ದೇಶಕರಾದ ಡಾ.ಸಿ.ಕೆ. ರೇಣುಕಾರ್ಯ, ಎನ್‌ಸಿಸಿ ಫ್ಲೈಯಿಂಗ್ ಆಫೀಸರ್ ಡಾ.ಪುಷ್ಪರಾಣಿ ಪಿ.ಜಿ. ಹಾಗೂ ಎನ್‌ಸಿಸಿ ಭೂದಳದ ಸಿಟಿಓ ಶ್ರೀಮತಿ ಗಾಯತ್ರಿ ಹಾಜರಿದ್ದರು.

ಶಾರದಾವಿಲಾಸ ವಿದ್ಯಾಸಂಸ್ಥೆಯಲ್ಲಿ 76ನೇ ಗಣರಾಜ್ಯೋತ್ಸವ ಆಚರಣೆ

ವಿಜ್ಞಾನದ ಮುನ್ನಡೆಯಿಂದ ದೇಶದ ಪ್ರಗತಿ–ಪ್ರೊ.ಕೆ.ಎಸ್.ರಂಗಪ್ಪ

ಮೈಸೂರು, ಜ. 27– ಶಾರದಾವಿಲಾಸ ವಿದ್ಯಾಸಂಸ್ಥೆಯ ಆವರಣದಲ್ಲಿ ಭಾನುವಾರ 76ನೇ ಗಣರಾಜ್ಯೋತ್ಸವವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಕೆ.ಎಸ್.ರಂಗಪ್ಪ ಮಾತನಾಡಿ, ದೇಶ ಪ್ರಗತಿ ಹೊಂದುತ್ತಿದ್ದರೆ ವಿಜ್ಞಾನದ ಮುನ್ನಡೆಯೇ ಕಾರಣ. ಇಂದು ನಾವು ವಿಜ್ಞಾನದಲ್ಲಿ ಅನೇಕ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿ ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರಿ ಮುನ್ನಡೆ ಸಾಧಿಸುತ್ತಿದ್ದೇವೆ. ಇದಕ್ಕೆ ವಿಜ್ಞಾನಿಗಳು ಹಾಗೂ ವಿಜ್ಞಾನದ ಹೊಸ ಹೊಸ ತಂತ್ರಜ್ಞಾನಗಳೇ ಕಾರಣ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಆಡಳಿತ ಮಂಡಳಿಯ ಹಿರಿಯ ಸದಸ್ಯರಾದ ಉದ್ಯಮಿ ಎಸ್.ಎಲ್.ರಾಮಚಂದ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ರಾಷ್ಟ್ರೀಯ ಹಬ್ಬಗಳಲ್ಲಿ ಗಣರಾಜ್ಯೋತ್ಸವವನ್ನು ಸಂವಿಧಾನದ ದಿನವಾಗಿ ಆಚರಿಸುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಸ್ವಾತಂತ್ರ್ಯ ಹಾಗೂ ಸಂವಿಧಾನ ಇಲ್ಲದಿದ್ದರೆ ನಾವೆಲ್ಲರೂ ಒಂದಾಗಿ ಬಾಳಲು ಸಾಧ್ಯವಾಗುತ್ತಿರಲಿಲ್ಲ ಎಂದು ತಿಳಿಸಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ದಿನೇಶ, ಆಡಳಿತ ಮಂಡಳಿಯ ಹಿರಿಯ ಸದಸ್ಯರಾದ ಆರ್.ನರಸಿಂಹ, ನಾಗೇಶ್ ಹನಸೋಗೆ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ವಿದ್ಯಾರ್ಥಿ ಸಾಗರ್ ಪ್ರಾರ್ಥಿಸಿದರೆ, ಶಾರದಾವಿಲಾಸ ಕಾಲೇಜಿನ ಪ್ರಾಂಶುಪಾಲರಾದ ಎಂ.ದೇವಿಕಾ ಸ್ವಾಗತಿಸಿದರು. ಡಾ.ಹನುಮಂತಚಾರ್ ಜೋಶಿ ಅತಿಥಿಗಳನ್ನು ಪರಿಚಯಿಸಿದರು. ಕಾನೂನು ಕಾಲೇಜಿನ ಡೀನ್ ಎ.ಎಂ.ಬೊಳ್ಳಮ್ಮ ವಂದಿಸಿದರು. ಡಾ.ಹೆಚ್.ಎನ್.ವಿಶ್ವನಾಥ್, ಡಾ.ಎಂ.ದೇವಿಕಾ ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಡಾ.ಕೆ.ಎಸ್.ರಂಗಪ್ಪ ಅವರನ್ನು ಸನ್ಮಾನಿಸಲಾಯಿತು.

ಸುತ್ತೂರು ಜಾತ್ರಾ ಮಹೋತ್ಸವಕ್ಕೆ ವರ್ಣರಂಜಿತ ಚಾಲನೆ

● ವಿವಿಧ ಕಾರ್ಯಕ್ರಮ ಉದ್ಘಾಟಿಸಿದ ಸಚಿವರು ● ಪ್ರೇಕ್ಷಕರ ಮನಸೂರೆಗೊಂಡ ಹಲವು ನಾಟಕಗಳು



ಸುತ್ತೂರಿನಲ್ಲಿ ಆರಂಭವಾದ ಶ್ರೀ ಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವವನ್ನು ಗಣ್ಯರು ಉದ್ಘಾಟಿಸಿದರು.

ನಂಜನಗೂಡು, ಜ.27– ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವಕ್ಕೆ ಭಾನುವಾರ ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಜನಸ್ತೋಮದ ನಡುವೆ ವರ್ಣರಂಜಿತ ಚಾಲನೆ ದೊರೆಯಿತು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ಮೊದಲಿಗೆ 76ನೇ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಧ್ವಜಾರೋಹಣ ನೆರವೇರಿಸಿದರು.

ಶಿವರಾತ್ರಿ ಶಿವಯೋಗಿಗಳ ಜಾತ್ರೆ ಭಾಗವಾದ ವಸ್ತು ಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯವನ್ನು ಆಲಗೂರು ಬಬಲೇಶ್ವರ ಪಂಚಮಸಾಲಿ ಜಗದ್ಗುರು ಪೀಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ವಸ್ತು ಪ್ರದರ್ಶನವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಿದರು. ಕೃಷಿ ಮೇಳವನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು. ಸಾಂಸ್ಕೃತಿಕ ಮೇಳವನ್ನು ನಗಾರಿ ಬಾರಿಸುವ ಮೂಲಕ ವಿಪಕ್ಷ ನಾಯಕ ಆರ್.ಅಶೋಕ್ ಉದ್ಘಾಟಿಸಿದರು. ಆರೋಗ್ಯ ತಪಾಸಣಾ ಶಿಬಿರವನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಉದ್ಘಾಟಿಸಿದರು. ದೋಣಿ ವಿಹಾರವನ್ನು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ರವಿಕುಮಾರ್ ಗಣಿಗ, ಎಂಎಲ್‌ಸಿ ದಿನೇಶ್ ಗೂಳಿಗೌಡ, ಅರುಣ್ ಶಹಾಪುರ, ಮಾಜಿ ಶಾಸಕರಾದ ನಾಗೇಂದ್ರ, ನಿರಂಜನ್ ಕುಮಾರ್, ಮೈಮುಲ್ ನಿರ್ದೇಶಕ ಓಂ ಪ್ರಕಾಶ್ ಪಾಲ್ಗೊಂಡಿದ್ದರು.

ಗದ್ದಿಗೆ ಆವರಣದಲ್ಲಿ ಬೆಳಗ್ಗೆ ನಾದಸ್ವರ, ವಚನ ಗಾಯನ, ಭಕ್ತಿಗೀತೆ, ಮೈಸೂರಿನ ರೇವತಿ ಶರ್ಮಾ ತಂಡ ನಡೆಸಿಕೊಟ್ಟ ಸುಗಮ ಸಂಗೀತ, ನಾಗಸ್ವರ ನಾದ ಲಹರಿ, ಕುಶಾಲನಗರದ ಕುಂದನ ನೃತ್ಯಾಲಯ, ನಂಜನಗೂಡಿನ ನಾಗಸೀ ತಂಡ ನಡೆಸಿಕೊಟ್ಟ ಭರತನಾಟ್ಯ, ಭಾರತೀಯ ನೃತ್ಯ ಸಂಗೀತ ಅಕಾಡೆಮಿಯ ಶಿವಭರಣ ನೃತ್ಯ, ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜೀವನ ಆಧಾರಿತ ಕಥಾನಕ ಒಳಗೊಂಡ ಕಾರ್ಯಕರ್ತ ತಪಸ್ವಿ ನೃತ್ಯ ನಾಟ್ಯ ಸಂಗಮ, ನಂಜನಗೂಡಿನ ಬಸವೇಶ್ವರ ಕಲಾತಂಡ ನಡೆಸಿಕೊಟ್ಟ ತ್ರಿಜನ್ಮ ಮೋಕ್ಷ ನಾಟಕ, ಶ್ರೀಕೃಷ್ಣ ಗಾರುಡಿ ನಾಟಕ, ವೀರ ಅಭಿಮನ್ಯು ನಾಟಕ, ಸತ್ಯ ಮಾಂಧಾತಾ ಅಥವಾ ಶ್ರೀಲಕ್ಷ್ಮಿ ಶನಿದೇವರ ಶಪಥ ನಾಟಕಗಳು ಪ್ರೇಕ್ಷಕರಿಗೆ ಮುದ ನೀಡಿದ್ದಲ್ಲದೆ ಶಿಳ್ಳೆ, ಚಪ್ಪಾಳೆ ಗಳಿಸಿ ಮನಸೂರೆಗೊಂಡವು.

ಕರ್ತೃ ಗದ್ದಿಗೆಯಲ್ಲಿ ವಿಶೇಷ ಪೂಜೆ: ಇದಕ್ಕೂ ಮುನ್ನ ಕರ್ತೃ ಗದ್ದಿಗೆ ಆವರಣದಲ್ಲಿ ಮುಂಜಾನೆ 4 ಗಂಟೆಗೆ ಮಹಾಸಂಕಲ್ಪ ಪೂರ್ವಕ ಮಹಾರುದ್ರಾಭಿಷೇಕ, ಬೆಳಗ್ಗೆ 6:30ಕ್ಕೆ ಗ್ರಾಮದ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಜಿ.ಮರಳ್ಳಿ ಗ್ರಾಮದಲ್ಲಿ ಸ್ನೇಹ ಸೌಹಾರ್ದ ಶಾಂತಿ ಪ್ರಾರ್ಥನಾ ಪಥಸಂಚಲನ ನಡೆಸಲಾಯಿತು. ನಂತರ ಬೆಳಗ್ಗೆ 7.30ಕ್ಕೆ ಮಾಗಡಿಯ ಜಡೇದೇವರ ಮಠ ಹಾಗೂ ಹೊನ್ನುಡಿಕೆ ಗದ್ದಿಗೆ ಶ್ರೀಇಮ್ಮಡಿ ಬಸವರಾಜ ಸ್ವಾಮೀಜಿಗಳು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು. ಹಾಸನ ಜಿಲ್ಲೆಯ ಯಸಳೂರು ಗ್ರಾಮದ ತೆಂಕಲಗೂಡು ಬೃಹನ್ಮಠದ ಶ್ರೀ ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಧರ್ಮ ಸಂದೇಶ ನೀಡಿದರು. ನಂತರ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವ ಮೂರ್ತಿಗೆ ಅಭಿಷೇಕ ಮತ್ತು ಮಹಾ ಮಂಗಳಾರತಿ ನೆರವೇರಿಸಲಾಯಿತು. ನಂತರ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಮಧ್ಯಾಹ್ನ 3ಕ್ಕೆ ಕಪಿಲಾ ನದಿಯಿಂದ ಹಸು– ಕರುವಿನೊಂದಿಗೆ ಆಗ್ರೋದಕ ತಂದು ಕಳಸ ಪ್ರತಿಷ್ಠಾಪಿಸಲಾಯಿತು. ನಂತರ ಮೂಲಮಠದಿಂದ ಶ್ರೀಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಯನ್ನು ಅಲಂಕೃತ ವಾಹನದಲ್ಲಿ ಪ್ರತಿಷ್ಠಾಪಿಸಿ ಮೂಲ ಶ್ರೀಮಠದಿಂದ ಕರ್ತೃ ಗದ್ದುಗೆವರೆಗೆ, ನಾದಸ್ವರ, ಛತ್ರಿ ಚಾಮರ, ಬಿರುದು ಬಾವಲಿಗಳೊಂದಿಗೆ ವಿಜೃಂಭಣೆಯ ಮೆರವಣಿಗೆ ಮೂಲಕ ಕರೆತರಲಾಯಿತು. ನಂತರ ಶಿವಗದ್ದುಗೆಯಲ್ಲಿ ಉತ್ಸವ ಮೂರ್ತಿಯನ್ನು 3 ಪ್ರದಕ್ಷಣೆ ಹಾಕಿಸಿದ ನಂತರ ಕರ್ತೃಗದ್ದುಗೆಯಲ್ಲಿ ಬಿಜಂಗಯ್ಯಲಾಯಿತು. ಮೆರವಣಿಗೆಗೆ ವೀರಭದ್ರ ಕುಣಿತ, ಸ್ಯಾಕ್ಸೋಫೋನ್, ಗಾರುಡಿ ಬೊಂಬೆ, ಕುಂಭೋತ್ಸ ಹಳೆ ತಮಟೆ, ನಗಾರಿ, ಡೊಳ್ಳುಕುಣಿತ, ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರುಗು ನೀಡಿದವು.

ದೇಶದ ಮೇಲೆ ಹಲವು ದಾಳಿಗಳಾಗಿದ್ದರೂ ಆಚಾರ ವಿಚಾರ, ಸಂಸ್ಕೃತಿ ನಾಶ ಸಾಧ್ಯವಾಗಿಲ್ಲ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ದೇಸಿ ಆಟಗಳ ಸ್ಪರ್ಧೆ ಉದ್ಘಾಟಿಸಿದರು.

ನಂಜನಗೂಡು, ಜ.27– ಭಾರತದ ಮೇಲೆ ಪುರಾತನ ಕಾಲದಿಂದಲೂ ಹಲವು ದಾಳಿಗಳಾಗಿದ್ದರೂ ನಮ್ಮ ನೆಲದ ಆಚಾರ ವಿಚಾರ ಮತ್ತು ಸಂಸ್ಕೃತಿ ನಾಶ ಮಾಡಲು ಸಾಧ್ಯವಾಗಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ತಾಲೂಕಿನ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಸೋಮವಾರ ರಾಜ್ಯ ಮಟ್ಟದ ಭಜನಾ ಮೇಳ, ದೇಸಿ ಆಟಗಳ ಉದ್ಘಾಟನೆಯಲ್ಲಿ ಮಾತನಾಡಿದ ಅವರು, ಆಧುನಿಕತೆ ಭರಾಟೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಪುರಾತನ ಸಂಸ್ಕೃತಿಯಿಂದ ದೂರವಾಗುತ್ತಿದ್ದರೆ, ಇದಕ್ಕೆ ವ್ಯತಿರಿಕ್ತವಾಗಿ ಭಾರತದಲ್ಲಿ ನಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ಬದುಕಿನ ಭಾಗವಾಗಿ ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ವಿಶ್ವದೆಲ್ಲೆಡೆ ವಿವಿಧ ಕ್ಷೇತ್ರಗಳಲ್ಲಿ ಭಾರತೀಯರು ಉನ್ನತ ಸ್ಥಾನ ಅಲಂಕರಿಸುವ ಜೊತೆಗೆ ಮಹತ್ವದ ಸಾಧನೆ ಮಾಡಿದ್ದಾರೆ. ಆಧ್ಯಾತ್ಮಿಕತೆ ಮತ್ತು ವೈಜ್ಞಾನಿಕತೆ ಎರಡನ್ನೂ ಒಟ್ಟಾಗಿ ಕೊಂಡೊಯ್ಯುವ ಮೂಲಕ ದೇಶದ ಜನರನ್ನು ಇನ್ನೂ ಹೆಚ್ಚು ಜಾಗೃತಗೊಳಿಸಬಹುದಾಗಿದ್ದು, ಆ ನಿಟ್ಟಿನಲ್ಲಿ ಸುತ್ತೂರು ಜಾತ್ರಾ ಮಹೋತ್ಸವ ನೆರವಾಗಲಿದೆ. ನಮ್ಮ ಗ್ರಾಮೀಣ ಬದುಕು ಹಾಗೂ ಸಂಸ್ಕೃತಿ ಬಿಂಬಿಸುವ ದೇಸಿ ಆಟೋಟ ಸ್ಪರ್ಧೆಗಳು ಹಾಗೂ ಭಜನೆಯಂತಹ ಸ್ಪರ್ಧೆಗಳನ್ನು ಆಯೋಜಿಸಿ ಯುವ ಜನರನ್ನು ನಮ್ಮ ಸಂಸ್ಕೃತಿಯತ್ತ ಆಕರ್ಷಿಸುತ್ತಿದೆ. ಆಧ್ಯಾತ್ಮಿಕತೆ ಮತ್ತು ವೈಜ್ಞಾನಿಕತೆಯನ್ನು ಸಮತೋಲನವಾಗಿ ಕೊಂಡೊಯ್ಯುವುದರಿಂದ ದೇಶದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಿ ಭಾರತ ಸೂಪರ್ ಪವರ್ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದರು.

ಮಾಜಿ ಸಚಿವೆ ರಾಣಿ ಸತೀಶ್ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಮಠಗಳು ಸಮಾಜವನ್ನು ಒಟ್ಟುಗೂಡಿಸುವ ಕೆಲಸದಲ್ಲಿ ನಿರತವಾಗಿದ್ದು, ಸಮಾಜದಲ್ಲಿ ಶಾಂತಿ ಸೌಹಾರ್ದತೆ ಹಾಗೂ ಭಾವೈಕ್ಯತೆ ಬೆಳೆಸುವಲ್ಲಿ ಸುತ್ತೂರು ಮಠದ ಪಾತ್ರ ಹಿರಿದಾಗಿದೆ ಎಂದರು.

ಬೆಂಗಳೂರಿನ ಭವತಾರಿಣಿ ಆಶ್ರಮದ ಮಾತಾಜಿ ವಿವೇಕಮಯಿ ಮಾತನಾಡಿ, ನಮ್ಮ ಪರಂಪರೆ, ಸಂಸ್ಕೃತಿ, ದೇಸಿ ಆಟಗಳು, ನಮ್ಮ ಬೌದ್ಧಿಕತೆ ಚುರುಕುಗೊಳಿಸುವ ಜೊತೆಗೆ ಇಡೀ ವಿಶ್ವಕ್ಕೆ ಭಾರತವನ್ನು ಪರಿಚಯಿಸುತ್ತದೆ. ಧರ್ಮವೇ ದೇಶದ ಬೆನ್ನೆಲುಬಾಗಿದ್ದು ಇಂತಹ ಜಾತ್ರಾ ಮಹೋತ್ಸವಗಳು, ನಮ್ಮ ಸಂಸ್ಕೃತಿ ಪರಂಪರೆಗಳಿಗೆ ಮತ್ತಷ್ಟು ಪುಷ್ಟಿ ನೀಡುತ್ತದೆ. ಆದ್ದರಿಂದ ನಮ್ಮ ಧರ್ಮ ಸಂಸ್ಕೃತಿಯನ್ನು ಕಡೆಗಣಿಸದೆ ನಿಮ್ಮ ಮಕ್ಕಳಿಗೂ ಸಹ ನಮ್ಮ ಧರ್ಮ, ಸಂಸ್ಕೃತಿಯನ್ನು ಪರಿಚಯಿಸುವ ಕೆಲಸವಾಗಬೇಕಿದೆ ಎಂದರು.

ಸಮಾರಂಭದಲ್ಲಿ ಶಾಸಕ ಸಿ.ಕೆ.ರಾಮಮೂರ್ತಿ, ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಬಸವ ಇಂಟರ್ ನ್ಯಾಷನಲ್ ಫೌಂಡೇಶನ್ ಅಧ್ಯಕ್ಷ ಎಸ್.ಮಹದೇವಯ್ಯ, ದಕ್ಷಿಣ ವಲಯ ಡಿಐಜಿಪಿ ಬಾ.ಎಂ.ಬಿ. ಬೋರಲಿಂಗಯ್ಯ, ಸುತ್ತೂರು ಮಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರಿನ ಅರ್ಕ ಫೌಂಡೇಶನ್ ಸಂಸ್ಥಾಪಕ ಯೋಗಿ ಶ್ರೀನಿವಾಸ ಅರ್ಕ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ಮತ್ತಿತರರಿದ್ದರು.

ತಿ.ನರಸೀಪುರದಲ್ಲಿ 76ನೇ ಗಣರಾಜ್ಯೋತ್ಸವ



ತಿ.ನರಸೀಪುರದಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ತಿ.ನರಸೀಪುರ, ಜ.27– ಪಟ್ಟಣದ ಪುರಸಭೆ ವತಿಯಿಂದ 76ನೇ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭಾಧ್ಯಕ್ಷರು, ಸದಸ್ಯರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಪುರಸಭಾ ಸದಸ್ಯ ಸಿ.ಪ್ರಕಾಶ್ ಮಾತನಾಡಿ, ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ ಡಾ.ಬಿ.ಆರ್. ಅಂಬೇಡ್ಕರ್, ಜವಾಹರ್‌ಲಾಲ್ ನೆಹರು, ಮಹಾತ್ಮ ಗಾಂಧೀಜಿ ಅವರ ನಿರಂತರ ಶ್ರಮದ ಪರವಾಗಿ ನಮಗೆ ದೊರೆತ ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು ಈ ದಿನ ಮಾತನಾಡುವುದು ನನಗೆ ಸಂತೋಷ ಹೆಮ್ಮೆಯಾಗುತ್ತದೆ. ಸ್ವಾತಂತ್ರ್ಯ, ಗಣರಾಜ್ಯೋತ್ಸವದ ಹಿಂದೆ ಮಹಾನ್ ನಾಯಕರ ತ್ಯಾಗ ಬಲಿದಾನ ಇದೆ. ಅಲ್ಲದೇ ಸಂವಿಧಾನದ ಕರಡು ರಚನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಿಶ್ವದ ಅತ್ಯಂತ ದೊಡ್ಡ ಸಂವಿಧಾನದ ಕರಡು ಸಮಿತಿ ಅಧ್ಯಕ್ಷರಾಗಿ ಅಂಬೇಡ್ಕರ್ ಅವರ ಪಾತ್ರ ಅವಿಸ್ಮರಣೀಯ ಎಂದರು.

ಸ್ವಾತಂತ್ರ್ಯ ಹೋರಾಟಗಾರರ ಆದರ್ಶಗಳನ್ನು ಯುವಕರು ಮೈಗೂಡಿಸಿಕೊಳ್ಳಬೇಕು. ಉತ್ತಮ ಪ್ರಜೆಯಾಗಿ ಬೆಳೆಯಬೇಕು ಎಂದರು. ಈ ವೇಳೆ ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಸದಸ್ಯರಾದ ಮಂಜು ಬಾದಾಮಿ, ಎಸ್.ಕೆ.ಕಿರಣ್, ಮೆಡಿಕಲ್ ನಾಗರಾಜು, ಎಲ್.ಮಂಜುನಾಥ, ರೂಪಶ್ರೀ, ಸಿದ್ದು, ಮುಖಂಡರಾದ ಶ್ರೀಕಂಠ, ಮಾದೇಶ್, ಸಮುದಾಯ ಸಂಘಟಕ ಕೆ.ಮಹದೇವ್, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಕಿರಿಯ ಆರೋಗ್ಯ ನಿರೀಕ್ಷಕ ಮಧು, ಜೂನಿಯರ್ ಪ್ರೋಗ್ರಾಮರ್ ಹರೀಶ್, ಪ್ರಥಮ ದರ್ಜೆ ಸಹಾಯಕಿ ಪ್ರಿಯಾಂಕಾ, ಪೌರಕಾರ್ಮಿಕ ಶಿವಣ್ಣ, ಮಹದೇವ, ಸೋಮ ಇತರರಿದ್ದರು.

ಅಂಬೇಡ್ಕರ್‌ರಿಂದ ದೇಶಕ್ಕೆ ಶ್ರೇಷ್ಠ ಸಂವಿಧಾನ ಕೊಡುಗೆ

ಗಣರಾಜ್ಯೋತ್ಸವದಲ್ಲಿ ಶಾಸಕ ಅನಿಲ್



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಜ.27– ದೇಶಕ್ಕೆ ಅತ್ಯಂತ ಶ್ರೇಷ್ಠವಾದ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ್ ಕೊಡುಗೆ ನೀಡಿದ್ದಾರೆ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಸಂವಿಧಾನದಿಂದ ನಮ್ಮ ದೇಶದ ಪ್ರಜಾಪ್ರಭುತ್ವ ಬಲಿಷ್ಠವಾಗಿದೆ ಎಂದರು.

ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಧರ್ಮಗಳಿಗೆ ಪವಿತ್ರ ಗ್ರಂಥಗಳಿರುವಂತೆ ಮನುಷ್ಯರಿಗೆ ಹಕ್ಕುಗಳನ್ನು ನೀಡಿದ್ದರೆ ಅದು ಅಂಬೇಡ್ಕರ್ ಸಂವಿಧಾನ ಮಾತ್ರ ಎಂದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ಗಂಗಾ ಕಲ್ಯಾಣ ಯೋಜನೆ ಅಡಿ 23 ಫಲಾನುಭವಿಗಳಿಗೆ ಪರಿಕರ ವಿತರಿಸಲಾಯಿತು. ಮುಖ್ಯ ಭಾಷಣಕಾರ ಕಿರಣ್ ಸಿಡ್ಲೆಹಳ್ಳಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಅಂಬೇಡ್ಕರ್ ಭವನದಿಂದ ಬೆಳ್ಳಿರಥದಲ್ಲಿ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಶಾಲಾ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಸಾಂಸ್ಕೃತಿಕ ಕಾರ್ಯಕ್ರಮದ ಪ್ರಥಮ ಬಹುಮಾನ ಪಟ್ಟಣದ ಆದರ್ಶ ಪ್ರೌಢಶಾಲೆ 10 ಸಾವಿರ, ದ್ವಿತೀಯ ಬಹುಮಾನ ವಿಶ್ವಭಾರತಿ ಪ್ರೌಢಶಾಲೆ 5 ಸಾವಿರ ರೂ. ಪಡೆಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಇಓ ಧರಣೇಶ್, ಬಿಇಓ ಕಾಂತರಾಜು, ಎಇಇ ಬೋರಯ್ಯ, ರಾಮೇಗೌಡ, ವಸಂತ್ ಕುಮಾರ್, ಸಿಪಿಐ ಶಬ್ಬೀರ್ ಹುಸೇನ್, ಎಸ್‌ಐ ಸುರೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ನೇತ್ರಾವತಿ, ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ನಾಗೇಂದ್ರ, ಶಶಿಕಲಾ, ಮಹೇಶ್, ಮುಖ್ಯಾಧಿಕಾರಿ ಸುರೇಶ್, ವಿಶ್ವಕರ್ಮ ರಾಜು, ಹೆಚ್.ಸಿ.ನರಸಿಂಹಮೂರ್ತಿ, ಪ್ರೇಮಸಾಗರ್, ಪರಶಿವಮೂರ್ತಿ, ಬಸವರಾಜ್, ಮಹದೇವಯ್ಯ, ಅಶೋಕ್, ಸೌಮ್ಯ, ಶೈಲಾ, ಸುಧಾಮಣಿ ಇನ್ನಿತರರಿದ್ದರು.

ಸಾಹಿತಿ ಜವರಾಜುಗೆ ಸನ್ಮಾನ



ಭೈರಾಪುರದಲ್ಲಿ ಬಾಬು ಜಗಜೀವನ್ ರಾಂ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ಗಣರಾಜ್ಯೋತ್ಸವದಲ್ಲಿ ಸಾಹಿತಿ ಜವರಾಜು ಅವರನ್ನು ಸನ್ಮಾನಿಸಲಾಯಿತು. ಪುರಸಭಾ ಸದಸ್ಯ ಎಲ್.ಮಂಜುನಾಥ್, ಸಂಘದ ಅಧ್ಯಕ್ಷ ರಾಚಯ್ಯ, ಉಪಾಧ್ಯಕ್ಷ ಪ್ರದೀಪ್, ಖಜಾಂಚಿ ಮರಿಲಿಂಗಯ್ಯ, ಪ್ರಧಾನ ಕಾರ್ಯದರ್ಶಿ ಪ್ರಸನ್ನ, ಹಿರಿಯ ಮುಖಂಡ ಪಿ.ಶೇಷಯ್ಯ, ಜೈ ಭೀಮ್ ಸೇವಾ ಸಂಸ್ಥೆ ಅಧ್ಯಕ್ಷ ಕಂಟ್ರಾಕ್ಟರ್ ಮಹದೇವಸ್ವಾಮಿ, ಮಹದೇವಮ್ಮ, ಕಾರ್ಯದರ್ಶಿಗಳಾದ ಗೋಪಿ, ಮಾದೇಶ್, ಮಂಜು, ಚನ್ನಯ್ಯ, ನಿಂಗರಾಜು, ಶಿವಣ್ಣ, ಜಗ್ಗು, ಶಂಕರ್, ಸುರೇಶ್, ಆನಂದ, ಶಿವಕುಮಾರ್, ಭಾರತ್, ರಾಜು ಎಂ, ಸಿದ್ದರಾಜು, ಗುಂಡು, ಸಿದ್ದರಾಜು, ಸ್ವಾಮಿ, ರಜನಿ ರಾಜ್, ರಾಜಣ್ಣ, ಕೆಂಪರಾಜು ಹಾಜರಿದ್ದರು.

ಸರಗೂರಲ್ಲಿ ಸಾಧಕರನ್ನು ಸನ್ಮಾನಿಸಿ ಗಣರಾಜ್ಯೋತ್ಸವ ಆಚರಣೆ



ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರನ್ನು ಸನ್ಮಾನಿಸಲಾಯಿತು.

ಸರಗೂರು, ಜ.27– ಪಟ್ಟಣದ ಜಯ ಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತದಿಂದ 76ನೇ ಗಣರಾಜ್ಯೋತ್ಸವ ಆಚರಿಸಲಾಯಿತು.

ಶಾಸಕ ಅನಿಲ್ ಮಾತನಾಡಿ, ಅಂಬೇಡ್ಕರ್ ಅವರು ವಿಭಜನೆಯಾದ ದೇಶವನ್ನು ಒಗ್ಗೂಡಿಸಲು ವಿಶ್ವದಲ್ಲೇ ಬಹುದೊಡ್ಡ ಸಂವಿಧಾನ ರಚಿಸಿದ್ದಾರೆ. ಆ ಮೂಲಕ ದೇಶದ ಆಡಳಿತ ನಡೆಯುತ್ತಿದೆ. ಸರ್ವರ ಏಳಿಗೆಗಾಗಿ ಭಾರತ ಶ್ರಮಿಸುತ್ತಿದೆ. ಈ ವೇಳೆ ಸಂವಿಧಾನ ಪ್ರಾಮುಖ್ಯತೆ ಅತ್ಯಂತ ಪ್ರಮುಖವಾದದು. ಇಂತಹ ಮಹಾನೀಯರ ಕಾರ್ಯಕ್ರಮಗಳಿಗೆ ಎಲ್ಲರ ಸಹಕಾರ ಅಗತ್ಯ ಎಂದರು.

ಪಶುಸಂಗೋಪಾನ ಇಲಾಖೆ ಸಹಾಯಕ ನಿರ್ದೇಶಕ ಡಾ.ವೈ.ಡಿ.ರಾಜಣ್ಣ, ತಹಸೀಲ್ದಾರ್ ಮೋಹನ್ ಕುಮಾರಿ, ಶಿಕ್ಷಕ ರಂಗನಾಥ್ ಮಾತನಾಡಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರನ್ನು ಸನ್ಮಾನಿಸಲಾಯಿತು. ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ಉಮಾ, ಚೈತ್ರಾ, ಸಣ್ಣತಾಯಮ್ಮ, ಚಂದ್ರಕಲಾ, ಹೇಮಾವತಿ, ದಿವ್ಯ, ವಿನಾಯಕ ಪ್ರಸಾದ್, ನೂರಾಳಸ್ವಾಮಿ, ಶ್ರೀನಿವಾಸ್, ಚಲುವಕೃಷ್ಣ, ಪಪಂ ಮುಖ್ಯಾಧಿಕಾರಿ ಸಂತೋಷ್ ಕುಮಾರ್, ಗ್ರೇಡ್–2 ತಹಸೀಲ್ದಾರ್ ಪರಶಿವಮೂರ್ತಿ, ಉಪ ತಹಸೀಲ್ದಾರ್ ಸುನೀಲ್, ಎಇಇ ಉಷಾ, ಎಪಿಎಂಸಿ ಕಾರ್ಯದರ್ಶಿ ವಸಂತಕುಮಾರ್, ತಾಪಂ ಇಓ ಪ್ರೇಮ್ ಕುಮಾರ್, ಎಸ್‌ಐ ಕಿರಣ್, ಪುರುಷೋತ್ತಮ್, ದಯಾನಂದ್, ತಾಲೂಕು ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ರಾಜ್ಯ ಪ್ರಶಸ್ತಿ ಪುರಸ್ಕೃತ ಪಿ.ಜವರನಾಯಕ, ಸಾಂಬಮೂರ್ತಿ, ರಮೇಶ್, ಮಹೇಶ್, ರಾಜಣ್ಣ, ಶಿವಣ್ಣ, ಭೋಗಯ್ಯ, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಸಣ್ಣಸ್ವಾಮಿ, ಮಹೇಂದ್ರ, ಗೋವಿಂದರಾಜು, ಬೆಟ್ಟಸ್ವಾಮಿ, ಲಯನ್ಸ್ ವಿದ್ಯಾಸಂಸ್ಥೆ ಮುಖ್ಯಶಿಕ್ಷಕರಾದ ಬಿ.ಡಿ.ದಾಸಾಚಾರಿ, ಪ್ರಗತಿ ವಿದ್ಯಾಸಂಸ್ಥೆ ಮುಖ್ಯಶಿಕ್ಷಕರಾದ ಸತೀಶ್, ಹೆಚ್.ಬಿ.ಜೋತಿ, ಶಾಂತವ್ವ, ಕೆಂಪರಾಮೇಗೌಡ, ನಾಗೇಂದ್ರ, ವನಸಿರಿ ಉಮೇಶ್, ರವಿಕುಮಾರ್ ಇದ್ದರು.

ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಚುನಾವಣೆ

ಮಹದೇವಣ್ಣ ಸೇರಿದಂತೆ 7 ಮಂದಿ ಅವಿರೋಧ ಆಯ್ಕೆ

▶ 20 ಮಂದಿ ನಾಮಪತ್ರ ವಾಪಸ್ ▶ ಕಣದಲ್ಲಿ ಉಳಿದ 17 ಅಭ್ಯರ್ಥಿಗಳು



ಎಂ.ಮಹದೇವಣ್ಣ



ಕೆ.ವಜ್ರೇಗೌಡ



ಮಲ್ಲಿಕಾರ್ಜುನಸ್ವಾಮಿ



ಮಹದೇವಸ್ವಾಮಿ



ಎಂ.ಮಹದೇವ್



ರಾಜಮ್ಮಣಿ



ನಾಗರತ್ನ

ತಿ.ನರಸೀಪುರ, ಜ.27– ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಚುನಾವಣೆಯಲ್ಲಿ ಸ್ಪರ್ಧಿಸಲು ಸಲ್ಲಿಸಿದ್ದ ನಾಮಪತ್ರ ಹಿಂಪಡೆಯಲು ಕೊನೆ ದಿನವಾದ ಸೋಮವಾರ ಸಾಲಗಾರರ ಕ್ಷೇತ್ರ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ 20 ಮಂದಿ ನಾಮಪತ್ರ ಹಿಂಪಡೆದ ಹಿನ್ನೆಲೆಯಲ್ಲಿ 7 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಫೆ.2 ರಂದು ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗೆ ಚುನಾವಣೆ ನಡೆಯಲಿದ್ದು, ಸೋಮವಾರ ಸಾಲಗಾರರ ಕ್ಷೇತ್ರದಿಂದ 14 ಮಂದಿ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ 6 ಅಭ್ಯರ್ಥಿಗಳು ತಾವು ಸಲ್ಲಿಸಿದ್ದ ನಾಮಪತ್ರ ವಾಪಸ್ ಪಡೆದುಕೊಂಡರು.

ಸಾಲಗಾರರ ಕ್ಷೇತ್ರದಿಂದ ಹಾಲಿ ಅಧ್ಯಕ್ಷ ಕೆಂಪಯ್ಯನಹುಂಡಿ ಎಂ.ಮಹದೇವಣ್ಣ, ಸೋಮನಾಥಪುರ ಸಾಮಾನ್ಯ ಕ್ಷೇತ್ರದಿಂದ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಅತ್ತಹಳ್ಳಿ ಸಾಮಾನ್ಯ ಕ್ಷೇತ್ರದಿಂದ ಎ.ಎಂ.ಮಹದೇವ (ಮಧು), ದೊಡ್ಡೇಬಾಗಿಲು ಹಿಂದುಳಿದ ಎ ವರ್ಗದಿಂದ ಎಂ.ಮಲ್ಲಿಕಾರ್ಜುನಸ್ವಾಮಿ, ಚಿದರವಳ್ಳಿ ಸಾಮಾನ್ಯ ಕ್ಷೇತ್ರದಿಂದ ನೆರಗ್ಯಾತನಹಳ್ಳಿ ಎನ್.ಎನ್.ಮಹದೇವಸ್ವಾಮಿ, ಮೂಗೂರು ಮಹಿಳಾ ಮೀಸಲು ಕ್ಷೇತ್ರದಿಂದ ರಾಜಮಣಿ ನಾಗೇಶ್, ಕಸಬಾ ಮಹಿಳಾ ಕ್ಷೇತ್ರದಿಂದ ಎಂ.ನಾಗರತ್ನ ಅವಿರೋಧವಾಗಿ ಆಯ್ಕೆಯಾದರು.

ಬ್ಯಾಂಕ್‌ಗೆ ಒಟ್ಟು 14 ನಿರ್ದೇಶಕರು ಆಯ್ಕೆಯಾಗಬೇಕಿದ್ದು 7 ಮಂದಿ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಉಳಿದ 7 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು 7 ಸ್ಥಾನಕ್ಕೆ 17 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಅಂತಿಮ ಕಣದಲ್ಲಿ ಉಳಿದವರು: ಮಾದಾಪುರ ಸಾಲಗಾರರ ಕ್ಷೇತ್ರದಿಂದ ಪ.ಪಂಗಡಕ್ಕೆ ಮೀಸಲಾದ ಸ್ಥಾನಕ್ಕೆ ಸಿ.ಸೋಮಣ್ಣ ಹಾಗೂ ಕೆ.ಬಿ.ಪ್ರಭುಸ್ವಾಮಿ, ಸೋಸಲೆ ಕ್ಷೇತ್ರದಿಂದ ಪ.ಜಾತಿಗೆ ಮೀಸಲಾದ ಸ್ಥಾನಕ್ಕೆ ಎಂ.ಪರಶಿವಮೂರ್ತಿ, ಎನ್.ಲಿಂಗಪ್ಪಾಜಿ, ಚಿಕ್ಕತಾಯಮ್ಮ, ಯಾಚೇನಹಳ್ಳಿ ಸಾಮಾನ್ಯ ಕ್ಷೇತ್ರದಿಂದ ಟಿ.ಎಸ್.ಪ್ರಸನ್ನ, ಟಿ.ಎಸ್. ಸಿದ್ದರಾಜು, ಕೊತ್ತೇಗಾಲ ಸಾಮಾನ್ಯ ಕ್ಷೇತ್ರದಿಂದ ಎಂ.ಮಂಜುನಾಥ್, ಎಂ.ಎಸ್. ಶಿವಮೂರ್ತಿ, ತಲಕಾಡು ಹಿಂದುಳಿದ ವರ್ಗ ಬಿ ಕ್ಷೇತ್ರದಿಂದ ಎಸ್.ಮಹೇಶ್, ಎಂ.ರುದ್ರಸ್ವಾಮಿ, ಬನ್ನೂರು ಸಾಮಾನ್ಯ ಕ್ಷೇತ್ರದಿಂದ ಬಿ.ಸಿ. ಪಾರ್ಥಸಾರಥಿ, ಆರ್. ಮಹೇಶ್, ಕೆರಾಜೇಶ್ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಆಯ್ಕೆ ಬಯಸಿ ಸಾಮಾನ್ಯ ಕ್ಷೇತ್ರದಿಂದ ಎನ್. ಅನಿಲ್ ಕುಮಾರ್, ಬಿ.ಎಲ್.ಕೃಷ್ಣೇಗೌಡ ಹಾಗೂ ಕೆ.ಪ್ರಭುಸ್ವಾಮಿ ಅಂತಿಮವಾಗಿ ಚುನಾವಣಾ ಕಣದಲ್ಲಿದ್ದಾರೆ.

ನಾಮಪತ್ರ ವಾಪಸ್ ಪಡೆದವರು: (ಸಾಲಗಾರರ ಕ್ಷೇತ್ರ) ಎಂ.ರಾಜು (ಸೋಮನಾಥಪುರ), ಟಿ.ಸಿ.ಸಂದೀಪ್, ಟಿ.ಎಸ್. ಲೋಕೇಶ್ (ಯಾಚೇನಹಳ್ಳಿ), ಶ್ರೀಧರ, ಎಂಕೆ.ಮಹೇಶ್ (ಬನ್ನೂರು), ಎಂ. ನಾಗೇಶ್ (ಚಿದರವಳ್ಳಿ), ತಾಯಮ್ಮ, ರಾಜಮಣಿ (ಕಸಬಾ), ಕೆ.ವಿ.ಸಿದ್ದಮಲ್ಲಪ್ಪ, ಕೆ.ಎಸ್.ನಾಗರಾಜಮೂರ್ತಿ, ಕೆ.ಎಸ್. ಶಿವಕುಮಾರ್ (ಕೊತ್ತೇಗಾಲ), ಎಂ.ಬಸವರಾಜು, ಶ್ರೀನಿವಾಸಮೂರ್ತಿ, ಹೆಚ್.ಎಂ. ಗುರುಸ್ವಾಮಿ (ದೊಡ್ಡೇಬಾಗಿಲು ಕ್ಷೇತ್ರ).

ಸಾಲಗಾರರಲ್ಲದ ಕ್ಷೇತ್ರ ಎಸ್.ದಿವಾಕರ್, ಎಂ.ನಾಗರಾಜು, ಗುರುಮಲ್ಲೇಗೌಡ, ಎ.ಶಿವಕುಮಾರ್, ಎಸ್.ಬಸವರಾಜು ಹಾಗೂ ಎಸ್.ನಂಜುಂಡಯ್ಯ ನಾಮಪತ್ರ ವಾಪಸ್ ಪಡೆದುಕೊಂಡಿದ್ದಾರೆ ಎಂದು ರಿಟರ್ನಿಂಗ್ ಆಫೀಸರ್ ಹೆಚ್.ಎಸ್. ಮನೋಜ್ ಕುಮಾರ್ ತಿಳಿಸಿದ್ದು, ಸಾಲಗಾರರಲ್ಲದ ಕ್ಷೇತ್ರದಿಂದ 7 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 7 ಸ್ಥಾನಗಳ ಆಯ್ಕೆಗೆ ಫೆ.2 ರಂದು ಪಟ್ಟಣದ ಗುರುಭವನದ ಹಿಂಭಾಗದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಚುನಾವಣೆ ನಡೆಯಲಿದೆ ಎಂದು ತಿಳಿಸಿದರು. ಬ್ಯಾಂಕ್ ವ್ಯವಸ್ಥಾಪಕ ಎನ್.ಮಹೇಶ್ ಇದ್ದರು.

ಅವಿರೋಧ ಆಯ್ಕೆಗೆ ಕಸರತ್ತು...!

ನಾಮಪತ್ರ ವಾಪಸ್ ಪಡೆಯಲು ಕೊನೆ ದಿನವಾದ ಸೋಮವಾರ ಕೆಲವು ಪ್ರಭಾವಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಬೇಕೆಂಬ ಉದ್ದೇಶದೊಂದಿಗೆ ತಮ್ಮ ವಿರುದ್ಧ ಸ್ಪರ್ಧೆಗೆ ನಾಮಪತ್ರ ಸಲ್ಲಿಸಿದ್ದ ಅಭ್ಯರ್ಥಿಗಳ ಉಮೇದುವಾರಿಕೆ ವಾಪಸ್ ತೆಗೆಸಲು ಕಸರತ್ತು ನಡೆಸುತ್ತಿದ್ದ ದೃಶ್ಯ ಬ್ಯಾಂಕ್ ಎದುರು ಕಂಡು ಬಂತು. ಕೆಲವು ಅಭ್ಯರ್ಥಿಗಳು ಮುಖಂಡರ ಮನವೊಲಿಕೆಗೆ ಜಗ್ಗದೇ ಕಣದಲ್ಲೇ ಉಳಿದುಕೊಂಡರೇ, ಕೆಲವರು ಮುಖಂಡರ ಮನವೊಲಿಕೆಗೆ ಮನಸೋತು ನಾಮಪತ್ರ ವಾಪಸ್ ಪಡೆದು ಅವಿರೋಧ ಆಯ್ಕೆಗೆ ಸಹಕರಿಸಿದರು.

ಚಿಬುಕಹಳ್ಳಿ ಸಹಕಾರ ಸಂಘದ ಚುನಾವಣೆ

ಕೆ.ಆರ್.ನಗರ: ಚಿಬುಕಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ ನಡೆಯಿತು. ಸಾಲಗಾರರಲ್ಲದ ಕ್ಷೇತ್ರದಿಂದ ನಂಜೇಗೌಡ (135), ಪ.ಜಾತಿ ಸ್ವಾಮಯ್ಯ (208), ಪ.ಪಂಗಡ ನಿಂಗರಾಜು (112), ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಬಿ.ಜಿ.ಪ್ರಸನ್ನಕುಮಾರ(293), ಸಿ.ಎಸ್.ಶಿವರಾಜು(236), ಸಿ.ಕೆ.ರಮೇಶ್(214), ಸಿ.ಎ.ಗಣೇಶ್(207), ಹೆಚ್.ಎಸ್.ವೆಂಕಟೇಶ್ (204), ಮಹಿಳಾ ಮೀಸಲು ಕ್ಷೇತ್ರದಿಂದ ಮಂಜುಳ (242), ವೀಣಾ(145), ಹಿಂದುಳಿದ ವರ್ಗ ಎ ವರ್ಗದಿಂದ ಸಿ.ಎಂ.ಶಿವಕುಮಾರ್ (174), ಹಿಂದುಳಿದ ಬಿ ವರ್ಗದಿಂದ ಬಿ.ಸಚಿನ್(206) ಮತಗಳನ್ನು ಪಡೆದು ಚುನಾಯಿತರಾದರು.

ನೌಕರರ ಸಂಘ ಪುನರ್ ರಚನೆ



ಹುಣಸೂರು ತಾಲೂಕಿನ ಬೋಧಕೇತರ ನೌಕರರು, ವಾಹನ ಚಾಲಕರು ಹಾಗೂ ಡಿ.ಗ್ರೂಪ್ ನೌಕರರ ಸಂಘವನ್ನು ಪುನರ್ ರಚಿಸಲಾಯಿತು. ಗೌರವಾಧ್ಯಕ್ಷರಾಗಿ ಮಂಜುನಾಥ್, ಅಧ್ಯಕ್ಷ ಶಶಿಕಿರಣ್, ಉಪಾಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಜೀವ ರತ್ನಮ್, ಖಜಾಂಚಿಯಾಗಿ ನಿರ್ಮಲ, ಸಂಘಟನಾ ಕಾರ್ಯದರ್ಶಿ ಜೀವನ್ ದಾಸ್, ಸುನೀಲ್ ಬೋತೆಲೋ, ರಮೇಶ್ ಆಯ್ಕೆಯಾಗಿದ್ದಾರೆ.

ಪಾಂಡು ನಿಧನ



ಹುಣಸೂರು, ಜ.27– ನಗರದ 27ನೇ ವಾರ್ಡ್ ಹೊಸ ಮಾರುತಿ ಬಡಾವಣೆ ನಿವಾಸಿ ಪಾಂಡು(80) ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈಗಿನ ಸರ್ಕಾರಗಳು ಜಾರಿಗೆ ತರುತ್ತಿರುವ ಕಾರ್ಯಗಳೆಲ್ಲಾ ಹಿಂದೆ ನಾಲ್ವಡಿ ರೂಪಿಸಿದಂತಹವು

●ಶಾಸಕ ಜಿ.ಟಿ. ದೇವೇಗೌಡರ ಅಭಿಮತ ●ಅವರ ಯೋಜನೆಗಳು ಜಾರಿಯಾದರೆ ರಾಜ್ಯ ರಾಮರಾಜ್ಯವಾಗಲಿದೆ

ಮೈಸೂರು,ಜ.27(ಎಂಟಿವೈ)– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಲೋಚನೆ, ಕಾರ್ಯಕ್ರಮ ಹಾಗೂ ವಿಚಾರಧಾರೆಗಳನ್ನು ಪಾರದರ್ಶಕವಾಗಿ ಮುಂದುವರೆಸಿಕೊಂಡು ಹೋಗಿದ್ದರೆ ಕರ್ನಾಟಕ ರಾಮರಾಜ್ಯವಾಗುತ್ತಿತ್ತು ಎಂದು ಶಾಸಕ ಜಿ.ಟಿ.ದೇವೇಗೌಡರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠ ಆಯೋಜಿಸಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಜಯಚಾಮರಾಜ ಒಡೆಯರ್ ಕುರಿತು ಪ್ರೊ.ವೈ.ಹೆಚ್.ನಾಯಕವಾಡಿ ಅವರು ಸಂಪಾದಿಸಿರುವ ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರು ಸಂಸ್ಥಾನದಲ್ಲಿ ಅತ್ಯುತ್ತಮ ಆಡಳಿತ ನಡೆಸಿ, ಮೈಸೂರಿನ ಅಭಿವೃದ್ಧಿಗೆ ಅನೇಕ ಕೊಡುಗೆ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆದರ್ಶ, ದೂರದೃಷ್ಟಿ, ವಿಚಾರಧಾರೆ ಹಾಗೂ ಕಾರ್ಯಕ್ರಮಗಳು ಮಹತ್ವ ಪಡೆದುಕೊಂಡಿವೆ. ಸದಾ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆದರ್ಶ ಪಾಲಿಸಿದರೆ ರಾಜ್ಯ ರಾಮರಾಜ್ಯವಾಗುತ್ತಿತ್ತು. ಆದರೆ, ಅವರ ಕಾರ್ಯಕ್ರಮ ಮುಂದುವರೆಸುವ ಪ್ರಯತ್ನ ನಡೆಯುತ್ತಿಲ್ಲ ಎಂದು ವಿಷಾದಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೊಸ ಹೊಸ ಆಲೋಚನೆಗಳನ್ನು ಮಾಡುವಂತಹ ಅಗತ್ಯವಿಲ್ಲ. ನಾಲ್ವಡಿ ಅವರ ಕಾರ್ಯಕ್ರಮಗಳನ್ನು ಸರಿಯಾಗಿ ಓದಿ, ತಿಳಿದು ಪಾರದರ್ಶಕ ಹಾಗೂ ಆದರ್ಶವಾಗಿಟ್ಟುಕೊಂಡು ಹೋಗಬೇಕಾಗಿತ್ತು. ನಾಲ್ವಡಿ ಅವರ ವಿಚಾರಧಾರೆ, ಕಾರ್ಯಕ್ರಮಗಳನ್ನು ನೋಡಿದರೆ ನಾಲ್ವಡಿ ಅವರು ದೇಶದ ಪ್ರಧಾನ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದರೆ ಭಾರತ ಇಂದು ಬಹಳಷ್ಟು ಅಭಿವೃದ್ಧಿಯ ಪಥದಲ್ಲಿ ನಿರಂತರವಾಗಿ ಸಾಗುತ್ತಿತ್ತು. ನಾಲ್ವಡಿ ಅವರು ಮಾಡಿದ ಕೆಲಸ–ಕಾರ್ಯಗಳು ಇಂದಿಗೂ ಶಾಶ್ವತವಾಗಿ ಉಳಿದಿವೆ ಎಂದರು.



ಮೆಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಜಯಚಾಮರಾಜ ಒಡೆಯರ್ ಕುರಿತು ಪ್ರೊವೈ.ಹೆಚ್.ನಾಯಕವಾಡಿರವರು ಸಂಪಾದಿಸಿರುವ ಕೃತಿಗಳನ್ನು ಶಾಸಕ ಜಿ.ಟಿ.ದೇವೇಗೌಡರು ಬಿಡುಗಡೆ ಮಾಡಿದರು.

ಇಂದಿನ ಎಲ್ಲಾ ಸರ್ಕಾರಗಳು ನಾಲ್ವಡಿ ಅವರ ಯೋಜನೆಗಳನ್ನು ಹೊಸ ಹೊಸ ಕಾರ್ಯಕ್ರಮಗಳಾಗಿ ಜಾರಿಗೆ ತಂದು ಅದನ್ನು ನಮ್ಮ ಸರ್ಕಾರ ಮಾಡಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ನಾಲ್ವಡಿ ಅವರ ಬಗ್ಗೆ ಅಧ್ಯಯನ ಮಾಡಿದರೆ ಈ ಎಲ್ಲಾ ಕಾರ್ಯಕ್ರಮಗಳನ್ನು ಅವರು ಹಿಂದೆಯೇ ಜಾರಿಗೆ ತಂದಿದ್ದರು. ಇಂದಿಗೂ ಮೈಸೂರು ವಿಶ್ವವಿದ್ಯಾನಿಲಯ, ಇನ್ನಿತರೆ ಶಿಕ್ಷಣ ಸಂಸ್ಥೆಗಳು, ಆರೋಗ್ಯ ಕ್ಷೇತ್ರ ಹಾಗೂ ಮುಡಾವನ್ನು ನಾಲ್ವಡಿ ಅವರು ಸ್ಥಾಪಿಸಿದರು. ಮುಡಾ ಅಂದರೆ ಸರ್ಕಾರ ಅಲ್ಲ. ಸ್ವಂತವಾಗಿ ಪ್ರಾಧಿಕಾರದ ವತಿಯಿಂದಲೇ ಬಡಾವಣೆಗಳ ನಿರ್ಮಾಣ ಮಾಡಿ ಬಡವರು ಹಾಗೂ ಮಧ್ಯಮ ವರ್ಗದವರಿಗೆ ನಿವೇಶನಗಳನ್ನು ಮಾಡಿಕೊಡುವಂತಹ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ರೈತರ ಕಲ್ಯಾಣಕ್ಕಾಗಿ, ಆಹಾರ ಉತ್ಪಾದನೆಗಾಗಿ ಹಲವಾರು ಕಾರ್ಯಕ್ರಮಗಳನ್ನು ತಂದರು ಎಂದು ತಿಳಿಸಿದರು.

ಹಿರಿಯ ಪ್ರಾಧ್ಯಾಪಕ ಪ್ರೊ.ವೈ.ಹೆಚ್.ನಾಯಕವಾಡಿ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೆಲಸ ಹಾಗೂ ಸಾಧನೆ ಅಪಾರ. ಆದರೆ ಇವರ ಸಾಧನೆಗಳನ್ನು ಉಲ್ಲೇಖಿಸದ ಬಹುಸಂಖ್ಯಾತ ಆಸ್ಥಾನಿಕ ವಿದ್ವಾಂಸರು ಹಾಗೂ ರಾಷ್ಟ್ರೀಯವಾದಿ ಇತಿಹಾಸಕಾರರು ನ್ಯಾಯವನ್ನು ಒದಗಿಸಲಿಲ್ಲ. ಕರ್ನಾಟಕದ ಇತಿಹಾಸದಲ್ಲಿ ವಿಶೇಷವಾಗಿ ಮೈಸೂರಿನ ಇತಿಹಾಸದಲ್ಲಿ ಅವರಿಗೆ ಅನ್ಯಾಯವಾಗಿದೆ. ದಲಿತರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದರಲ್ಲದೆ, ಅವರನ್ನು ಪ್ರೋತ್ಸಾಹಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಒಂದು ವರ್ಗದ ಇತಿಹಾಸಕಾರರು, ವಿದ್ವಾಂಸರು ಕರ್ನಾಟಕದ ಇತಿಹಾಸದಲ್ಲಿ ಹಾಗೂ ಮೈಸೂರಿನ ಚರಿತ್ರೆಯಲ್ಲಿ ಕಡೆಗಣಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಓದುತ್ತಿದ್ದ ಸಂದರ್ಭದಲ್ಲೇ ಅವರ ತಂದೆ ನಿಧನರಾದರು. ಇದರಿಂದ 18ನೇ ವಯಸ್ಸಿನಲ್ಲೇ ರಾಜ್ಯವನ್ನು ಮುನ್ನಡೆಸುವ ಜವಾಬ್ದಾರಿ ವಹಿಸಿಕೊಂಡರು. ಅಧಿಕಾರ ವಹಿಸಿಕೊಂಡ ಅವರು ಬೆಳಗ್ಗೆ 11 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಅರಮನೆ ಆಡಳಿತ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಹೀಗಾಗಿ ಇವರ ಕಾಲದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ನಡೆದವು ಎಂದರು.

ಕಾರ್ಯಕ್ರಮದಲ್ಲಿ ಇತಿಹಾಸ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ಸತ್ಯನಾರಾಯಣ, ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ಪಿ.ಸಿದ್ದಾಶ್ರಮ, ಇತಿಹಾಸ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ಕೆ.ಸದಾಶಿವ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠದ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ.ಎನ್.ಸರಸ್ವತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಪಕ್ಷಗಳ ವಿರೋಧದ ನಡುವೆ ವಕ್ಫ್ ಮಸೂದೆ ತಿದ್ದುಪಡಿಗೆ ಜಂಟಿ ಸಂಸದೀಯ ಸಮಿತಿ ಒಪ್ಪಿಗೆ

ನವದೆಹಲಿ, ಜ.27– ಸಂಸತ್ತಿನ ಜಂಟಿ ಸಮಿತಿಯು ವಕ್ಫ್ ತಿದ್ದುಪಡಿ ಮಸೂದೆಗೆ ಇಂದು (ಜ.27) ಅನುಮೋದನೆ ನೀಡಿದೆ. ಈ ಮಸೂದೆಯನ್ನು ಕಳೆದ ವರ್ಷ ಆಗಸ್ಟ್‌ನಲ್ಲಿ ಸಂಸತ್ತಿನಲ್ಲಿ ಮಂಡಿಸಲಾಗಿತ್ತು. ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆಗೆ ಅನುಮೋದನೆ ನೀಡಲಾಗಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸದಸ್ಯರು ಮಂಡಿಸಿದ 14 ತಿದ್ದುಪಡಿಗಳನ್ನು ಜೆಪಿಸಿ ಅಂಗೀಕರಿಸಿದ್ದು, ವಿರೋಧ ಪಕ್ಷದ ಸದಸ್ಯರು ಮಂಡಿಸಿದ್ದ ಎಲ್ಲಾ ತಿದ್ದುಪಡಿಗಳನ್ನು ತಿರಸ್ಕರಿಸಿದೆ. ಧಾರ್ಮಿಕ ಉದ್ದೇಶಗಳಿಗಾಗಿ ಬಳಸಲಾಗುತ್ತಿರುವ ವಕ್ಫ್ ಆಸ್ತಿಗಳನ್ನು 'ಬಳಕೆಯಿಂದ ವಕ್ಫ್' ನೀತಿಯ ಆಧಾರದ ಮೇಲೆ ಪ್ರಶ್ನಿಸದಿರುವ ಅಂಶವನ್ನು ತೆಗೆದುಹಾಕಿರುವುದು, ಈ ತಿದ್ದುಪಡಿ ಮಸೂದೆಯ ಪ್ರಮುಖ ಅಂಶವಾಗಿದೆ.

ಜಂಟಿ ಸಮಿತಿಯ ಸಭೆಯ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್, ಎನ್‌ಡಿಎ ಸದಸ್ಯರು ಮಂಡಿಸಿದ 14 ತಿದ್ದುಪಡಿಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿದರು. ವಿರೋಧ ಪಕ್ಷದ ಸದಸ್ಯರು ಹಲವು ತಿದ್ದುಪಡಿಗಳನ್ನು ಮಂಡಿಸಿದ್ದರಾದರೂ, ಅವೆಲ್ಲವನ್ನೂ ಮತದಾನದ ಮೂಲಕ ತಿರಸ್ಕರಿಸಲಾಗಿದೆ ಎಂದು ಜಗದಂಬಿಕಾ ಪಾಲ್ ಸ್ಪಷ್ಟಪಡಿಸಿದ್ದಾರೆ.

ಸಮಿತಿಯು ಅಂಗೀಕರಿಸಿದ ತಿದ್ದುಪಡಿಗಳು ಕಾನೂನನ್ನು ಉತ್ತಮ ಮತ್ತು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುತ್ತದೆ ಎಂದು ಜಗದಂಬಿಕಾ ಪಾಲ್ ಸಭೆಯಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ವಕ್ಫ್ ತಿದ್ದುಪಡಿ ಮಸೂದೆಗೆ ಅಂಗೀಕಾರ ನೀಡುವ ಜೆಪಿಸಿ ಪ್ರಕ್ರಿಯೆಯನ್ನು ಪ್ರಜಾಸತ್ತಾತ್ಮಕ ಎಂದು ಬಣ್ಣಿಸಿರುವ ಜಗದಂಬಿಕಾ ಪಾಲ್, ಅಂಗೀಕರಿಸಿದ ತಿದ್ದುಪಡಿಗಳು ಉತ್ತಮ ಮಸೂದೆಯನ್ನು ರೂಪಿಸುತ್ತವೆ ಎಂದು ಬಲವಾಗಿ ನಂಬಿರುವುದಾಗಿ ಹೇಳಿದ್ದಾರೆ.

ಸಮಿತಿಯು ಬಿಜೆಪಿ ನೇತೃತ್ವದ ಎನ್‌ಡಿಎ ಮಂಡಿಸಿದ 14 ತಿದ್ದುಪಡಿಗಳನ್ನು ಅಂಗೀಕರಿಸಿತು. ಆದರೆ ವಿರೋಧ ಪಕ್ಷದ ಸದಸ್ಯರು ಸೂಚಿಸಿದ ಪ್ರತಿಯೊಂದು ಬದಲಾವಣೆಯನ್ನೂ ತಿರಸ್ಕರಿಸಿತು. ಜೆಪಿಸಿ ಅಧ್ಯಕ್ಷರ ನಡೆಯನ್ನು ತೀವ್ರವಾಗಿ ಖಂಡಿಸಿರುವ ಪ್ರತಿಪಕ್ಷ ಸದಸ್ಯರು, ಇದೊಂದು ಅಸಂವಿಧಾನಿಕ ಮತ್ತು ಅಪ್ರಜಾಸತ್ತಾತ್ಮಕ ಸಭೆ ಎಂದು ಜರಿದಿವೆ.

ಈ ಕುರಿತು ಮಾತನಾಡಿರುವ ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ, ಜಗದಂಬಿಕಾ ಪಾಲ್ ಅವರ ನಡೆ ಪ್ರಜಾಪ್ರಭುತ್ವವನ್ನು ಅಣಕಿಸುವಂತಿತ್ತು. ಸಭೆಯ ಸಮಯದಲ್ಲಿ ಯಾವುದೇ ನಿಯಮಗಳು ಅಥವಾ ಕಾರ್ಯವಿಧಾನಗಳನ್ನು ಪಾಲಿಸಲಾಗಿಲ್ಲ ಎಂದು ಆರೋಪಿಸಿದ್ದಾರೆ.

ಮಂಜರಿ ಮಹೋತ್ಸವ 2025ಕ್ಕೆ ಚಾಲನೆ


ಶ್ರೀ ನಟರಾಜ ಪ್ರದರ್ಶನ ಕಲೆಗಳ ಕೇಂದ್ರದ ವತಿಯಿಂದ ಆಯೋಜಿಸಿದ್ದ ಮೂರು ದಿನಗಳ ಮಂಜರಿ ಮಹೋತ್ಸವ–2025ಕ್ಕೆ ಚಾಲನೆ ದೊರಕಿತು.

ಮೈಸೂರು, ಜ.27(ಎಸ್‌ಪಿಎನ್)– ಇಲ್ಲಿನ ಕುವೆಂಪುನಗರದ ಗಾನಭಾರತಿ ಆವರಣದ ರಮಾಗೋವಿಂದ ಕಲಾವೇದಿಕೆಯಲ್ಲಿ ಶ್ರೀ ನಟರಾಜ ಪ್ರದರ್ಶನ ಕಲೆಗಳ ಕೇಂದ್ರದ ವತಿಯಿಂದ ಆಯೋಜಿಸಿದ್ದ ಮೂರು ದಿನಗಳ ಮಂಜರಿ ಮಹೋತ್ಸವ–2025ಕ್ಕೆ ಬೆಂಗಳೂರು ಸಂಸ್ಕೃತಿ ದಿ ಟೆಂಪಲ್ ಆಫ್ ಆರ್ಟ್ ನಿರ್ದೇಶಕ ವಿದ್ವಾನ್ ಡಾ.ಸತ್ಯನಾರಾಯಣ ರಾಜು ಚಾಲನೆ ನೀಡಿ, ಶುಭ ಹಾರೈಸಿದರು.

ನಂತರ ವಿದುಷಿ ಡಾ.ಕೃಪಾಫಡ್ಕೆ ಮಾತನಾಡಿ, ಭಾರತೀಯ ಕಲೆಗಳ ಉಳಿಯಬೇಕಾದರೆ ಯುವ ಪೀಳಿಗೆಗೆ ಭಾರತೀಯ ಕಲೆಗಳಾದ ಭರತನಾಟ್ಯ, ಶಾಸ್ತ್ರೀಯ ಸಂಗೀತ, ಭಜನ್, ದೇಶಭಕ್ತಿಗಳು ಸೇರಿದಂತೆ ಇತರೆ ಕಲೆಗಳ ಉಳಿವಿಗೆ ಎಲ್ಲರೂ ಶ್ರಮಿಸಬೇಕು. ಮೈಸೂರಿನಲ್ಲಿ ರಾಜಾಶ್ರಯದ ನಂತರವೂ ಶಾಸ್ತ್ರೀಯ ಕಲೆಗಳ ಉಳಿವಿಗೆ ಮೈಸೂರು ಪ್ರೇಕ್ಷಕರ ಸಹಕಾರ ಅಪಾರ ಎಂದರು.

ಈ ವೇಳೆ ಮುಂಬೈನ ಶೇಷುಕುಮಾರಿ ಅವರ ಪತಿ ಟಿರಘು ಸ್ಮರಣಾರ್ಥ ವಿದ್ವಾನ್ ಶಿಜಿತ್ ನಂಬಿಯಾರ್, ಮೆನನ್ ಹಾಗೂ ವಿದ್ವಾನ್ ಡಾ.ಸತ್ಯನಾರಾಯಣ ರಾಜು ಅವರನ್ನು ಸನ್ಮಾನಿಸಲಾಯಿತು.

ತದನಂತರ ವಿದ್ವಾನ್ ಶಿಜಿತ್ ನಂಬಿಯಾರ್ ಮತ್ತು ಮೆನನ್ ಅವರಿಂದ ಭರತ್ಯನಾಟ್ಯ ಪ್ರದರ್ಶನ ನೀಡಿದರು. ವಿದುಷಿ ಪೂಜಾ ಸುಗಮ್ ಮತ್ತು ವಿದುಷಿ ಸಮೀಕ್ಷಾ ಮನುಕುಮಾರ್ ಅವರು ಭರತನಾಟ್ಯ ಪ್ರದರ್ಶಿಸಿದರು. ಅಂತೆಯೇ ವಿದುಷಿ ಅನುಶ್ರೀ ಪದ್ಮನಾಭ್ ಅವರಿಂದ ಒಡಿಸ್ಸಿ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿದರಲ್ಲದೆ, ವಿದುಷಿ ಶೈಲಾ ಚಂದ್ರಶೇಖರ್ ಮತ್ತು ವಿದುಷಿ ದೀಪ್ತಿ ರಾಧಾಕೃಷ್ಣನ್ ಅವರ ನೃತ್ಯ ಎಲ್ಲರ ಗಮನ ಸೆಳೆಯಿತು.

ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ ನಿರ್ದೇಶಕರಾದ ವಿದುಷಿ ಡಾ.ಕೃಪಾ ಫಡ್ಕೆ ಶ್ರೀ ನಟರಾಜ ಪ್ರದರ್ಶಕ ಕಲೆಗಳ ಕೇಂದ್ರದ ಅಧ್ಯಕ್ಷ ಎಂ.ಕೆ.ಬಾಲರಾಜು, ಮ್ಯಾನೇಜಿಂಗ್ ಟ್ರಸ್ಟಿ ವಿದುಷಿ ನಾಗಶ್ರೀ ಫಣೀಂದ್ರ ಕುಮಾರ್, ಕಾರ್ಯದರ್ಶಿ ಫಣೀಂದ್ರ ಕುಮಾರ್ ಸೇರಿದಂತೆ ಉಪಸ್ಥಿತರಿದ್ದರು.

ನಟ ಶಿವರಾಜ್‌ಕುಮಾರ್ ಆರೋಗ್ಯ ವಿಚಾರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು,ಜ.27(ಕೆಎಂಶಿ)– ಅಮೆರಿಕದಲ್ಲಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆದು ಗುಣಮುಖರಾಗಿ ಹಿಂದಿರುಗಿದ ನಟ ಶಿವರಾಜ್ ಕುಮಾರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.




ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯ ಮಂತ್ರಿ, ನಟ ಶಿವರಾಜ್ ಕುಮಾರ್ ಯಶಸ್ವಿ ಶಸ್ತ್ರಚಿಕಿತ್ಸೆಯಿಂದ ಹಿಂತಿರುಗಿದ್ದು, ಅವರ ಆರೋಗ್ಯ ವಿಚಾರಿಸಲು ನಿವಾಸಕ್ಕೆ ಭೇಟಿ ನೀಡಿದ್ದೇನೆ. ಶಸ್ತ್ರಚಿಕಿತ್ಸೆಗೆ ಒಳಗಾದ ಮರುದಿನವೇ ದೂರವಾಣಿ ಕರೆ ಮಾಡಿದ್ದೆ ಎಂದರು.

ಶಿವರಾಜ್ ಕುಮಾರ್ ಚೇತರಿಸಿಕೊಂಡಿದ್ದು, ಮುಂದಿನ ತಿಂಗಳಿನಿಂದ ಚಿತ್ರೀಕರಣದಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದ್ದಾರೆ ಎಂದರು.

'ಬಿಗ್ ಬಾಸ್' ಟ್ರೋಫಿ ಗೆದ್ದ ಹನುಮಂತ

ಬೆಂಗಳೂರು, ಜ.27– ಕಲರ್ಸ್ ಕನ್ನಡ ಮನರಂಜನಾ ವಾಹಿನಿಯ ಬಿಗ್ ಬಾಸ್ ಕನ್ನಡ ಸೀಸನ್ 11ರ ವಿಜೇತರಾಗಿ ಕುರಿಗಾಹಿ ಹನುಮಂತ ಲಮಾಣಿ ಹೊರಹೊಮ್ಮಿದ್ದಾರೆ.



ರೆಕ್ಕೆಗಳನ್ನೊಳಗೊಂಡ ಬಿಬಿಕೆ 11 ವಿನ್ನರ್ ಟ್ರೋಫಿಯೊಂದಿಗೆ 60 ಲಕ್ಷ ನಗದು ಬಹುಮಾನ ಹನುಮಂತ ಲಮಾಣಿಗೆ ದಕ್ಕಿದೆ. ಇವರಿಗೆ ವೀಕ್ಷಕರು ಒಟ್ಟು 5,23,89,318 ವೋಟ್ಸ್ ನೀಡಿದ್ದಾರೆ. ಬಿಗ್ ಬಾಸ್ ಕನ್ನಡ ಇತಿಹಾಸದ ಇಷ್ಟೂ ಸೀಸನ್‌ಗಳಲ್ಲಿ ವಿನ್ನರ್‌ಗೆ ಇಷ್ಟೊಂದು ವೋಟ್ಸ್ ಬಿದ್ದಿರೋದು ಇದೇ ಮೊದಲು. ಟಾಸ್ಕ್‌ಗಳನ್ನು ಉತ್ತಮವಾಗಿ ಎದುರಿಸುತ್ತಿದ್ದ ತ್ರಿವಿಕ್ರಮ್ ರನ್ನರ್ ಅಪ್ ಆಗಿದ್ದಾರೆ. ಇವರಿಗೆ 2 ಕೋಟಿಗೂ ಅಧಿಕ ವೋಟ್ಸ್ ಬಿದ್ದಿವೆ. ರಜತ್ ಎರಡನೇ ರನ್ನರ್ ಅಪ್ ಆಗಿದ್ದಾರೆ. ಬಿಗ್ ಬಾಸ್ ಕನ್ನಡ ಇತಿಹಾಸದಲ್ಲಿಯೇ ಓರ್ವ ವೈಲ್ಡ್ ಕಾರ್ಡ್ ಸ್ಪರ್ಧಿ ವಿನ್ನರ್ ಆಗಿರೋದು ಇದೇ ಮೊದಲು.

ಸ್ಕೂಟರ್‌ಗೆ ಲಾರಿ ಡಿಕ್ಕಿ: ಮಹಿಳೆ ಸಾವು

ಮೈಸೂರು, ಜ. 27(ಆರ್‌ಕೆ)– ಸ್ಕೂಟರ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸಾವನ್ನಪ್ಪಿರುವ ಘಟನೆ ಮೈಸೂರಿನ ಕೂರ್ಗಳ್ಳಿ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಮೈಸೂರು ತಾಲೂಕು, ಇಲವಾಲ ನಿವಾಸಿ ರೇವಣ್ಣ ಅವರ ಪತ್ನಿ ಭಾಗ್ಯ(45) ಸಾವನ್ನಪ್ಪಿದ ಮಹಿಳೆ. ಇಲವಾಲ ರಸ್ತೆಯಿಂದ ಕೂರ್ಗಳ್ಳಿ ಮಾರ್ಗ ಹೂಟಗಳ್ಳಿ ಕಡೆಗೆ ಭಾಗ್ಯ ಬರುತ್ತಿದ್ದ ಸ್ಕೂಟರ್‌ಗೆ ಹಿಂದಿನಿಂದ ಬಂದ ಲಾರಿ ಆಟೋಮೋಟಿವ್ ಆಕ್ಸಲ್ ಎದುರು ಬೆಳಗ್ಗೆ 11.55 ಗಂಟೆಯಲ್ಲಿ ಡಿಕ್ಕಿ ಹೊಡೆಯಿತು.

ಈ ವೇಳೆ ಕೆಳಕ್ಕೆ ಬಿದ್ದ ಭಾಗ್ಯ ಅವರ ಮೇಲೆ ಲಾರಿ ಚಕ್ರ ಹರಿದ ಪರಿಣಾಮ ಅವರು ಸ್ಥಳದಲ್ಲೇ ಕೊನೆಯುಸಿರೆಳೆದರು ಎಂದು ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಟ್ರಾಫಿಕ್ ಠಾಣೆ ಪೊಲೀಸರು ತಿಳಿಸಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಮೈಕ್ರೋ ಫೈನಾನ್ಸ್ ಹಾವಳಿಯಿಂದ ರೈತರಿಗೆ ಭಾರಿ ಪೆಟ್ಟು

ರೈತ ಮುಖಂಡ ಟಿ.ಎಲ್. ಕೃಷ್ಣೇಗೌಡ

ಮೈಸೂರು,ಜ.27(ಎಂಟಿವೈ)–ಕಾರ್ಪೋರೇಟ್ ಕಂಪನಿಗಳು ವಿವಿಧ ಕಾರಣ ನೀಡಿ ರೈತರನ್ನು ಭಿಕ್ಷುಕರನ್ನಾಗಿ ಬಿಂಬಿಸುತ್ತಿರುವುದರಿಂದ ರೈತರಿಗೆ ಮದುವೆಯಾಗಲು ಹೆಣ್ಣು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಮಂಡ್ಯದ ರೈತ ಮುಖಂಡ ಟಿ.ಎಲ್.ಕೃಷ್ಣೇಗೌಡ ವಿಷಾದಿಸಿದ್ದಾರೆ.

ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿ ಸಭಾಂಗಣದಲ್ಲಿ ಭೂಮಿ ಬಳಗ ಭಾನುವಾರ ಆಯೋಜಿಸಿದ್ದ 'ಸಂಗಾತಿಯರು ಸಿಗದ ಸಂಕಟ ಮತ್ತು ಹೆಣ್ಣು ಭ್ರೂಣ ಹತ್ಯೆ: ಸಮಸ್ಯೆ ಮತ್ತು ಪರಿಹಾರ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಕ್ಷೇತ್ರವೂ ಕಾರ್ಪೊರೇಟ್ ಕಂಪನಿಗಳಂತೆ ಆಗುತ್ತಿದೆ. ಸಣ್ಣ ಭೂಹಿಡುವಳಿದಾರರು ಭೂಮಿ ಕಳೆದುಕೊಂಡು ಕೂಲಿ ಕಾರ್ಮಿಕರಾಗುತ್ತಿದ್ದಾರೆ. ಶಿಕ್ಷಣ, ಆರೋಗ್ಯ, ಆಹಾರ ಖಾಸಗೀಕರಣದಿಂದ ಜೀವನವೇ ದುಬಾರಿಯಾಗಿದೆ. ಆದಾಯ ಖಾತ್ರಿ, ಬದುಕಿನ ಖಾತ್ರಿಯಿಲ್ಲದ ಕಾರಣಕ್ಕೆ ರೈತರು, ಗಂಡು ಮಕ್ಕಳಿಗೆ ಮದುವೆಯಾಗಲು ಹೆಣ್ಣು ಸಿಗುತ್ತಿಲ್ಲ. ಕೃಷಿ ಮತ್ತು ಅದರ ಆಯಾಮಗಳ ಸಮಸ್ಯೆಗಳಿಗೆ ಪರಿಹಾರ ಸಿಗದೇ ಸಂಗಾತಿಯರು ಸಿಗದ ಸಂಕಟವೂ ಬಗೆಹರಿಯಲ್ಲ. ಈ ಸಮಸ್ಯೆ ಮಂಡ್ಯ, ಭಾರತಕ್ಕೆ ಸೀಮಿತವಲ್ಲ. ಅಮೆರಿಕಾ, ಯೂರೋಪ್ ಸೇರಿದಂತೆ ಬೇರೆ ದೇಶದಲ್ಲೂ ಇದೆ. ಫ್ರಾನ್ಸ್‌ನಲ್ಲಿ ಕೃಷಿಯಲ್ಲಿ ತೊಡಗಿರುವ ಶೇ.25ರಷ್ಟು ಯುವಕರಿಗೆ ಹೆಣ್ಣು ಸಿಗುತ್ತಿಲ್ಲ. ಈ ಸಮಸ್ಯೆಗಳಿಗೆ ಬೇರೆ ಬೇರೆ ಕಾರಣಗಳಿವೆ. ವಿದೇಶಗಳಲ್ಲೂ ರೈತ ಆತ್ಮಹತ್ಯೆಗಳು ಸಂಭವಿಸುತ್ತಿವೆ ಎಂದರು.



ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿ ಸಭಾಂಗಣದಲ್ಲಿ ಭೂಮಿ ಬಳಗ ಭಾನುವಾರ ಆಯೋಜಿಸಿದ್ದ 'ಸಂಗಾತಿಯರು ಸಿಗದ ಸಂಕಟ ಮತ್ತು ಹೆಣ್ಣು ಭ್ರೂಣ ಹತ್ಯೆ: ಸಮಸ್ಯೆ ಮತ್ತು ಪರಿಹಾರ' ಕಾರ್ಯಕ್ರಮವನ್ನು ಮಂಡ್ಯದ ರೈತ ಮುಖಂಡ ಟಿ.ಎಲ್.ಕೃಷ್ಣೇಗೌಡ ಉದ್ಘಾಟಿಸಿದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ಮದುವೆಗೆ ಹೆಣ್ಣು ಸಿಗುತ್ತಿಲ್ಲ ಎಂಬ ಸಮಸ್ಯೆಯೊಂದಿಗೆ ಥಳುಕು ಹಾಕಲಾಗುತ್ತಿದೆ. ಆದರೆ, ಇದು ಸಮಸ್ಯೆಯನ್ನು ಸಂಕುಚಿತಗೊಳಿಸುವ ಪ್ರಯತ್ನವಷ್ಟೇ. ಸುಖಕ್ಕಾಗಿ ಹಾತೊರೆಯುವುದು ಅಭಿವೃದ್ಧಿಯೇ? ಬಂಡವಾಳಶಾಹಿಗಳು ಭೌತಿಕ ಸುಖಕ್ಕಾಗಿ ಅಂತಹ ನಾಗರಿಕತೆ ಕಟ್ಟುತ್ತಿದ್ದಾರೆ. ಅದಕ್ಕಾಗಿ ಬಿಡಿ ಉತ್ಪಾದಕರನ್ನು ನಾಶ ಮಾಡಿ, ಗ್ರಾಹಕರ ಪಡೆ, ಕಡಿಮೆ ವೆಚ್ಚದಲ್ಲಿ ಕಾರ್ಮಿಕರನ್ನು ಸೃಷ್ಟಿಸಲಾಗುತ್ತಿದೆ. ಇದು ಹಿಂದಿಗಿಂತ ಈಗ ಅಧಿಕವಾಗಿದೆ. ಪರ್ಯಾಯ ಉದ್ಯೋಗ ಕೊಟ್ಟರೆ ಶೇ.57ರಷ್ಟು ರೈತರು ಕೃಷಿ ಬಿಡಲು ಸಿದ್ಧವಾಗಿದ್ದಾರೆ. ಏಕೆ ಈ ಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರಶ್ನಿಸಿದರು.

1997ರಲ್ಲಿ ಎಸ್.ಎಂ.ಕೃಷ್ಣ ಸರ್ಕಾರದ ಅವಧಿಯಲ್ಲೇ ಮೈಕ್ರೋ ಫೈನಾನ್ಸ್‌ಗಳಿಂದ ಹಳ್ಳಿಗಳಲ್ಲಿ ಸಾಲ ಕೊಡಲು ಶುರುವಾಯಿತು. ಬಹುರಾಷ್ಟ್ರೀಯ ಕಂಪನಿಗಳ ಗ್ರಾಹಕರನ್ನು ತಯಾರು ಮಾಡಲು ಹಳ್ಳಿಗರ ಕೈಯಲ್ಲಿ ಹಣ ಕೊಡಲಾಯಿತು. ಟಿವಿ, ಫ್ರಿಡ್ಜ್ ಇನ್ನಿತರ ವಸ್ತುಗಳ ಖರೀದಿಗಾಗಿ ಸಾಲ ಮಾಡಿದ್ದಾರೆ. ಇದರಿಂದ ಯಾರಿಗೆ ಲಾಭವಾಯಿತು. ಮೈಕ್ರೋ ಫೈನಾನ್ಸ್‌ಗಳಿಂದ ಮಂಡ್ಯ ಜಿಲ್ಲೆಯೊಂದರಲ್ಲೇ 2,880 ಕೋಟಿ ರೂ. ಮತ್ತು ರಾಜ್ಯದಲ್ಲಿ 63 ಸಾವಿರ ಕೋಟಿ ರೂ. ಸಾಲ ಕೊಡಲಾಗಿದೆ. ರೈತರಿಗೆ ಅಷ್ಟೇ ಅಲ್ಲ, ಮೈಕ್ರೋ ಫೈನಾನ್ಸ್‌ಗಳ ಸಾಲಗಾರರಿಗೂ ಮದುವೆಗೆ ಹೆಣ್ಣು ಕೊಡಲ್ಲ ಎಂದು ತಿಳಿಸಿದರು.

ಭೂಮಿ ಬಳಗದ ಅಧ್ಯಕ್ಷ, ಚಿಂತಕ ಡಾ.ಹಿ.ಸಿ.ರಾಮಚಂದ್ರೇಗೌಡ ಮಾತನಾಡಿ, ರೈತ ಯುವಕರಿಗೆ ಮದುವೆ ಹೆಣ್ಣು ಸಿಗುತ್ತಿಲ್ಲ ಎಂಬುದು ಹಾಸ್ಯವಲ್ಲ. ಗಂಭೀರ ಸಮಸ್ಯೆ. ಗಂಡಂದಿರಿಗಿಂತ ಹೆಂಡತಿಯಿಂದಲೇ ವಿಚ್ಛೇದನ ಕೊಡುವುದು ಅಧಿಕವಾಗಿದೆ. ಹೆಚ್ಚಿನ ಮಕ್ಕಳನ್ನು ಹೆರಬೇಕೆಂದು ಸ್ವಾಮೀಜಿಗಳು, ರಾಜಕಾರಣಿಗಳು ಹೇಳುತ್ತಿದ್ದಾರೆ ಇದೆಲ್ಲ ಜ್ವಲಂತ ಸಮಸ್ಯೆಗಳು. ಕುಟುಂಬವಿಲ್ಲದೇ ಸಮಾಜದ ಅಸ್ತಿತ್ವ ಇಲ್ಲ. ಕೌಟುಂಬಿಕ ವ್ಯವಸ್ಥೆ ಮೇಲೆ ಇವುಗಳೆಲ್ಲ ಪರಿಣಾಮ ಬೀರುತ್ತಿವೆ ಎಂದರು.

ಕಾರ್ಯಕ್ರಮದಲ್ಲಿ ಮೈವಿವಿ ಮನೋವಿಜ್ಞಾನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ.ಜಿ.ವೆಂಕಟೇಶ್ ಕುಮಾರ್, ಮಕ್ಕಳ ಹಕ್ಕುಗಳ ಸಂಪನ್ಮೂಲ ವ್ಯಕ್ತಿ ಧನುಂಜಯ ಎಲಿಯೂರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಸಂಕ್ರಾಂತಿಕಿ ವಸ್ತುನ್ನಾಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರುದ್ರ ಗರುಡ ಪುರಾಣ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಮಾರ್ಕೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಫಾರೆಸ್ಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫಾರೆಸ್ಟ್ (ಕ)	5 ಪ್ರದರ್ಶನಗಳು
ರಾಜಕಮಲ್	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಭೂ ಮಂತರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕೈ ಫೋರ್ಸ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಭೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಭೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುಡಾ ಕಚೇರಿಯಲ್ಲಿ ಲೋಕಾಯುಕ್ತ ಅಧಿಕಾರಿಗಳ ಮುಂದುವರಿದ ಶೋಧ

ಮೈಸೂರು, ಜ. 27(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ನಿಯಮ ಬಾಹಿರವಾಗಿ ಮುಡಾದ 14 ನಿವೇಶನ ಮಂಜೂರು ಮಾಡಿದ ಪ್ರಕರಣ ಕುರಿತು ತನಿಖೆ ನಡೆಸುತ್ತಿರುವ ಲೋಕಾಯುಕ್ತ ಮೈಸೂರು ಎಸ್ಪಿ ಕಚೇರಿ ಅಧಿಕಾರಿಗಳು ಇಂದೂ ಪ್ರಾಧಿಕಾರದ ಕಚೇರಿಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದರು.

ಸೋಮವಾರ ಬೆಳಗ್ಗೆ 9 ಗಂಟೆಯಿಂದಲೇ ಮುಡಾ ಕಚೇರಿ ಸಭಾಂಗಣದಲ್ಲಿ ಆಡಿಯೋ ರೆಕಾರ್ಡ್ ಆಲಿಸಿ ಟೈಪ್ ಮಾಡುವ ಪ್ರಕ್ರಿಯೆ ಆರಂಭಿಸಿದರು. ಪಾರ್ವತಿ ಅವರಿಗೆ ಜಮೀನಿನ ಬದಲಾಗಿ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ಬೆಲೆಬಾಳುವ ನಿವೇಶನಗಳನ್ನು ಕಾನೂನು ಬಾಹಿರವಾಗಿ ಹಂಚಿಕೆ ಮಾಡಲು ನಿರ್ಧರಿಸಿದ ಸಭೆಯ ನಿರ್ಣಯ. ಸಭಾ ನಡಾವಳಿ ಪಟ್ಟಿ, ಸಿಸಿ ಕ್ಯಾಮರಾದಲ್ಲಿ ರೆಕಾರ್ಡ್ ಆಗಿರುವ ಆಡಿಯೋ ಕೇಳಿಕೊಂಡು ನಮೂದು ಮಾಡಿಕೊಂಡರು.

ಮುಡಾದ 10 ಮಂದಿ ಸಿಬ್ಬಂದಿ ಬಳಸಿಕೊಂಡು ಆಡಿಯೋ ಸಂಭಾಷಣೆಯಲ್ಲಿ ರೆಕಾರ್ಡ್ ಆಗಿರುವ ವಾಯ್ಸ್ ರೆಕಾರ್ಡ್‌ಗಳನ್ನು ಆಲಿಸಿ ಸಭಾ ನಡಾವಳಿ ಬರೆದಿರುವುದರ ವ್ಯತ್ಯಾಸ ತಿಳಿದು ನೋಟ್ ಮಾಡಿಕೊಳ್ಳುತ್ತಿರುವ ಲೋಕಾಯುಕ್ತ ಅಧಿಕಾರಿಗಳು ನಿರತರಾಗಿದ್ದಾರೆ.

ಇಂದು ಎಸ್ಪಿ ಟಿ.ಜೆ. ಉದೇಶ ಧಾರವಾಡಕ್ಕೆ ತೆರಳಿ ಹೈಕೋರ್ಟ್ ಪೀಠಕ್ಕೆ ಈವರೆಗೆ ನಡೆಸಿರುವ ತನಿಖಾ ವರದಿಯನ್ನು ಸಲ್ಲಿಸಿದರು. ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿರುವ ಉಚ್ಚನ್ಯಾಯಾಲಯವು, ತೀರ್ಪನ್ನು ಕಾಯ್ದಿರಿಸಿದೆ.

ಜಸ್ಪ್ರೀತ್ ಬುಮ್ರಾ ಮುಡಿಗೆ ವರ್ಷದ ಟೆಸ್ಟ್ ಕ್ರಿಕೆಟಿಗ ಕಿರೀಟ ತೊಡಿಸಿದ ಐಸಿಸಿ

ಐಸಿಸಿ, 2024ರ ವರ್ಷದ ಟೆಸ್ಟ್ ಕ್ರಿಕೆಟಿಗನಾಗಿ ಭಾರತದ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಅವರನ್ನು ಆಯ್ಕೆ ಮಾಡಿದೆ. 2024 ರಲ್ಲಿ ಸ್ಮರಣೀಯ ಪ್ರದರ್ಶನ ನೀಡಿದ್ದ ಜಸ್ಪ್ರೀತ್ ಬುಮ್ರಾ ಇದೀಗ ವರ್ಷದ ಟೆಸ್ಟ್ ಕ್ರಿಕೆಟಿಗರಾಗಿ ಆಯ್ಕೆಯಾಗಿದ್ದಾರೆ.



ಜಸ್ಪ್ರೀತ್ ಬುಮ್ರಾ ಕಳೆದ ವರ್ಷ ಟೆಸ್ಟ್ ಕ್ರಿಕೆಟ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದರು. ಅದರಲ್ಲೂ ಆಸ್ಟ್ರೇಲಿಯಾ ಪ್ರವಾಸದಲ್ಲಿ ಭಾರತದ ಪರವಾಗಿ ಸ್ಥಿರ ಪ್ರದರ್ಶನ ನೀಡಿದ ಏಕೈಕ ಆಟಗಾರನೆಂದರೆ ಅದು ಬುಮ್ರಾ. ಇಡೀ ಸರಣಿಯಲ್ಲಿ ಬುಮ್ರಾ ತಮ್ಮ ಕರಾರುವಕ್ಕಾದ ದಾಳಿಯಿಂದ ಆಸೀಸ್ ಆಟಗಾರರನ್ನು ಕಟ್ಟಿಹಾಕದಿದ್ದರೆ, ಟೀಂ ಇಂಡಿಯಾ ಇಡೀ ಸರಣಿಯಲ್ಲಿ ವೈಟ್ ವಾಶ್ ಮುಖಭಂಗ ಅನುಭವಿಸುವ ಸಾಧ್ಯತೆಗಳಿದ್ದವು. ಆಸೀಸ್ ವಿರುದ್ಧದ ಪ್ರದರ್ಶನಕ್ಕಾಗಿ ಬುಮ್ರಾಗೆ ಸರಣಿ ಶ್ರೇಷ್ಠ ಪ್ರಶಸ್ತಿಯೂ ಲಭಿಸಿತ್ತು. ಇದೀಗ ಐಸಿಸಿ, ಬುಮ್ರಾರನ್ನು ವರ್ಷದ ಟೆಸ್ಟ್ ಕ್ರಿಕೆಟಿಗನಾಗಿ ಆಯ್ಕೆ ಮಾಡಿದೆ.

45 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:21/2024–25 ದಿನಾಂಕ: 23.01.2025..

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗ ವ್ಯಾಪ್ತಿಯ, ನಂ1 ಉಪವಿಭಾಗ, ಮೈಸೂರು, ರವರ 02 ಸಂಖ್ಯೆ ಕಾಮಗಾರಿಗಳಿಗೆ ಮತ್ತು ನಂ 2 ವಿಶೇಷ ಉಪವಿಭಾಗ, ಮೈಸೂರು, ರವರ 01 ಸಂಖ್ಯೆ ಕಾಮಗಾರಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–1ರ ಷರತ್ತು ಮತ್ತು ನಿಯಮ ಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆ ಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ 4ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಈ ವಿಭಾಗ ವ್ಯಾಪ್ತಿಯ ಒಟ್ಟು 03 ಸಂಖ್ಯೆಯ ಕಾಮಗಾರಿಗೆ ದಿ:23.01.2025 ರಿಂದ 06.02.2025ರ ಸಂಜೆ 17:00ರ ವರೆಗೆ ಸಲ್ಲಿಸಬಹುದಾ ಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.5.07ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ ರೂ.0.13 ಲಕ್ಷಗಳು ಹಾಗೂ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.16.43 ಲಕ್ಷಗಳು ಗರಿಷ್ಠ ಇ.ಎಂ.ಡಿ ರೂ.0.41 ಲಕ್ಷಗಳು ಮತ್ತು ಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

DIPR/DDMYS/1175/KSMCA/782/2024-25

PUBLIC NOTICE

PLEASE BE INFORMED that Schedule A to D Property *(described below)* initially owned by Late H. Badri Prasad and now by his legal heirs namely (i) J. Mohan Kumar; (ii) Jayanthi P; (iii) Laksh Kumar P, (iv) Pranav Kumar Punith; (v) Prabha Rani; (vi) Sonu Chandra, (vii) B. Ashok Kumar is subject matter of due diligence on behalf of our Client. Any persons having any claim whatsoever over the Schedule A to D Property is called upon to contact the undersigned with material particulars of such claim, within a period of 10 days from the date of this publication. Failing which, it would be inferred that the Schedule A to D Property is not encumbered in any manner whatsoever.

SCHEDULE A PROPERTY

All the piece and parcel of the property Site 3A & 4A, Municipal Door No.2627,2627/A D7,12627/B D7/B, 2627/C D7/C situated at 1st Main Road V.V. Mohalla, Mysuru, measuring East to West: 39.32 meters and North to South: 48.78 meters in total measuring 1918.02 square meters bounded on:

East by : Property bearing 2627 allotted to H. Munshi Lal
West by : Private Property
North by : K.R.S. Road
South by : Conservancy

SCHEDULE B PROPERTY

All the piece and parcel of the property in Site 3A & 4A bearing Property No. 38-1-10-21A (Old No. 2627/1A D-7), Ward No. 38, situated at 1st Main, V.V. Mohalla, Mysuru, measuring East to West: 13.10 meters and North to South: 48.76 meters in total measuring 639.17 square meter bounded on:

East by : Schedule D Property
West by : Schedule C Property
North by : K.R.S. Road
South by : Conservancy

SCHEDULE C PROPERTY

All the piece and parcel of the property in Site 3A. & 4A bearing Property No. 38-1-10-21B (Old No. 2627/B D—7/B) in Ward No. 38 situated at 1st Main Road, V.V. Mohalla, Mysuru, measuring East to West: 13.10 meters and North to South: 48.76 meters in total measuring 639.17 square meters bounded on:

East by : Schedule B Property
West by : Private Property
North by : K.R.S. Road
South by : Conservancy

SCHEDULE D PROPERTY

All the piece and parcel of the property in Site 3A. & 4A, Property No. 38-1-10-20 (Old No. 2627/C D-7/C) in Ward No. 38 1st Main Road, V.V. Mohalla, Mysuru measuring East to West: 13.10 meters and North to South: 48.76 meters in total measuring 639.17 square meters bounded on:

East by : Site No. 3B & 4B
West by : Schedule B Property
North by : K.R.S. Road
South by : Conservancy

Sri. Prajwal B., Advocate
No. 27, Serpentine Road, Kumara Park West, Bangalore 560020
Mail: prajwal@nbgchambers.com
Phone: 080-23349086
Place : Bengaluru
Date : 27.01.2025

STAR OF MYSORE

SPECIAL ISSUE

Star of Mysore is completing **47** years of service on **16th February 2025** and entering **48th** year of publication. As in the past, this year too we will be publishing a Special Issue.

We request our advertisers and patrons to release their advertisements before **5th February** to facilitate printing as per schedule.

HEAD OFFICE

0821-2496520 (5-LINES)
Ad Dept. - 0821-2496522 / 23
Email : ad@starofmysore.com

Maria G. Fernandes
Advt. Manager: **94485-25060**

Joy Anthony Dove
Sr. Executive-Ad Sales
89516-68960

Prema
Sr. Executive Advertising
98805-49879

K.R. Circle Office: 0821-2431774
D.D. Urs Road Office: 0821-2428695
Kodagu Office: 97314-69871
Mandya Office: 87629-60325
Chamarajanagar: 92422-65657
Nanjangud: 98805-09200 / 99016-02226
T.N. Pura: 94483-05750
Bengaluru: 98440-46761



ಉತ್ತರ ಕ್ರಿಯಾದಿ ಆಹ್ವಾನ



ಶ್ರೀ ಕರೀಗೌಡರು

(ದೈತಮ್ಮತಾಯಿಯ ಗುಡ್ಡಪ್ಪನವರು)

ಇವರು ದಿನಾಂಕ 19–01–2025ನೇ ಭಾನುವಾರ ದೈವಾಧೀನರಾದರೆಂದು ತಿಳಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಹಾಲು ತುಪ್ಪ ಮತ್ತು ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 29–01–2025ರ ಬುಧವಾರ ಬೆಳಗ್ಗೆ 11–30 ರಿಂದ 1 ಗಂಟೆಗೆ ಮೃತರ ಸ್ವಗೃಹ ಹುಣಸೂರು ತಾಲ್ಲೂಕು, ಬಿಳಿಕೆರೆ ಹೋ, ದಳ್ಳಾಳುಕೊಪ್ಪಲು ಗ್ರಾಮ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಪುಟ್ಟಮ್ಮ ಮತ್ತು ಮಕ್ಕಳು ಅಳಿಯಂದಿರು, ಸೊಸೆಯಂದಿರು, ಭಾವ-ಭಾಮೈದುನರು ಮೊಮ್ಮಕ್ಕಳು, ಅಣ್ಣ–ತಮ್ಮಂದಿರು ಹಾಗೂ ಲೇಟ್ ಚನ್ನಮ್ಮನವರ ಕುಟುಂಬವರ್ಗದವರು, ಗ್ರಾಮಸ್ಥರು

ಹಸಿರು ನಮ್ಮ ಉಸಿರು

ಸವಿನೆನಪು




ಶ್ರೀಮತಿ ಚೆಲುವಮ್ಮ — ಯಜಮಾನ್ ಶ್ರೀ ವೆಂಕಟೇಶ್‌ಗೌಡ್ರು

ನೀವು ನಮ್ಮನ್ನಗಲಿ ಹಲವು ವರ್ಷಗಳಾಗಿದ್ದರೂ ನಿಮ್ಮ ಮಾರ್ಗದರ್ಶನ, ಕೃಪಾಶೀರ್ವಾದದಿಂದ ಮುನ್ನಡೆಯುತ್ತಿದ್ದೇವೆ. ಭೌತಿಕವಾಗಿ ನೀವಿಲ್ಲದಿದ್ದರೂ ನಮ್ಮ ಮನದಲ್ಲಿ ಸದಾ ಚಿರ ಸ್ಥಾಯಿಯಾಗಿ ನೆಲೆಸಿದ್ದೀರಿ.

ದುಃಖತಪ್ತರು: ಶ್ರೀನಿವಾಸ್–ಪ್ರೇಮಕುಮಾರಿ, ನಾಗೇಂದ್ರ (ರಮೇಶ್)– ಹೇಮಾವತಿ, ಪದ್ಮ, ವರಲಕ್ಷ್ಮಿ, ವಿಜಯ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಉಸ್ತಾದ್ ಯಾಲಕ್ಕಿಗೌಡರ ಕುಟುಂಬವರ್ಗ, ಕೆ.ಜಿ. ಕೊಪ್ಪಲು.

ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್(ರಿ)

19/2ಎ9, ಬೋಗಾದಿ 2ನೇ ಹಂತ, ಮೈಸೂರು – 570026

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಸುಶೀಲಾ ನಾರಾಯಣ್

(ಶ್ರೀಯುತ ದಿ॥ ಜಿ.ಎಲ್.ನಾರಾಯಣ್ ರವರ ಧರ್ಮಪತ್ನಿ) ಹಾಗೂ ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್ (ರಿ), ಮೈಸೂರು ಇದರ ಧರ್ಮದರ್ಶಿಗಳು.

ಇವರು ದಿನಾಂಕ: 26–01–2025ನೇ ಭಾನುವಾರದಂದು ದೈವಾಧೀನರಾದರೆಂದು ತಿಳಸಲು ವಿಷಾದಿಸುತ್ತೇವೆ. ದಿನಾಂಕ: 27–01–2025ನೇ ಸೋಮವಾರ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿತು. ಮೃತರು ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿರುತ್ತಾರೆ. ಮೃತರ ಆತ್ಮಕ್ಕೆ ಶಾಂತಿ ಹಾಗೂ ಕುಟುಂಬ ವರ್ಗಕ್ಕೆ ಈ ದುಃಖವನ್ನು ಭರಿಸಲು ಭಗವಂತನು ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್ (ರಿ), ಮೈಸೂರು
ಆಡಳಿತ ಮಂಡಳಿ ಹಾಗೂ ಸಿಬ್ಬಂದಿವರ್ಗ

ಜೆಎಸ್‌ಎಸ್ ಮಹಾವಿದ್ಯಾಪೀಠ




ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ (ನಿ)

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿನಿಲಯ
ಮಾರುತಿ ದೇವಸ್ಥಾನದ ರಸ್ತೆ, ಗಂಗೋತ್ರಿ ಬಡಾವಣೆ, ಮೈಸೂರು–570009

ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಸಮಾವೇಶದ ಆಹ್ವಾನ ಪತ್ರಿಕೆ

ದಿನಾಂಕ: 29/01/2025 ಬುಧವಾರ ಬೆಳಗ್ಗೆ: 11ಕ್ಕೆ, ಸ್ಥಳ : ಅಲ್ಲಮಪ್ರಭು ಸಭಾಂಗಣ (ಶಾಲೆಯ ಆವರಣ)

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಶಿಕ್ಷಣ ಸಮುಚ್ಚಯ, ಸುತ್ತೂರು ಶ್ರೀಕ್ಷೇತ್ರ ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನಾಧೀಶ್ವರರಾದ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರು

ಸುತ್ತೂರು ಶ್ರೀಕ್ಷೇತ್ರ, ಇವರ ಕೃಪಾಶೀರ್ವಾದಗಳೊಂದಿಗೆ

ದಿವ್ಯ ಸಮ್ಮುಖ

ಶ್ರೀ ಸಿದ್ದಮಲ್ಲಸ್ವಾಮಿಗಳು
ನೀಲಕಂಠಸ್ವಾಮಿ ಮಠ, ಮೈಸೂರು

ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮಿಗಳು,
ಹಲವಾರ ಮಠ, ಮುಡಕನಪುರ

ಅಧ್ಯಕ್ಷತೆ

ಶ್ರೀ ಎಲ್.ರೇವಣ್ಣಸಿದ್ದಯ್ಯ ಐ.ಪಿ.ಎಸ್
ಪೋಲೀಸ್ ಮಹಾನಿರ್ದೇಶಕರು(ನಿ)
ಅಧ್ಯಕ್ಷರು, ಜೆಎಸ್‌ಎಸ್ ಪ್ರ.ನಿ.ಹಿ.ವಿ. ಸಂಘ, ಮೈಸೂರು

ಸನ್ಮಾನಿತರು

ಡಾ. ಸಿ ಮುದ್ದವೀರಪ್ಪ
ವಿಶ್ರಾಂತ ಪ್ರಾಧ್ಯಾಪಕರು, ಎಸ್‌ಜೆಸಿಇ, ಮೈಸೂರು

ಡಾ. ಎಸ್ ದಿನಕರ್, ಎಂಬಿಬಿಎಸ್, ಶಿವಮೊಗ್ಗ

ಡಾ. ಎಸ್ ಮಹದೇವಯ್ಯ
ವಿಶ್ರಾಂತ ಪ್ರಾಂಶುಪಾಲರು,
ಜೆಎಸ್‌ಎಸ್ ಮಹಿಳಾ ಕಾಲೇಜು, ಮೈಸೂರು

ಡಾ. ಕೆ ಆರ್ ಮಲ್ಲಿಕಾರ್ಜುನಸ್ವಾಮಿ,
ಪ್ರಧಾನ ವಿಜ್ಞಾನಿ, ತರಕಾರಿ ಬೆಳೆಗಳ ವಿಭಾಗ, ಭಾರತೀಯ ಬೆಳೆಗಳ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು

ಶ್ರೀ ಎಲ್ ಲಕ್ಷ್ಮಿನಾರಾಯಣಚಾರ್
ವಿಶ್ರಾಂತ ವಾಣಿಜ್ಯ ತೆರಿಗೆ ಅಧಿಕಾರಿ, ಮೈಸೂರು

ಡಾ. ಡಿ ಸಿ ಚಂದ್ರಶೇಖರ್, ಎಂಎಸ್ಸಿ, ಪಿಹೆಚ್‌ಡಿ
ವಿಶ್ರಾಂತ ಜಂಟಿ ನಿರ್ದೇಶಕರು,
ಪ್ರಾದೇಶಿಕ ರೇಷ್ಮೆ ಸಂಶೋಧನಾ ಕೇಂದ್ರ, ಚಾಮರಾಜನಗರ

ಡಾ. ಡಿ ಎಸ್ ಸದಾಶಿವಮೂರ್ತಿ
ವಿಶ್ರಾಂತ ಪ್ರಾಧ್ಯಾಪಕರು,
ಜೆಎಸ್‌ಎಸ್ ಕಾಲೇಜು, ಮೈಸೂರು

ಶ್ರೀ ಪುಟ್ಟಣ್ಣ,
ವಿಶ್ರಾಂತ ಅಬಕಾರಿ ಜಿಲ್ಲಾಧಿಕಾರಿ, ಮೈಸೂರು

ತಮಗೆ ಆತ್ಮೀಯ ಸ್ವಾಗತ — ಆಡಳಿತ ಮಂಡಳಿ